[MR. DEPUTY SPEAKER in the Chair]

BUDGET ESTIMATES FOR 1970-71

General Discussion—*Debate Continued.*

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, 1970-71 ನೇ ವರ್ಷದ ಆಯವ್ಯಯದ ಬಗ್ಗೆ ನಿನ್ನೆ ದಿನ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಸರ್ಕಾರದವರು ಈಗ ಪ್ರಜಾಪ್ರಭುತ್ವವನ್ನು ನಾವು ನಡೆಸುತ್ತಿದ್ದೇವೆ, ಈ ರಾಜ್ಯದಲ್ಲಿ ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಅನೇಕ ಕಾರ್ಯ ಕ್ರಮಗಳನ್ನು ಹಾಕಿಕೊಂಡು ಮತ್ತು ಪಾಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಕೆಲಸಮಾಡುತ್ತಾ ಬಂದಿದ್ದೇವೆಂದು ಹೇಳುತ್ತಾ ಇದ್ದಾರೆ. ಕಳೆದ ಎರಡು ದಶಕಗಳಿಂದ ಸರ್ಕಾರದಲ್ಲಿ ನಡೆದಿರುವ ಕೆಲಸಕಾರ್ಯಗಳ ಬಗ್ಗೆ ಅವಲೋಕನಮಾಡಿ ನೋಡಿದರೆ ಏನು ಗುರಿಯನ್ನು ಇವರು ಮುಟ್ಟಬೇಕಾಗಿತ್ತೋ ಅದನ್ನು ಮುಟ್ಟುವುದಕ್ಕಾಗುತ್ತಾ ಇಲ್ಲ ಎಂಬುದಾಗಿ ನಿನ್ನೆ ಅನೇಕರು ಮಾತನಾಡುತ್ತಾ ಹೇಳಿದ್ದಾರೆ ಇವತ್ತು ಇವರು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಮತ್ತು ಪಂಚಾಯಿತಿ ಯೋಜನೆಗಳಲ್ಲಿ ಅಳವಡಿಸಿರತಕ್ಕ ಕೆಲಸಗಳಿಗೆಲ್ಲಾ ಹಣ ತೊಡಗಿಸಿದ್ದರಲ್ಲಿ ಯಾವ ರೀತಿ ಅಪವ್ಯಯವಾಗಿದೆ ಎಂಬ ಬಗ್ಗೆ ಸಕಾರಣವಾಗಿ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಸರ್ಕಾರದ ವಲಯದಲ್ಲಿ ನಡೆಯುವ ಕೈಗಾರಿಕೆಗಳಿಗೆ ಸರ್ಕಾರದವರು ಯೋಜನಾಬದ್ಧವಾಗಿ, ಅದಕ್ಕೆ ಸಹಾಯಕವಾದ ರೀತಿಯಲ್ಲಿ ಹಣ ತೊಡಗಿಸಿರುವ ಕಾರ್ಯದಲ್ಲಿ ಯಾವರೀತಿ ಹಣ ದುರ್ವ್ಯಯವಾಗಿದೆ, ಅವ್ಯವಹಾರ ನಡೆದಿದೆ ಎಂದು ಸಾಕ್ಷೀಭೂತವಾಗಿ ಹೇಳಬೇಕಾದರೆ ನಮ್ಮ ಭಾಗವಲ್ಲಿ ಸರ್ಕಾರದ ವಲಯದಲ್ಲಿ ನಡೆಯುತ್ತಿರುವ ರೇಷ್ಮೆ ಫಿಲೇಚರ್ ಏನಿದೆಯೋ ಅದರಲ್ಲಿ ಸರ್ಕಾರದವರು ಹಾಕಿರುವ ಬಂಡವಾಳ, ದಿನಚರಿ ವ್ಯವಹಾರಕ್ಕೆ ಬೇಕಾದಂಥ ಬಂಡವಾಳ, ಕೆಳ ಹಂತದಿಂದ ಮೇಲಿನ ಹಂತದವರೆಗೆ ಕೂಡ ನೋಡಿದರೆ, ಅಲ್ಲಿರತಕ್ಕ ಆಡಳಿತವರ್ಗ ಹಣವನ್ನು ಹಂಚಿಕೊಳ್ಳುವ ಕೆಲಸದಲ್ಲಿ ಮತ್ತು ಅಲ್ಲಿಗೆ ಬರತಕ್ಕ ಕಚ್ಚಾಪದಾರ್ಥಗಳನ್ನು ದುರ್ವಿನಿಯೋಗ ಮಾಡುವುದರಲ್ಲಿ ಯಶಸ್ವಿಯಾಗಿ ಪ್ರತಿವರ್ಷವೂ ಸುಮಾರು 30ರಿಂದ 40 ಲಕ್ಷರೂಪಾಯಿಗಳವರೆಗೆ ನಷ್ಟವಾಗಿದೆಯೆಂಬುದನ್ನು ಹೋದ ವರ್ಷದಿಂದ ನೋಡುತ್ತಿದ್ದೇನೆ. ಖಾಸಗೀ ವಲಯಗಳಲ್ಲಿ ನಡೆಯುವ ಕೈಗಾರಿಕೆ ಕೆಲಸಗಳ ಬಗ್ಗೆ ಈ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಮತ್ತೆ ಈ ಸಂಘ ಸಂಸ್ಥೆಗಳಿಗೆ ಬಂಡವಾಳ ಕೊಟ್ಟು ಹಣದ ಸಹಾಯಮಾಡಿರುವುದರಿಂದ ಅವುಗಳ ಮೂಲಕ ಸಣ್ಣ ಪುಟ್ಟ ರೈತರಿಗೆ ಸಹಾಯಮಾಡತಕ್ಕ ಕೆಲಸದಲ್ಲಿ ತೊಡಗಿರುವ ಬಹಳ ಪ್ರಾಮುಖ್ಯವಾದ ಸಂಘಗಳು ಅಂದರೆ, ಮಾರ್ಕೆಟಿಂಗ್ ಮತ್ತು ಪ್ರೋಸೆಸಿಂಗ್ ಸಂಘಗಳು. ನಮ್ಮ ತಾಲ್ಲೂಕಿನಲ್ಲ ಇರತಕ್ಕ ಮಾರ್ಕೆಟಿಂಗ್ ಸೊಸೈಟಿಯಲ್ಲಿ ನಾನು ನಿನ್ನೆ ಹೇಳಿದ ಹಾಗೆ ಚುನಾಯಿತರಾಗಿ ಬರತಕ್ಕವರು ತಮ್ಮ ಗುಂಪಿನವರು ತಮ್ಮ ಪಕ್ಷದವರು ಚುನಾಯಿತರಾಗುವಂತೆ ಮಾಡಿ, ಚುನಾಯಿತರಾದವರಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ಚುನಾಯಿಸಿ, ಅವರು ಕೇಳಿದಂಥ ಅಧಿಕಾರಿಗಳನ್ನು, ಮತ್ತು ಅವರಿಗೆ ಬೇಕಾದಂಥ ಇಂಟರ್‌ನಲ್ ಆಡಿಟರುಗಳನ್ನು ಹಾಕಿಕೊಂಡು ಲೆಕ್ಕಪತ್ರಗಳನ್ನು ಮೊದಲಿನಿಂದ ಕೊನೆಯವರೆಗೂ ಬೇರೆ ರೀತಿಯಲ್ಲಿ ಬರೆಸಿ ಅದರ ಸಾಮಾನ್ಯ ಸಭೆಗೆ ಆಡಳಿತ ವರ್ಗದ ವರದಿಯನ್ನು ಕೊಟ್ಟು ಅವರು ವಾರ್ಷಿಕ ಸಮಾರಂಭಗಳನ್ನು ಮಾಡಿರತಕ್ಕ ಸನ್ನಿವೇಶಗಳು ಅನೇಕವಿವೆ.

ಈ ರೀತಿಯಾದಂಥ ಹಣದ ದುರ್ವಿನಿಯೋಗ ಮಾಡಿ ತಾವು ಏನು ಗುರಿಯನ್ನು ಇಟ್ಟುಕೊಂಡು ಸುಖೀ ರಾಜ್ಯದತ್ತ ನಡೆಯಬೇಕು ? ಎರಡು ದಶಕಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅದರಲ್ಲಿ ಹೆಚ್ಚು ಭಾಗದ ಹಣ ದುರ್ವಿನಿಯೋಗವಾಗಿದೆ. ಅವರ ಸ್ವಾರ್ಥಕ್ಕೆ ಮತ್ತು ಸ್ವಾಭಿಮಾನಕ್ಕೆ ಆ ಹಣವನ್ನು ಹಂಚಿಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ರಾಜ್ಯದಲ್ಲಿ ಕೃಷಿಯಲ್ಲಿ ಒಂದು ಹಸಿರು ಕ್ರಾಂತಿ ನಡೆಸಿ ಅದರ ಮುಖಾಂತರ ಹೊಸ ಹೊಸ ವಿಧಾನಗಳನ್ನು ಉಪಯೋಗಿಸಿ ಆಹಾರದಲ್ಲಿ ಸ್ವಾವಲಂಬನೆ ಸಾಧಿಸತಕ್ಕ ಘಟ್ಟದಲ್ಲಿ ಇದ್ದೇವೆ ಎಂದು ಮಾನ್ಯ ಮಂತ್ರಿಗಳು ಭಾಷಣದಲ್ಲಿ ಹೇಳಿಕೊಂಡಿದ್ದಾರೆ. ನಿಜ, ಈಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿದ್ದಾರೆ. ದೊಡ್ಡ ನೀರಾವರಿ ಯೋಜನೆಗಳಿಂದ ಯಾವ ರೀತಿ ಫಲಗಳನ್ನು ಪಡೆದಿದ್ದಾರೆ ಎಷ್ಟು ಎಕರೆಗಳನ್ನು ಹೆಚ್ಚಿಗೆ ನೀರಾವರಿ ಮಾಡಿದ್ದಾರೆ ಎನ್ನುವ ಬಗ್ಗೆ ಅವರು ಹೆಚ್ಚಿನ ರೀತಿಯಲ್ಲಿ ಉತ್ಪ್ರೇಕ್ಷೆಯ ಮಾತನ್ನು ಆಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಲ್ಲಿ ಇಂಜಿನೀಯರ ತಜ್ಞರಿಂದ ತಯಾರಾದಂಥ ಕೆಲವು ಅಂದಾಜುಗಳನ್ನು ಕೆಲಸ ಪ್ರಾರಂಭವಾದ ಮೇಲೆ ಏನು ಕಾರಣಗಳಿಂದಲೋ ಆ ಕೆಲಸಗಳನ್ನು

ಮತ್ತೊಮ್ಮೆ ಪುನರ್ವಿಮರ್ಶೆ ಮಾಡುವಂಥದ್ದು ನಡೆಯುತ್ತಿದೆ. ನಮ್ಮ ಭಾಗದಲ್ಲಿ ಒಂದು ಉದಾಹರಣೆಯನ್ನು ಹೇಳಬಲ್ಲೆ. ನಮ್ಮ ಭಾಗದಲ್ಲಿ 1952 ರಲ್ಲಿ ಒಂದು ಮಧ್ಯಮ ತರಗತಿಯ ನೀರಾವರಿ ಯೋಜನೆಯು 26 ಲಕ್ಷ ರೂಪಾಯಿಗಳಿಗೆ ಮಂಜೂರು ಆಗಿ, ಕೆಲಸ ಪ್ರಾರಂಭ ಮಾಡಿದರು. ಕೆಲಸ ಪ್ರಾರಂಭವಾದ ಸ್ವಲ್ಪ ದಿನ ಆದಮೇಲೆ ಅದನ್ನು ಪುನರ್ ವಿಮರ್ಶೆಮಾಡಬೇಕು ಎಂದು ಇಂಜಿನೀಯರು ಕೊಟ್ಟಂಥ ಅವರ ರಿಪೋರ್ಟಿನ ಮೇಲೆ 40 ಲಕ್ಷ ರೂಪಾಯಿಗಳಿಗೆ ಮಂಜೂರು ಮಾಡಿದರು. ಸ್ವಲ್ಪ ದಿನ ಕೆಲಸ ನಡೆದ ಮೇಲೆ ಅಂದಾಜನ್ನು ಮೂರನೇ ಬಾರಿ ಪುನರ್ವಿಮರ್ಶೆ ಮಾಡಿ 98 ಲಕ್ಷ ರೂಪಾಯಿಗಳಿಗೆ ಏರಿಸಿ ಕೆಲಸವನ್ನು ಮಾಡಿ ಮುಗಿಸಿದರು. ಹಾಗೆ ಪುನರ್ವಿಮರ್ಶೆ ಮಾಡಿದಂಥ ಅಂದಾಜಿನಲ್ಲಿ ಆಗತಕ್ಕ ಅಚ್ಚುಕಟ್ಟು ಅವರ ಲೆಖ್ಖದ ಪ್ರಕಾರ ನಾಲ್ಕು ಸಾವಿರ ಎಕರೆಗಳು ಇದ್ದರೂ ಕಳೆದ ಮೂರು ನಾಲ್ಕು ವರ್ಷಗಳಿಂದ ಪ್ರಾಜೆಕ್ಟಿನಿಂದ ನೀರನ್ನು ಪಡೆಯತಕ್ಕದ್ದು ಎರಡೂವರೆ ಸಾವಿರ ಎಕರೆ ಮಾತ್ರ. ಒಂದು ಒಂದೂವರೆ ಸಾವಿರ ಎಕರೆಗೆ ನೀರು ಕೊಡಲಿಕ್ಕೆ ಆಗದೆ ಅದು ಖುಷ್ಕೀ ಜಮೀನಾಗಿ ವ್ಯವಸಾಯಮಾಡತಕ್ಕ ಪರಿಸ್ಥಿತಿ ಇದೆ. ತಜ್ಞರ ಅಭಿಪ್ರಾಯದ ಆಧಾರದ ಮೇಲೆ ಕೊಡತಕ್ಕ ರಿಪೋರ್ಟಿಗೆ ಒಮ್ಮೆ ಮಂಜೂರಾತಿ ಕೊಟ್ಟ ಮೇಲೆ ಅನೇಕ ಸಮಯದಲ್ಲಿ ಮತ್ತೊಮ್ಮೆ ತಜ್ಞರ ರಿಪೋರ್ಟಿನ ಮೇಲೆ ಪುನರ್ವಿಮರ್ಶಿತ ಅಂದಾಜು ಮಾಡುವುದನ್ನು ನೋಡಿದರೆ, ಕಂಟ್ರಾಕ್ಟುದಾರರಿಗೆ ಸಹಾಯ ಮಾಡುವುದು ಮತ್ತು ಹಣವನ್ನು ಹಂಚಿಕೊಳ್ಳುವುದರಲ್ಲಿ ನಿರತರಾಗುವುದು ಕಂಡು ಬರುತ್ತದೆ. ಹೀಗಾಗಿ ಹದಿನೈದು ವರ್ಷಗಳಾದರೂ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳ ಪೈಕಿ ಒಂದನ್ನೂ ಮುಗಿಸದೆ ಇರುವ ಪರಿಸ್ಥಿತಿಯನ್ನು ನಮ್ಮ ರಾಜ್ಯದಲ್ಲಿ ತಂದಿಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ವ್ಯವಸಾಯಕ್ಕೆ ಹೆಚ್ಚಿನ ರೀತಿಯಲ್ಲಿ ನೀರಾವರಿ ಬಾವಿಗಳನ್ನು ಕೊಟ್ಟಿದ್ದೇವೆ, ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆ. ಹೊಸ ಹೊಸ ವಿಧಾನಗಳನ್ನು ಬಳಸಿ ಹೆಚ್ಚಿನ ಸ್ವಾವಲಂಬನೆ ಮಾಡುವುದಕ್ಕೆ ಪ್ರಯತ್ನ ನಡೆಸಿದ್ದೇವೆ ಎಂದು ಹೇಳುತ್ತಾರೆ. ಅದನ್ನು ಸಂತೋಷದಿಂದ ಒಪ್ಪುತ್ತೇನೆ. ಆದರೆ ರೈತನು ವ್ಯವಸಾಯ ಮಾಡಿ ಅವನಿಗೆ ಆ ವ್ಯವಸಾಯದಿಂದ ಬರತಕ್ಕ ಬೆಳೆಯ ಬೆಲೆ ಏನಿದೆ ಎನ್ನುವುದನ್ನು ನೋಡಬೇಕು. ಈವೊತ್ತು ಒಂದು ರೂಪಾಯಿ ಕೂಲಿ ಇದ್ದದ್ದು ಮೂರು ರೂಪಾಯಿ, ಐದು ರೂಪಾಯಿಗಳವರೆಗೆ ಕೂಲಿ ಕೊಡುವ ಪರಿಸ್ಥಿತಿ ಉಂಟಾಗಿದೆ. ರಾಸಾಯನಿಕ ಗೊಬ್ಬರದ ಬೆಲೆಯನ್ನು ಪ್ರತಿವರ್ಷವೂ ಸರಕಾರ ಮತ್ತು ಕೇಂದ್ರ ಸರಕಾರ ಹೆಚ್ಚಿಸುತ್ತಾ ಹೋಗಿ ಅದು ಮುಗಿಲು ಮುಟ್ಟುವ ಪರಿಸ್ಥಿತಿ ಬಂದಿದೆ. ಮತ್ತು ವ್ಯವಸಾಯಕ್ಕೆ ಬಳಸತಕ್ಕ ಇತರ ಕೈಗಾರಿಕೆಗಳಿಂದ ತಯಾರಾಗತಕ್ಕ ವಸ್ತುಗಳ ಬೆಲೆಯನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲದೆ ಅದೂ ಮುಗಿಲು ಮುಟ್ಟಿರತಕ್ಕ ಸ್ಥಿತಿ ಇದೆ. ಹೀಗಿರುವಾಗ ಹೆಚ್ಚು ರಾಸಾಯನಿಕ ಗೊಬ್ಬರವನ್ನು ಕೊಂಡುಕೊಂಡು ಹೆಚ್ಚಿನ ಕೂಲಿ ಕೊಟ್ಟು ವ್ಯವಸಾಯ ಮಾಡಿ ಬೆಳೆದಂಥ ಬೆಳೆಯ ಪರಿಸ್ಥಿತಿ ಏನಾಗಿದೆ? ಸರ್ಕಾರದವರು ಕಬ್ಬು ಬೆಳೆಯುವ ವ್ಯವಸಾಯ ಮಾಡುತ್ತಾ ಇಲ್ಲ. ಒಂದು ಟನ್ ಕಬ್ಬಿಗೆ 50 ರೂಪಾಯಿಯಿಂದ 75 ರೂಪಾಯಿಗಳವರೆಗೆ ಮಾರಾಟ ಮಾಡುವುದು ಕಷ್ಟವಾಗಿದೆ. ಸಕ್ಕರೆ ಕಾರ್ಖಾನೆಗಳಿಗಾಗಿ ವ್ಯವಸಾಯ ಮಾಡಿ ಬೆಳೆದಿರತಕ್ಕ ಕಬ್ಬನ್ನು ಬಿಟ್ಟರೆ, ನೀರಾವರಿ ಬಾವಿಯಿಂದ ಅಗಲ, ನಾಲೆಯ ಆಶ್ರಯದಲ್ಲಿ ಕಬ್ಬನ್ನು ಬೆಳೆಯತಕ್ಕ ರೈತರ ಸ್ಥಿತಿ ಏನಾಗಿದೆ? ಆ ಕಬ್ಬಿನಿಂದ ಬೆಲ್ಲ ಮಾಡಿದರೆ ಆ ಬೆಲ್ಲವನ್ನು 50 ರೂಪಾಯಿಗೆ ಮಾರಾಟ ಮಾಡುವ ಪರಿಸ್ಥಿತಿ ಉಂಟಾಗಿದೆ. ರೈತನಿಗೆ ಸಪೋರ್ಟ್ ಮಾಡುವ ಬೆಲೆಯನ್ನು ಸರಕಾರದವರು ನಿಗದಿ ಮಾಡುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಆಹಾರ ಪದಾರ್ಥಗಳ ಬೆಲೆ ನೋಡಿದರೆ ಮಾಡತಕ್ಕ ಖರ್ಚನ್ನು ಸರಿತೂಗಿಸಿ ಆತ ತನ್ನ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಕಾಗುವಷ್ಟು ಬೆಲೆ ಬರತಕ್ಕ ರೀತಿಯಲ್ಲಿ ಆಹಾರ ಪದಾರ್ಥಗಳ ಬೆಲೆ ಸಿಕ್ಕುತಾ ಇಲ್ಲ. ಭತ್ತಕ್ಕೆ ಈವೊತ್ತು 45-50 ರೂಪಾಯಿ ಬೆಲೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೂ ಕೂಡ ಆತನು ಬೆಳೆಯತಕ್ಕ ಖರ್ಚಿನ ಸ್ಥಿತಿಯನ್ನು ನೋಡಿದರೆ ಸರಕಾರದವರು 75 ರೂಪಾಯಿಯಿಂದ 100 ರೂಪಾಯಿಗಳವರೆಗೆ ಬೆಲೆಯನ್ನು ಗೊತ್ತುಮಾಡಿದರೆ ಮಾತ್ರ ರೈತವರ್ಗದವರು ಬದುಕಬಹುದು. ರೈತರು ಪಡತಕ್ಕ ಕಷ್ಟ ಸಾರ್ಥಕವಾದೀತು ಎಂದು ಈ ಸಮಯದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಮತ್ತು ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಉಪಯೋಗಿಸಬೇಕು ಎಂದು ಸರಕಾರ ಈಗಾಗಲೇ ತೀರ್ಮಾನವನ್ನು ಕೈಗೊಂಡಿದೆ. ಅದೊಂದು ಸಂತೋಷದ ವಿಷಯ. ಆದರೆ ಎಷ್ಟು ಮಟ್ಟಿಗೆ ಅದು ಕಾರ್ಯಗತವಾಗಿದೆ ಎನ್ನುವ ಬಗ್ಗೆ ನಾನು ಹೇಳಬೇಕು ಎಂದರೆ ಪ್ರಜಾಪ್ರಭುತ್ವ ಒಂದು ಈಗಾಗಲೇ ಎರಡು ದಶಕಗಳನ್ನು ಕಳೆದಿದ್ದೇವೆ. ನನ್ನ ಅನುಭವದಲ್ಲಿ ಮೊದಲನೇ ದಶಕದಲ್ಲಿ ಸರಕಾರಿ ಕಚೇರಿಗಳಿಗೆ ಮಾನ್ಯ ಮಂತ್ರಿಗಳು ಬಂದಂಥ ಸಮಯದಲ್ಲಿ ಅವರನ್ನು ಭೇಟಿ ಮಾಡಿ ಸಾರ್ವಜನಿಕರು ಬಂದು ಅವರ ಕಷ್ಟ ಸುಖಗಳನ್ನು ಹೇಳಿಕೊಂಡು ಮನವಿಗಳನ್ನು ಕೊಡತಕ್ಕಂಥ ಸಂಪ್ರದಾಯ ಇತ್ತು. ಎರಡನೇ ದಶಕದಲ್ಲಿ ಅದು ಏನೋ ಕಡಿಮೆ ಆಗುತ್ತಾ ಇದೆ.

(ಶ್ರೀ ಎಸ್. ಪುಟ್ಟಸ್ವಾಮಿ)

ಕಚೇರಿಗಳಿಗೆ ಬಂದ ಸಾಮಾನ್ಯ ರೈತ ಮತ್ತು ಸಾಮಾನ್ಯ ಮನುಷ್ಯ ಮನವಿಯನ್ನು ಸಲ್ಲಿಸಿ ಕೆಲಸ ಮಾಡಿಕೊಂಡು ಹೋಗತಕ್ಕ ಪರಿಸ್ಥಿತಿ ಪ್ರಜಾಪ್ರಭುತ್ವದಲ್ಲಿ ಉಳಿದಿಲ್ಲ ಎಂದು ಹೇಳಿದರೆ ಬಹಳ ಜನರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈವೊತ್ತು ಸರಕಾರ ಸಾರ್ವಜನಿಕರಿಂದ ದೂರವಾಗುತ್ತಾ ಇದೆ. ಅವರಿಗೆ ಇದ್ದ ನಿಕಟ ಸಂಬಂಧ ಕಿತ್ತು ಹೋಗುತ್ತಾ ಇದೆ. ಅದಕ್ಕೆ ಕಾರಣ ಆಡಳಿತಕ್ಕೆ ಸಂಬಂಧಪಟ್ಟ ವ್ಯವಸ್ಥೆ ಸರಿಯಿಲ್ಲ. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ಮತ್ತು ಒಬ್ಬ ಸಮಾನ್ಯ ಮನುಷ್ಯ ಅಥವಾ ರೈತ ಬಂದು ಕೆಲಸಗಳನ್ನು ಮಾಡಿಸಿ ಕೊಂಡು ಹೋಗತಕ್ಕ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಸರಕಾರ ಇನ್ನೂ ಮನಸ್ಸು ಮಾಡಿಲ್ಲ. ಇಂದು ಪ್ರಜಾಪ್ರಭುತ್ವದ ಹೆಸರಿನಲ್ಲಿ ಸುಖೀ ರಾಜ್ಯದ ಹೆಸರಿನಲ್ಲಿ ಅವರಿಗೆ ಬೇಕಾದಂಥ ಆಡಳಿತವನ್ನು ನಡೆಸಿ ಬೇಕಾದವರಿಗೆ ಸಹಾಯಮಾಡತಕ್ಕ ಕೆಲಸ ನಡೆದಿದೆ. ಸಾರ್ವ ಜನಿಕರ ಮತ್ತು ಸಾಮಾನ್ಯ ಮನುಷ್ಯನ ಕ್ಷೇಮ ಲಾಭದ ಕೆಲಸ ನಡೆದಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳಿ ಮತ್ತು ಇನ್ನೊಂದು ವಿಷಯವನ್ನು ಕೊನೆಯದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈವೊತ್ತು ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದೇವೆ. ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ನಾವು ಹೆಜ್ಜೆ ಇಡುತ್ತಾ ಇದ್ದೇವೆ. ಆದರೆ ಪ್ರಜಾಪ್ರಭುತ್ವ ಬೆಳೆಯುವುದಕ್ಕೆ ಏನೂ ಮಾಡಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತು ರಾಜ್ಯ ಸರಕಾರ ಪೋಲೀಸಿನ ರಾಜ್ಯವಾಗಿದೆ. ಹೆಚ್ಚು ಕಾಮಗಾರಿಗಳನ್ನು ಕೊಟ್ಟು ಹಣ ಸಂಪಾದಿಸಿರತಕ್ಕ ಮತ್ತು ಕಂಟ್ರಾಕ್ಟು ದಾರರಿಂದ ಮತ್ತು ಪೋಲಿಸಿನವರಿಂದ ನಮ್ಮ ರಾಜ್ಯ ನಡೆಯುತ್ತಾ ಇದೆ ಎಂದು ಶಾಸನ ಸಭೆಯ ಸದಸ್ಯರಾಗಿರತಕ್ಕವರಿಗೆ ಭಾಸವಾಗುತ್ತಿರುವಾಗ ಸಾಮಾನ್ಯ ಜನತೆಗೆ ಎಷ್ಟರಮಟ್ಟಿಗೆ ಅನುಕೂಲಗಳು ಮುಟ್ಟಬಹುದು ಎಂದು ತಮ್ಮ ಮೂಲಕ ನಿವೇದನೆ ಮಾಡಿಕೊಂಡು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಇಟ್ಟಂಥ 1970–71 ನೇ ಸಾಲಿನ ಆಯವ್ಯಯದ ಮೇಲೆ ನನಗೆ ತಿಳಿದ ಕೆಲವು ಮಾತುಗಳನ್ನು ಆಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ತಮಗೆ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಮಾನ್ಯ ಅಧ್ಯಕ್ಷರೇ, ಈ ದಿವಸ ಆರ್ಥಿಕ ಮಂತ್ರಿ ಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು 1970–71ನೇ ಸಾಲಿನ ಆಯವ್ಯಯಪಟ್ಟಿಯನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇದನ್ನು ಅನುಮೋದಿಸಿ ನಾಲ್ಕು ಮಾತುಗಳನ್ನು ಹೇಳಲಪೇಕ್ಷಿ ಸುತ್ತೇನೆ. ಆರ್ಥಿಕ ಮಂತ್ರಿಗಳು ಕಳೆದ 5 ವರ್ಷಗಳಿಂದಲೂ ಆಯವ್ಯಯ ಪಟ್ಟಿಯನ್ನ ಮಂಡನೆ ಮಾಡುತ್ತಾ ಇದ್ದಾರೆ, ಇದನ್ನು ನಾವು ನೋಡಿದರೆ ಪ್ರತಿ ವರ್ಷವೂ ಅವರು ಪ್ರಗತಿ ಪಥದಲ್ಲಿ ಹೆಜ್ಜೆ ಇಡತಕ್ಕ ಬುದ್ಧಿವಂತಿಕೆಯನ್ನು ತೋರಿಸಿದ್ದಾರೆ ಎಂದು ಹೇಳಬಹುದು. ಒಂದು ರಾಜ್ಯದ ಆಯ ವ್ಯಯ ಪಟ್ಟಿಯನ್ನು ಸರಿತೂಗಿಸಿ ಆ ರಾಜ್ಯವನ್ನು ಪ್ರಗತಿದಾಯಕವಾಗಿ ಮುಂದುವರಿಸಿಕೊಂಡು ಹೋಗುವುದು ಬಹಳ ದೊಡ್ಡ ಕೆಲಸ, ಇದರಲ್ಲಿ ಆರ್ಥಿಕ ಮಂತ್ರಿಗಳು ತಮ್ಮ ಬುದ್ಧಿವಂತಿಕೆಯನ್ನು ಎಷ್ಟು ಎಷ್ಟು ಜಾಸ್ತಿಯಾಗಿ ತೋರಿಸುತ್ತಾರೆಯೋ ಅಷ್ಟಷ್ಟು ರಾಜ್ಯದ ಪ್ರಗತಿ, ರಾಜ್ಯದ ಜನರ ಕೋರಿಕೆಗಳು ಈಡೇರುತ್ತವೆ. ಇಂತಹ ಒಂದು ಕೆಲಸವನ್ನು ಈ 5 ವರ್ಷದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾಡಿಕೊಂಡು ಬಂದಿದ್ದಾರೆ ಎಂಬುದು ಸೂಕ್ಷ್ಮವಾಗಿ ನೋಡಿದರೆ ಇದರಿಂದ ಗೊತ್ತಾಗುತ್ತದೆ. ಅವರು ಮಂಡಿಸಿರುವ, ಓದಿರತಕ್ಕ ಭಾಷಣ 47 ಪುಟಗಳಿಂದ ಕೂಡಿದೆ. ಕನ್ನಡದಲ್ಲಿ ಓದಿದರು, ಇಂತಹ ಒಂದು ದೊಡ್ಡ ಕೆಲಸವನ್ನೇ ಅವರು ಮಾಡಿದರು ಎಂದು ಬಹಳ ಸಂತೋಷಪಡುತ್ತಾ ಹೇಳಬಹುದು. ಅವರ ಭಾಷೆಯನ್ನು ನೋಡಿದರೆ ಒಳ್ಳೆಯ ವಿಚಾರವನ್ನು ಕೆದಕಿ ಹೇಳತಕ್ಕ ರೀತಿಯಲ್ಲಿ ಅವರು ತರ್ಜುಮೆ ಮಾಡಿದ್ದಾರೆ, ಬಹುಶಃ ಅವರೇ ತರ್ಜುಮೆ ಮಾಡಿರಬೇಕೆಂದು ನಾನು ತಿಳಿದಿದ್ದೇನೆ. ನನಗೆ ತಿಳಿದಮಟ್ಟಿಗೆ ಅವರು ಸಾಹಿತಿಗಳಾಗಿ ಹಿಂದಿನ ದಿನಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ, ಬರೆಯುತ್ತಾ ಇದ್ದರು. ಬಹುಶಃ ರಾಜಕಾರಣದಲ್ಲಿ ಬಿದ್ದಮೇಲೆ ಅದನ್ನು ಕಡಿಮೆ ಮಾಡಿದ್ದರೂ ಮಾಡಿರಬಹುದು. ಮುಂದೂ ಕೂಡ ಅವರು ಇದೇ ರೀತಿಯಲ್ಲಿ ಸಾಹಿತ್ಯವನ್ನು ಬೆಳೆಸಿದರೆ ಅವರಿಂದ ದೊಡ್ಡ ಗ್ರಂಥಗಳು, ಸಾಹಿತ್ಯಗಳು ನಿರ್ಮಾಣ ವಾಗುತ್ತವೆ ಎಂದರೆ ತಪ್ಪಾಗಲಿಕ್ಕಿಲ್ಲ. ಅಂತೂ ಅವರು ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿದ್ದು ಬಹಳ ಒಳ್ಳೆಯದು. 60ನೇ ಇಸವಿಯಿಂದ 70ನೇ ಇಸವಿಯವರೆಗೆ ಒಂದು ದಶಕದ ಚಿತ್ರವನ್ನು ಕೊಡುವಾಗ 4 ಚರಣದಲ್ಲಿ ಅವರು ಹೇಳಿರತಕ್ಕ ಮಾತು ಯಾವಾಗಲೂ ನಾವು ಅನುಭವಿಸಿ

ಹೆಚ್ಚು ಹೆಚ್ಚು ಆಲೋಚನೆ ಮಾಡುವುದಾಗಿದೆ. "ಹಿಂದಕ್ಕೆ ತಿರುಗಿನೋಡಿ. ನಾವು ಸಾಧಿಸಿರುವುದೆಷ್ಟು, ಸಾಧಿಸಲು ಇನ್ನೂ ಉಳಿದಿರುವುದೆಷ್ಟು, ಎಂಬುದರ ಸಿಂಹಾವಲೋಕನ ಮಾಡಲು ಇದು ಸಮಯ. ಮುಂದಕ್ಕೆ ದೃಷ್ಟಿ ಹರಿಸಿ, ಕೆಲವು ಹಿರಿಯ ಗುರಿಗಳನ್ನು ಗೊತ್ತು ಮಾಡುವುದಕ್ಕೂ ಇದು ಸಮಯ, ಸರಿಯಾದ ಮುನ್ನೋಟ ದೊರೆಯಲು ದೃಷ್ಟಿ ಪಥ ಸಮರ್ಪಕವಾಗಿರಬೇಕು, ಹಿಂದಕ್ಕೆ ಒಮ್ಮೆ ಕಣ್ಣು ಹಾಯಿಸುವುದು, ನೇರ ದೃಷ್ಟಿ ಪಡೆಯಲು ನಮಗೆ ನೆರವಾದೀತು" ಎಂಬ ಮಾತುಗಳನ್ನು ಹೇಳಿದ್ದಾರೆ. ಈ ಮಾತುಗಳು ಬಹಳ ಅರ್ಥವುಳ್ಳ ಮಾತುಗಳು. ಹಿಂದೆ ಮಾಡಿದುದನ್ನು ನೋಡಿಕೊಳ್ಳುತ್ತಾ ಇರಬೇಕು, ಮುಂದೆ ಮಾಡಬೇಕಾದಂತಹ ಹಿರಿಯ ಗುರಿ ಏನಿದೆ ಅದರ ಮೇಲೆ ದೃಷ್ಟಿ ಪಥ ಸರಿಯಾಗಿ ಇದ್ದು ಸರಿಯಾದ ದಾರಿಯಲ್ಲಿ ಹೋದರೆ ಏನು ಗುರಿಯನ್ನು ಮುಟ್ಟಬೇಕೆಂದು ಇದ್ದೇವೆಯೋ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅವರು ಹತ್ತು ವರ್ಷದ ಚಿತ್ರವನ್ನು ಇಡುವಾಗ ನಮ್ಮ ಈ ರಾಜ್ಯ ಪ್ರಗತಿಯ ಪಥದಲ್ಲಿ ಹೋಗಿದೆ ಎಂಬುದನ್ನು ಅಂಕಿ ಅಂಶಗಳಿಂದ ದೃಢಪಡಿಸಿಕೊಟ್ಟಿದ್ದಾರೆ. 1960ನೇ ಇಸವಿಯಿಂದ 70ನೇ ಇಸವಿಗೆ ಬರುವಾಗ ಯಾವ ಯಾವ ಪ್ರಗತಿಯಾಗಿದೆ ಎಂಬುದನ್ನು ತಿಳಿಸಿದ್ದಾರೆ. ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಎರಡು ಮೂರು ಪಟ್ಟು ಮುಂದೆ ಬಂದಿದ್ದೇವೆ. ಅದೇ ರೀತಿ ವಿದ್ಯುಚ್ಛಕ್ತಿಯನ್ನು ಪಡೆದ ಪಟ್ಟಣಗಳು ಮತ್ತು ಗ್ರಾಮಗಳಲ್ಲಿ 3–4 ಪಾಲು ಮುಂದೆ ಬಂದಿದ್ದೇವೆ. ಇದೇ ರೀತಿ ಕೃಷಿ ಪಂಪು ಸೆಟ್ಟುಗಳನ್ನು ಕೊಡುವುದರಲ್ಲಿ 2–3 ಪಾಲು ಮುಂದೆ ಬಂದಿದ್ದೇವೆ. ರಾಜ್ಯದ ರಸ್ತೆಯ ಕೆಲಸ ಮಾಡುವುದರಲ್ಲೂ ಕೂಡ ಸಾಧಾರಣ 2–3 ಪಾಲು ಮುಂದೆ ಬಂದಿದ್ದೇವೆ. ಆಹಾರ ಧಾನ್ಯಗಳ ಉತ್ಪಾದನೆಯಲ್ಲೂ ಕೂಡ ಸ್ವಾವಲಂಬಿಗಳಾಗತಕ್ಕ ಪರಿಸ್ಥಿತಿಗೆ ಬಂದಿದ್ದೇವೆ ಎಂಬ ಮಾತನ್ನೂ ಕೂಡ ಹೇಳಿದ್ದಾರೆ. ಯಾವುದೇ ರಾಜ್ಯ ಅಥವಾ ದೇಶ ಉಳಿಯಬೇಕಾದರೆ ಆ ದೇಶದ ಜನತೆಯ ಹೊಟ್ಟೆಯ ಹಸಿವನ್ನು ನೀಗಿಸತಕ್ಕ ಕಡೆಗೆ ಹೆಚ್ಚು ಗಮನವನ್ನು ಹರಿಸದಿದ್ದರೆ ಯಾವ ತತ್ವವಾಗಲಿ ಯಾವ ಬೋಧನೆಯಾಗಲಿ ನಡೆಯುವುದಿಲ್ಲ. ಆದ್ದರಿಂದ ಹಸಿದ ಹೊಟ್ಟೆ ಜ್ವಾಲಾಮುಖಿಯಂತೆ, ಅಂತ ಸಂದರ್ಭದಲ್ಲಿ ಬೋಧನೆಯಾಗಲಿ, ವೇದಾಂತವಾಗಲಿ ಪ್ರಯೋಜನವಿಲ್ಲ. ಹಸಿದ ಹೊಟ್ಟೆ ತುಂಬಿಸತಕ್ಕ ಬಗ್ಗೆ ಪ್ರಯತ್ನ ಅತ್ಯಗತ್ಯ. ಆಹಾರದಲ್ಲಿ ಸ್ವಾವಲಂಬಿಗಳಾಗಬೇಕೆಂಬ ವಿಚಾರದಲ್ಲೂ ಕೂಡ ಈಗ 4–5 ವರ್ಷಗಳಿಂದ ಮಾಡಿರತಕ್ಕ ಕೆಲಸಗಳ ಫಲವಾಗಿ ಈ ವರ್ಷ ಸ್ವಾವಲಂಬಿಗಳಾಗತಕ್ಕ ಪರಿಸ್ಥಿಗೆ ಬಂದಿದ್ದೇವೆ ಎಂದು ಅರ್ಥಿಕ ಮಂತ್ರಿಗಳು ಹೇಳಿರತಕ್ಕದ್ದು ಸಮಾಧಾನದ ವಿಷಯ. ಗಡಿಪ್ರದೇಶದಲ್ಲಿ ಆಗುತ್ತಿರುವ ಕಾಳಸಂತೆ, ಭ್ರಷ್ಟಾಚಾರ ಹೋಗಬೇಕು. ಇಂತಹ ಒಂದು ಸ್ವಾವಲಂಬನೆಯ ಕಾಲದಲ್ಲಿ ಹೋಗಬಹುದು ಎಂದು ನಾನು ನಿರೀಕ್ಷಿಸುತ್ತೇನೆ. ಗ್ರಾಮಾಂತರದಿಂದ ಪಟ್ಟಣಕ್ಕೆ ಬರತಕ್ಕ ಜನಗಳ ಸಂಖ್ಯೆ ಈಗ ಜಾಸ್ತಿಯಾಗುತ್ತಿದೆ ಎಂಬ ಕಳಕಳಿಯನ್ನು ಮಾನ್ಯ ಸಚಿವರು ವ್ಯಕ್ತಪಡಿಸಿದ್ದಾರೆ. ಗ್ರಾಮಾಂತರದಲ್ಲಿ ಯಾವದೇ ಒಂದು ಬೇಸಾಯದ ಕೆಲಸ ಮಾಡಬೇಕಾದರೂ ಅಲ್ಲಿ ಕೃಷಿ ಕೆಲಸಗಾರರು ಸಿಕ್ಕಬೇಕು, ಗ್ರಾಮದಿಂದ ಜನರು ಬಂದು ಪಟ್ಟಣಕ್ಕೆ ಸೇರಿದ ಮೇಲೆ ಇಲ್ಲಿನ ಸೌಲಭ್ಯಗಳು ಗ್ರಾಮಾಂತರದಲ್ಲಿ ಸಿಕ್ಕಲಾರದೆ ಅವರು ಪುನಃ ಗ್ರಾಮಾಂತರಕ್ಕೆ ಹೋಗುವುದಿಲ್ಲ. ಇದರಿಂದ ಗ್ರಾಮದಲ್ಲಿ ನಡೆಯತಕ್ಕ ಕೆಲಸಕಾರ್ಯಗಳಿಗೆ ಬಹಳ ಕಷ್ಟವಾಗುತ್ತಿದೆ ಎಂದು ಹೇಳುತ್ತಾರೆ. ಇದನ್ನು ಸರ್ಕಾರದವರು ತಿಳಿದುಕೊಂಡು ಗ್ರಾಮಾಂತರದಿಂದ ಪಟ್ಟಣಕ್ಕೆ ಜನರು ಬರದ ಹಾಗೆ ಏನು ಉಪಾಯ ಮಾಡಬೇಕೋ ಏನು ತಂತ್ರಮಾಡಬೇಕೋ ಅದನ್ನು ಮಾಡಿ ಅವರೆಲ್ಲರೂ ಗ್ರಾಮಾಂತರದಲ್ಲಿಯೇ ನೆಲಸುವ ಹಾಗೆ ಮಾಡಿದರೆ ಗ್ರಾಮಾಂತರ ಪ್ರದೇಶಗಳು ಹೆಚ್ಚು ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಾದೀತು ಎಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಮಟ್ಟದಲ್ಲಿ ರೈತರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ 3 ವಿಚಾರಗಳನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಿ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕು, ತಾಲ್ಲೂಕು ಸಹಕಾರ ಸಂಘಗಳು ಇವೆ ಅಂತ ಹೇಳಿದ್ದಾರೆ ಇದು ಒಪ್ಪತಕ್ಕ ವಿಚಾರ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಯಾಗಲಿ, ಭೂ ಅಭಿವೃದ್ಧಿ ಬ್ಯಾಂಕಾಗಲಿ, ತಾಲ್ಲೂಕು ಅಭಿವೃದ್ಧಿ ಮಂಡಲಿಯಾಗಲಿ ಸರಿಯಾಗಿ ಕೆಲಸ ಮಾಡಬೇಕು. ಸಹಕಾರ ಸಂಸ್ಥೆಗಳ ವಿಚಾರದಲ್ಲಿ ಕೆಲವು ಕೆಟ್ಟ ವಿಚಾರಗಳನ್ನು ಹೇಳುತ್ತಾರೆ. ಇವು ಬರೀ ನಾಟಕದ ಕಂಪೆನಿಗಳಾಗಬಾರದು, ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಜನರ ಹಿತವನ್ನು ನೋಡಬೇಕು ಎಂದು ಸಚಿವರು ಬೇರೆ ಎಲ್ಲೋ ಒಂದು ಕಡೆಯಲ್ಲಿ ಹೇಳಿದ ಜ್ಞಾಪಕ ಬರುತ್ತದೆ. ಸಹಕಾರ ಸಂಘಗಳಲ್ಲಿ ಬಹಳ ಹಣ ಪೋಲಾಗುತ್ತಿದೆ. ಬೇಕಾದವರಿಗೆ ಕೊಡುತ್ತಾರೆ, ಬಡವರಿಗೆ ಹಣ ಸಿಕ್ಕುವುದಿಲ್ಲ ಎಂಬ ದೂರು ಇಷ್ಟು ವರ್ಷಗಳಿಂದ ಬಂದರೂ ಅದನ್ನು ತಡೆ ಹಿಡಿಯಲಿಕ್ಕೆ ಬೇಕಾದ ಕಾನೂನನ್ನು ಮಾಡಿ ಒಳ್ಳೆಯ ರೀತಿಯಲ್ಲಿ ಮಾಡಲಿಕ್ಕೆ ಇನ್ನಾದರೂ ಸುಧಾರಣೆ ಮಾಡಿ ನಾಟಕದ ಕಂಪನಿಗಳಾಗದ ಹಾಗೆ ನೋಡಿಕೊಂಡರೆ ನಿಜವಾಗಿಯೂ ನಮ್ಮ ನಮ್ಮ ರಾಜ್ಯದಲ್ಲಿ ಜನರಿಗೆ ಹಿತವಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ)

ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯಾಗಬೇಕು, ಸಣ್ಣ ಕಾರಿನ ಯೋಜನೆಯ ವಿಷಯದಲ್ಲೂ ಸಹ ಆಶೆಯನಿಟ್ಟುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಅದಕ್ಕೆ ಕೇಂದ್ರದ ಸಹಾಯ ಬೇಕು ಅಂತ ನಿರೀಕ್ಷೆ ಮಾಡಿದ್ದಾರೆ. ಈ ರೀತಿ ಮಾಡಿದ್ದೇ ಆದರೆ ಅನೇಕ ಜನರ ನಿರುದ್ಯೋಗ ನಿವಾರಣೆಯಾಗಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಆದರಿಂದಾಗಿ ನಮ್ಮ ಆರ್ಥಿಕ ಪರಿಸ್ಥಿತಿ ಕೂಡ ಒಳ್ಳೆಯದಾಗಲಿಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ.

ವೃದ್ಧಾಪ್ಯವೇತನ 4,607 ಜನರಿಗೆ ತಿಂಗಳಿಗೆ 15 ರೂಪಾಯಿಗಳಂತೆ ನೀಡುತ್ತಿದ್ದುದನ್ನು 1-4-1970ರಿಂದ 25 ರೂಪಾಯಿಗಳಿಗೆ ಏರಿಸಿದ್ದೇವೆ ಎಂದು ಹೇಳಿರುವುದು ಬಹಳ ಸಂತೋಷದ ಮಾತು. ವಯಸ್ಸಾಗಿದ್ದು, ಯಾರೂ ದಿಕ್ಕಿಲ್ಲದೆ, ಕೇಳುವವರಿಲ್ಲವೆ ಹೇಳುವವರಿಲ್ಲದೆ ಇರುವ ಕಾಲದಲ್ಲಿ ಸರ್ಕಾರದವರು ಈ ರೀತಿ 25 ರೂಪಾಯಿಗಳಿಗೆ ಏರಿಸಿರುವುದು ಬುದ್ಧಿವಂತಿಕೆ ಎಂದು ಹೇಳಲಿಚ್ಛಿಸುತ್ತೇನೆ.

ಇನ್ನು ಶಿಕ್ಷಣ ವಿಷಯದಲ್ಲಿ ಮಾನ್ಯ ಅರ್ಥಿಕ ಮಂತ್ರಿಗಳು ಬಹಳ ಚೆನ್ನಾಗಿ ಆಲೋಚನೆ ಮಾಡಿ 1970-71ರಲ್ಲಿ ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ 12 ಲಕ್ಷ ರೂಪಾಯಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ 23 ಲಕ್ಷ ರೂಪಾಯಿ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ 21 ಲಕ್ಷ ರೂಪಾಯಿ ಹಿಂದಿನ ವರ್ಷಗಳಿಗಿಂತ ಹೆಚ್ಚಿನ ಗ್ರ್ಯಾಂಟು ಕೊಟ್ಟಿದ್ದಾರೆ. ಯಾವದೇ ಒಂದು ದೇಶಕ್ಕೆ ಒಳ್ಳೆಯದಾಗಬೇಕಾದರೆ ಆ ದೇಶದ ಜನರು ವಿದ್ಯಾವಂತರಾಗಬೇಕು, ಬುದ್ಧಿವಂತರಾಗಬೇಕು, ಜ್ಞಾನವಂತರಾಗಬೇಕು. ಹಾಗಿದ್ದರೆ ಮಾತ್ರ ಆ ದೇಶ ಚೈತನ್ಯವುಳ್ಳ ದೇಶ, ಒಳ್ಳೆಯ ರಸಪೂರ್ಣ ದೇಶವಾಗುತ್ತದೆ. ಇದನ್ನು ಮಾನ್ಯ ಆರ್ಥಿಕ ಮಂತ್ರಿಗಳು ಚೆನ್ನಾಗಿ ತಿಳಿದುಕೊಂಡಿದ್ದಾರೆ ಎಂದು ಹೇಳಲಿಚ್ಛಿಸುತ್ತೇನೆ.

ಕನ್ನಡ ಆಡಳಿತ ಭಾಷೆಯಾಗಬೇಕು ಎಂದು ಹೇಳಿರುವುದನ್ನು ಪುಷ್ಟೀಕರಿಸುತ್ತೇನೆ. ಏಕೆಂದರೆ ಕೇರಳದವ್ರಾಗಲಿ, ತಮಿಳುನಾಡಿನವ್ರಾಗಲಿ ಆಂಧ್ರದವ್ರಾಗಲಿ ಅವರು ಅವರವರ ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿ ಬಹಳ ಚೆನ್ನಾಗಿ ಮುಂದೆ ಬರಲಿಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅಂಥ ಸಂದರ್ಭದಲ್ಲಿ ಕನ್ನಡಿಗರು ಹಿಂದೆ ಬೀಳಬಾರದು. ಹಿಂದೆ ಬಿದ್ದರೆ ಮುಂದೆ ಬರಲಿಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದರಲ್ಲಿ ಎಷ್ಟು ಕೆಲಸವುಂಟೋ ಅದನ್ನು ಮಾಡಲಿಕ್ಕೆ ನಮ್ಮ ಅರ್ಥಿಕಮಂತ್ರಿಗಳು ಮನಸ್ಸು ಮಾಡುತ್ತಾರೆ ಎಂದು ನಂಬಿದ್ದೇನೆ. ಒಂದು ಸಾವಿರ ಟೈಪ್‌ರೈಟರ್ಸ್‌ನ್ನು ಇಷ್ಟರಲ್ಲೇ ತೆಗೆದುಕೊಳ್ಳುವಂತಹ ವಿಚಾರ ಮಾಡಿದ್ದಾರೆ. ಇದು ಬಹಳ ಸಂತೋಷದ ವಿಷಯ. ಕನ್ನಡ ಸಾಹಿತ್ಯ ಪರಿಷತ್ತಿಗೆ ಈ ಸಾರಿ ಒಂದು ಹೆಚ್ಚಿನ ಉತ್ತೇಜನ ಕೊಟ್ಟಿರುವುದು ಸಂತೋಷದ ವಿಚಾರ. 1965-66ರಲ್ಲಿ 5 ಸಾವಿರ ರೂಪಾಯಿ ಸಹಾಯಧನ ಇದ್ದುದನ್ನು 1966-67ರಲ್ಲಿ 25 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದರು. ಈ ವರ್ಷ ಒಂದು ಲಕ್ಷ ರೂಪಾಯಿಗಳಿಗೆ ಅದನ್ನು ಹೆಚ್ಚು ಮಾಡಲಿಕ್ಕೆ ಮುಂದೆ ಬಂದಿರುವುದು, ಈ ಒಂದು ಧ್ಯೇಯ ನಿಜವಾಗಿಯೂ ಪ್ರಗತಿದಾಯಕವಾದುದು. ಸಾಹಿತ್ಯ ಪರಿಷತ್ತು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ನಾಡಿನ, ನುಡಿಯ ಮತ್ತು ರಾಜ್ಯದ ಭಾಷೆಯನ್ನು ಚೆನ್ನಾಗಿ ಬೆಳೆಸಲಿಕ್ಕೆ ಒಂದು ದೊಡ್ಡ ಸಾಧನವಾಗುತ್ತದೆ ಎಂಬುದನ್ನು ಹೇಳಲಿಚ್ಛಿಸುತ್ತೇನೆ. ಸಾಹಿತ್ಯ ಅಕ್ಯಾಡಮಿ, ಲಲಿತಕಲಾ ಅಕ್ಯಾಡಮಿ, ಸಂಗೀತ ನಾಟಕ ಅಕ್ಯಾಡಮಿ ಇವುಗಳಿಗೂ ಕೂಡ 7 ಲಕ್ಷ ರೂಪಾಯಿಗಳ ಹೆಚ್ಚಿನ ಗ್ರ್ಯಾಂಟನ್ನು ಕೊಟ್ಟಿದ್ದಾರೆ ಇದೂ ಕೂಡ ಒಳ್ಳೆಯ ಕೆಲಸ, ಏಕೆಂದರೆ ಒಳ್ಳೊಳ್ಳೆಯ ಲೇಖನಕಾರರು ಕಥೆ ಕಾದಂಬರಿಗಳನ್ನು ಬರೆಯುತ್ತಾರೆ, ಅವರಿಗೆ ಪುರಸ್ಕಾರ ಕೊಡಬೇಕಾಗುತ್ತದೆ. ಸಾವಿರ, ಎರಡು ಸಾವಿರ ರೂಪಾಯಿ ಬಹುಮಾನ ಕೊಡಬೇಕಾದ ಪರಿಸ್ಥಿತಿ ಉಂಟಾಗುತ್ತದೆ, ಅದೇ ರೀತಿ ಒಳ್ಳೆಯ ಚಿತ್ರಗಾರರು ಮತ್ತು ನಾಟಕ ಕಲೆಯಲ್ಲಿ ನುರಿತವರು, ನಾಟ್ಯಕಲೆಯಲ್ಲಿ ಪರಿಣತರು ಯಾರಿದ್ದಾರೆ ಅವರಿಗೂ ಸಹ ಸೂಕ್ತವಾದ ಉತ್ತೇಜನ ಕೊಡುವುದಕ್ಕಾಗಿ ಈ ರೀತಿ ಸಹಾಯ ಧನವನ್ನು ಹೆಚ್ಚು ಮಾಡಿರುವುದು ಪ್ರಗತಿದಾಯಕವಾದ ಕೆಲಸ ಎಂದು ಹೇಳಲಿಚ್ಛಿಸುತ್ತೇನೆ. ಇನ್ನೂ ಅದನ್ನು ಹೆಚ್ಚು ಮಾಡಬೇಕು.

ಅದನ್ನೆಲ್ಲಾ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಬೇಕು. ಕೇಂದ್ರ ಸರಕಾರ ಕೆಲವು ಸಂಸ್ಥೆಗಳಿಗೆ ಸಹಾಯ ಮಾಡುವುದು, 19 ರಾಜ್ಯಗಳಿಗೆ ಸಹಾಯ ಮಾಡುವಾಗ ಕೆಲವಕ್ಕೆ ಹೆಚ್ಚು ಸಹಾಯ ದೊರೆಯುತ್ತಿದೆ, ಮತ್ತೆ ಕೆಲವಕ್ಕೆ ಹೆಚ್ಚಾಗಿ ದೊರೆತಿಲ್ಲ. ಇಡೀ ಭಾರತ ಭದ್ರವಾಗಿರಬೇಕೆಂದರೆ ಎಲ್ಲ ರಾಜ್ಯಗಳಿಗೂ ಕೂಡ ಸಮಾನವಾಗಿ ಅವಶ್ಯಕತೆಗೆ ತಕ್ಕಂತೆ ಸಹಾಯವೊದಗಬೇಕು. ಆದುದರಿಂದ ಕೇಂದ್ರ ಸರಕಾರವನ್ನು ನಮ್ಮ ರಾಜ್ಯಕ್ಕೂ ಸಾಕಾದಷ್ಟು ಸಹಾಯಮಾಡುವಂತೆ ಒತ್ತಾಯಮಾಡಬೇಕು. ಬಹುಶಃ ನಮ್ಮ ಸರಕಾರದವರು ಒತ್ತಾಯ

ಮಾಡುತ್ತಿದ್ದಾರೆ. ಹಿಂದಿನಿಂದಲೂ ನಮಗೆ ಕಡಮೆ ದೊರೆಯುತ್ತಿದೆಯೆಂದು ಕೇಳಿದ್ದೇವೆ. ಬರಬೇಕಾದ್ದನ್ನು ಪ್ರಯತ್ನಮಾಡಿ ತೆಗೆದುಕೊಳ್ಳಬೇಕು. ಆರ್ಥಿಕ ಆಯೋಗವು ನಮಗೆ 18 ಕೋಟಿ ಕಡಿಮೆಮಾಡಿದೆ. ಸಂಪನ್ಮೂಲಗಳ ಮೂಲಕ ಅದನ್ನು ಭರ್ತಿಮಾಡಿಕೊಳ್ಳಬೇಕಾಗಿದೆ. ಹೆಚ್ಚು ತೆರಿಗೆ ಹಾಕುವುದಕ್ಕೆ ಮನಸ್ಸು ಬರುವುದಿಲ್ಲ, ಜನರು ಒಪ್ಪುವುದಿಲ್ಲ. ಹಾಗಿರುವಾಗ ಅರ್ಥಿಕ ಮಂತ್ರಿಗಳು ಪಾನನಿರೋಧವನ್ನು ತೆಗೆದು ಅದರಿಂದ 14—15 ಕೋಟಿ ಉತ್ಪತ್ತಿ ಬರುವಂತೆ ಮಾಡಿದ್ದಾರೆ. ವೈಯಕ್ತಿಕವಾಗಿ ಪಾನನಿರೋಧವನ್ನು ರದ್ದುಮಾಡಲು ನನಗೆ ಒಪ್ಪಿಗೆಯಿಲ್ಲ ಎಂದಿಗೂ ಅದನ್ನು ನಾನು ಒಪ್ಪುವುದಿಲ್ಲ ಆದರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವಾಗ ಇತರ ಪ್ರಗತಿಪರವಾದ ಕೆಲಸಗಳನ್ನು ಮಾಡಬೇಕಾಗಿರುವಾಗ ಜಯಪ್ರದವಾಗದಿರುವುದರಿಂದ ಪಾನನಿರೋಧವನ್ನು ತೆಗೆದು ಸ್ವಲ್ಪ ಆದಾಯ ಬರುವಂತೆ ಮಾಡಿಕೊಂಡಿದ್ದಾರೆ. ಜೊತೆಗೆ ಲಾಟರಿ ಯೋಜನೆ ಎಲ್ಲಾ ರಾಜ್ಯಗಳೂ ಕೂಡ ಜಾರಿಗೆ ತಂದಿರುವಾಗ ನಾವು ಏಕೆ ತಂದು ಹಣ ಸಂಪಾದನೆ ಮಾಡಬಾರದೆಂದು ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳಲು ಇಲ್ಲೂ ಅದನ್ನು ಜಾರಿಗೆ ತಂದಿದ್ದಾರೆ.

ಇನ್ನೊಂದು ವಿಚಾರ, ಸಮಾಜವಾದ ಎಂದು ಹೇಳುತ್ತಿದ್ದಾರೆ. ಅದನ್ನು ಜಾರಿಗೆ ತರಬೇಕೆಂದು ಹೇಳುವಾಗ ಬರೀ ಬಾಯಲ್ಲಿ ಹೇಳಿದರೆ ಸಾಲದು. ಕಾರ್ಯರೂಪಕ್ಕೆ ತರಬೇಕು. ಸಮಾಜವಾದವೆಂದರೆ ಸುಮ್ಮನೆ ಸರಕಾರ ಬಾಯಲ್ಲಿ ಹೇಳಿದರೆ ಸಾಲದು, ಆಚರಣೆಗೆ ತಂದು ತೋರಿಸಬೇಕು, ಪ್ರತಿಯೊಬ್ಬರಿಗೂ ಅದರ ಫಲ ದೊರೆಯಬೇಕು ಎಂದು ಅಬ್ದುಲ್ ಗಫಾರ್‌ಖಾನರು ಹೇಳಿದರು. ಅಲ್ಲದೆ ಇಂಡಿಯಾದಲ್ಲಿ ಅನೇಕರು ಹತ್ತು ಸೌಧಗಳ ಮನೆಯಲ್ಲಿ ಕುಳಿತು ಸುಖಜೀವನ ಮಾಡುತ್ತಿದ್ದಾರೆ, ದೊಡ್ಡ ಬಂಗಲೆಗಳಲ್ಲಿ ವಿಲಾಸಿಗಳಾಗಿ ಸಂತೋಷದಿಂದ ಇದ್ದಾರೆ. ಅದೇ ಸಂದರ್ಭದಲ್ಲಿ ಸಾವಿರಗಟ್ಟಲೆ ಜನರು ವಾಸಕ್ಕೆ ಮನೆಯಿಲ್ಲದೆ, ಬಟ್ಟೆಯಿಲ್ಲದೆ, ಆಹಾರವಿಲ್ಲದೆ ಒದ್ದಾಡುತ್ತಿದ್ದಾರೆ, ಇದನ್ನು ನೋಡುತ್ತಿದ್ದೇವೆ. ಇದು ಸಮಾಜವಾದವೇ ? ಹೀಗೆ ಮಾಡಿದರೆ ಸಾಲದು. ಕಾರ್ಯರೂಪಕ್ಕೆ ತರಬೇಕು ಎಂದು ಗಫಾರಖಾನರು ಹೇಳಿದರು. ಬಹುಶಃ ನಮ್ಮ ಅರ್ಥಿಕಮಂತ್ರಿಗಳು ಸಮಾಜವಾದ ಜಾರಿಗೆ ತರಬೇಕಾದರೆ ಉತ್ಪತ್ತಿ ಹೆಚ್ಚಿಸಬೇಕು, ಹಾಗೆ ಹೆಚ್ಚಿಸಿ ಒಳ್ಳೆಯ ರೀತಿಯಿಂದ ಹಂಚಬೇಕು, ಪ್ರತಿಯೊಬ್ಬರಿಗೂ ಅನುಕೂಲವಾಗುವಂತೆ ಮಾಡಬೇಕು ಎಂಬುದನ್ನು ಗ್ರಹಿಸಿರಬಹುದು. ಅದು ಒಳ್ಳೆಯದು ಉತ್ಪತ್ತಿಯಿಲ್ಲದೆ ಹಣವಿಲ್ಲದೆ ಹೇಗೆ ಕೆಲಸ ಮಾಡುವುದು ? ಉತ್ಪತ್ತಿ ಹೆಚ್ಚಿಸಿ ಅರ್ಹರಾದವರಿಗೆ ಬಡವರಿಗೆ ಕೊಡಬೇಕು, ಬಹಳ ಉನ್ನತ ಮಟ್ಟದಲ್ಲಿರುವವರಿಂದ ಪಡೆದು ಬಡವರಿಗೆ ಹಂಚಬೇಕು, ಹಾಗೆ ಮಾಡಿ ಎಲ್ಲರಿಗೂ ಸುಖಜೀವನ ಕಲ್ಪಿಸಬೇಕು ಎಂದಿರುವುದು ಒಳ್ಳೆಯದು.

ಇಂದು ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಚಿತ್ರ ಹೇಳುವುದಾದರೆ 19 ಜಿಲ್ಲೆಗಳಲ್ಲಿ ನಮ್ಮ ಜಿಲ್ಲೆಯೂ ಒಂದು, ಅಲ್ಲಿ ಬಹಳ ಬುದ್ಧಿವಂತರಿದ್ದಾರೆ, ಬ್ಯಾಂಕುಗಳಿವೆ, 200 ಮೈಲಿ ಕರಾವಳಿಯಿದೆ. ಆದರೆ ಅಲ್ಲಿ ವಿದ್ಯಾವಂತರು, ಬಹಳ ಬುದ್ಧಿವಂತರೂ ಇದ್ದಾರೆ ಎಂದು ಹೇಳಿದರೆ ಸಾಲದು. ಅಲ್ಲಿಗೆ ಕೊಡಬೇಕಾದ ಹಣ ಕೊಟ್ಟು ಸಂಪತ್ತನ್ನು ಅಲ್ಲಿಂದ ಪಡೆಯಬಹುದು. ಅಲ್ಲಿ 200 ಮೈಲಿ ಕರಾವಳಿ ಇರುವಾಗ ಬೇಕಾದಷ್ಟು ಮೀನು ಸಿಕ್ಕುವುದು, ಅದನ್ನು ಹಿಡಿಯಬಹುದು. ಜಪಾನಿನಲ್ಲಿ ದಿವಸಕ್ಕೆ 2—3 ಕೋಟಿ ರೂಪಾಯಿಗಳ ಮೀನನ್ನು ಮಾರಲಾಗುವುದು. ಅದೇ ರೀತಿ ಇಲ್ಲೂ ಕೂಡ ಮಾಡಿದರೆ ಹೆಚ್ಚು ಹಣ ಸಂಪಾದಿಸಬಹುದು, ಅದಕ್ಕೆ ಪ್ರಯತ್ನಮಾಡಬೇಕು, ಸುಲಭದಲ್ಲಿ ಮೀನು ಬೇಕಾದಷ್ಟು ಸಿಕ್ಕುವುದು. ಬರೇ ಬುದ್ಧಿವಂತರು ಎಂದು ನಮ್ಮನ್ನು ಹೊಗಳಿದರೆ ಪ್ರಯೋಜನವಿಲ್ಲ, ನಮ್ಮ ಜಿಲ್ಲೆಯಲ್ಲಿ ದೊಡ್ಡ ನೀರಾವರಿ ಮಾಡಬೇಕಾಗಿಲ್ಲ, ಚಿಕ್ಕ ನೀರಾವರಿ ಕೆಲಸ ಒಳ್ಳೆಯ ರಸ್ತೆ, ಸೇತುವೆ ಮುಂತಾದುವುಗಳನ್ನು ಬೇಕಾದ ಕಡೆಗಳಲ್ಲಿ ಮಾಡಿ ಸಹಾಯ ಮಾಡಬೇಕು. ಇದನ್ನು ಮಾಡದೆ ತಪ್ಪಿಸಿಕೊಳ್ಳುವುದು ಎಂದೆಂದಿಗೂ ಸರಿಯಲ್ಲ.

ನಮ್ಮ ರಾಜ್ಯವನ್ನು ಪ್ರಗತಿದಾಯಕವನ್ನಾಗಿಯೂ ಕಲ್ಯಾಣ ರಾಜ್ಯವನ್ನಾಗಿಯೂ ಮಾಡಬೇಕು ಎಂದು ಮಾನ್ಯ ಮಂತ್ರಿಗಳು ಪ್ರಯತ್ನಪಡುತ್ತಿರುವಾಗ ಅಧಿಕಾರಶಾಹಿ ಸರಿಯಾಗಿ ಕೆಲಸಮಾಡದಿದ್ದರೆ ಯಾವುದೂ ಆಗುವುದಿಲ್ಲ, ಗುಮಾಸ್ತರು ಅಧಿಕಾರಿಗಳು ಮತ್ತಿತರರು ಸರಿಯಾಗಿ ಕೆಲಸಮಾಡಿದರೆ ಸರಕಾರದ ಯೋಜನೆ ಸಫಲವಾಗುವುದು. ಆಡಳಿತ ಯಂತ್ರಕ್ಕೆ ಎಣ್ಣೆ ಬೇಕಾದ ಕಡೆ ಹಾಕಿ ಕೀಲುಗಳು ಸರಿಯಾಗಿ ಕೆಲಸಮಾಡುವಂತೆ ಮಾಡಿದರೆ ಮಂತ್ರಿಗಳು ಕಷ್ಟಪಟ್ಟು ಮಾಡುವ ಕೆಲಸ ಜಯಪ್ರದವಾಗುವುದು, ಸರಿಯಾಗಿ ಕಾರ್ಯರೂಪಕ್ಕೆ ಬರುವುದು. ಹಾಗೆ ಮಾಡಬೇಕು. ಗುಮಾಸ್ತರು ಅಧಿಕಾರಿಗಳು ಮುಂತಾದವರು ಲಂಚರುಷವತ್ತು ತೆಗೆದುಕೊಳ್ಳುವುದು ಜಾಸ್ತಿಯಾದರೆ ಅರ್ಥಿಕ ಸಂಪತ್ತು ಕಡಮೆಯಾಗುವುದು, ಉತ್ಪತ್ತಿ ಕುಂಠಿತ ವಾಗುವುದು. ಅದರ ಕಡೆ ಗಮನ ಕೊಡಬೇಕು. ಒಟ್ಟಿನಲ್ಲಿ ಮಾನ್ಯ ಮಂತ್ರಿಗಳು ಒಳ್ಳೆಯ ಉತ್ತಮವಾದ ಆಯವ್ಯಯವನ್ನು ಮಂಡಿಸಿದ್ದಾರೆ. ಇಷ್ಟು ಹೇಳಿ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕಮಂತ್ರಿಗಳು ಬಜೆಟ್ಟಿನಲ್ಲಿ ಆದಾಯ 233.4 ಕೋಟಿ ರವೆನ್ಯೂ ಎಕ್ಸ್‌ಪೆಂಡಿಚರ್ 248.95 ಕೋಟಿ ಡಿಫಿಸಿಟ್ 15.4 ಕೋಟಿ ರೂಪಾಯಿಗಳು ಎಂದು ತಿಳಿಸಿದ್ದಾರೆ. ಅವರು ಯಾವರೀತಿ ಬಜೆಟ್ಟನ್ನು ರೂಪಿಸಿದ್ದಾರೆ, ಜನಸಾಮಾನ್ಯರಿಂದ ವಸೂಲುಮಾಡಿದ ಹಣವನ್ನು, ಬಹಳ ಕಷ್ಟದಿಂದ ಜನರು ಕೊಟ್ಟ ತೆರಿಗೆಯನ್ನು ಯಾವರೀತಿ ವಿನಿಯೋಗಮಾಡಿದ್ದಾರೆ ಎಂದು ಸ್ವಲ್ಪ ವಿಮರ್ಶೆಮಾಡಿ ನೋಡಬೇಕಾಗಿದೆ.

ನಮ್ಮ ರಾಜ್ಯದಲ್ಲಿ 600 ಕೋಟಿಗಿಂತ ಹೆಚ್ಚು ಸಾಲವಿದೆ, 22 ವರ್ಷಗಳಿಂದ ಯೋಜನೆಗಳನ್ನು ಮಾಡಿ ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಬಂದಿದ್ದಾರೆ, ಹೇರಳವಾಗಿ ಹಣ ಖರ್ಚಾಗಿದೆ ಅದರಿಂದ ಜನರಿಗೆ ಪ್ರತಿಫಲ ದೊರೆಯಬೇಕಾಗಿತ್ತು. ಕೈಗಾರಿಕೆ, ವ್ಯವಸಾಯ ಮುಂತಾದ ಉದ್ಯಮಗಳಲ್ಲಿ ಜನರು ಕೊಟ್ಟ ಹಣವನ್ನು ಲಾಭದಾಯಕವಾಗಿ ವಿನಿಯೋಗಿಸಿ ಅದರಿಂದ ಹೆಚ್ಚು ಪ್ರತಿಫಲ ಪಡೆದು ತೆರಿಗೆ ಕಡಿಮೆ ಮಾಡಿ ಜನರ ಕಷ್ಟವನ್ನು ಹೋಗಲಾಡಿಸಿ ಜನತೆಗೆ ಸಹಾಯ ಮಾಡಬೇಕಾಗಿತ್ತು. ಆದರೆ ಹಾಗೆ ಮಾಡದೆ ಜನರ ಮೇಲೆ ಹೆಚ್ಚಿನ ಹೊರೆ ಹೊರಿಸಿದ್ದಾರೆ, ಅವರ ಹೊರೆಯನ್ನು ಕಡಮೆಮಾಡಿಲ್ಲ.

ಮಾನ್ಯ ಅರ್ಥ ಮಂತ್ರಿಗಳು ಕಳೆದಸಾರಿ ಬಹಳ ಹೆಮ್ಮೆಯಿಂದ ನಾನು ಈ ಒಂದು ಆಯವ್ಯಯವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ, ಇದರೊಳಗೆ ಖೋತಾ ಬರುವುದಿಲ್ಲ ಎನ್ನುವಂಥ ಹೊಗಳಿಕೆಯ ಮಾತನ್ನು ಹೇಳಿ, ಈ ಸಾರಿ ಹದಿನೈದುವರೆ ಕೋಟಿ ರೂಪಾಯಿನಷ್ಟು ಖೋತಾ ಆಗುವಂಥ ಬಜೆಟ್ಟನ್ನು ತಂದಿದ್ದಾರೆ ಮತ್ತು ಇದಕ್ಕೆ ಮೂಲಕಾರಣ ಕೇಂದ್ರ ಸರ್ಕಾರದವರು ಎಂದು ಹೇಳಿದ್ದಾರೆ. ಈ ಸಲ ಸಾರ್ವಜನಿಕ ಸಾಲವನ್ನು ಸುಮಾರು 5.63 ಕೋಟಿ ರೂಪಾಯಿ ಹಿಂದಕ್ಕೆ ಕೊಡಬೇಕಾಗಿದೆ. ಈ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಮತ್ತು ಅದರ ಮೇಲಿನ ಬಡ್ಡಿಯನ್ನು ಪಾವತಿ ಮಾಡುವುದಕ್ಕೆ ಮತ್ತೆ ಇನ್ನೊಂದು ಸಾಲವನ್ನು ಎತ್ತಬೇಕಾಗಿದೆ ಎಂದು ಹೇಳುತ್ತಿದ್ದಾರೆ. ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು, ರಾಜ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಒಂದೇ ಸರ್ಕಾರ ಎರಡೂ ಹಂತಗಳಲ್ಲಿ ಇದ್ದಾಗಲೂ ಕೂಡ, ಈ ಸಾರಿಯ ಆಯವ್ಯಯದಲ್ಲಿ ಮಾನ್ಯ ಅರ್ಥ ಮಂತ್ರಿಗಳು ಹೇಳಿರುವಂಥ ನೊಂದ ಮನಸ್ಸಿನ ನುಡಿಯನ್ನು ಹೇಳುತ್ತಿರುವಂಥ ಶಬ್ದಗಳನ್ನು ನೋಡಿದರೆ, ತಮ್ಮ ಸರ್ಕಾರವೇ ಇದ್ದಾಗ ಮೂರನೆ ಯೋಜನೆಗೆ ಬೇಕಾದ ಸೌಲಭ್ಯಗಳನ್ನು ಮೈಸೂರು ಸರ್ಕಾರ ಪಡೆಯದೆ ಇತರ ರಾಜ್ಯಗಳಿಗೆ ಕೊಟ್ಟಿರುವಂಥ ಮತ್ತು ಮೈಸೂರು ರಾಜ್ಯಕ್ಕೆ ಕೊಟ್ಟಿರುವಂಥ ಹಣವನ್ನು ಹೋಲಿಸಿ ನೋಡಿದರೆ ಮೈಸೂರು ರಾಜ್ಯಕ್ಕೆ ಈಗ ಎಷ್ಟು ಅನಾಹುತಗಳಾಗಿವೆಯೋ ಅದೇ ಅನಾಹುತಗಳು ಹಿಂದಿನಿಂದಲೂ ಆಗುತ್ತ ಬಂದಿವೆ. ಈ ದಿಸೆಯಲ್ಲಿ ನಾವು ಹಣವನ್ನು ವಿನಿಯೋಗಿಸುತ್ತಿರುವ ರೀತಿಯನ್ನು ವಿಮರ್ಶಿಸಬೇಕಾಗಿದೆ.

ವಿದ್ಯಾಭ್ಯಾಸ ಮೈಸೂರು ಸಂಸ್ಥಾನದಲ್ಲಿ, ಈ ದೇಶಕ್ಕೆಲ್ಲಾ ಬಹಳ ಉತ್ತಮವಾಗಿ ಬೆಳೆದಿದೆ ಎಂದು ಹೇಳಿದ್ದಾರೆ. ಸಂಖ್ಯಾ ದೃಷ್ಟಿಯಿಂದ ಬೆಳೆದಿದೆ, ನಿಜ. ಆದರೆ ಮೌಲ್ಯದ ದೃಷ್ಟಿಯಿಂದ ಸಾಕಷ್ಟು ಬೆಳೆದಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ ಇಷ್ಟೊಂದು ಕಾಲೇಜುಗಳು, ಇಷ್ಟೊಂದು ಹೈಸ್ಕೂಲುಗಳು, ಪ್ರೈಮರಿ ಸ್ಕೂಲುಗಳು ಎಲ್ಲ ಇದ್ದೂ ಕೂಡ ಸಾಕಷ್ಟು ಮೌಲ್ಯದ ವಿದ್ಯಾಭ್ಯಾಸವನ್ನು ಜನತೆಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳುವಂಥ ನಿರಾಶೆಯ ಮಾತನ್ನು ಹೇಳಿರುವುದನ್ನು ನಾವು ಮೆಚ್ಚಬೇಕಾಗಿದೆ. ಈ ವಿದ್ಯಾಭ್ಯಾಸವನ್ನು ನಮ್ಮ ಜನಗಳಿಗೆ ಕೊಡುತ್ತಿದ್ದಾರೆ. ಆ ವಿದ್ಯಾಭ್ಯಾಸ ನಿರುದ್ಯೋಗಿ ವಿದ್ಯಾವಂತರ ತಂಡವನ್ನು ಹೆಚ್ಚಿಸುವಂಥ ವಿದ್ಯಾಭ್ಯಾಸವಾಗಿದೆ. ಅವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ 2,13,601 ವಿದ್ಯಾವಂತ ನಿರುದ್ಯೋಗಿಗಳು ನಮ್ಮ ರಾಜ್ಯದಲ್ಲಿದ್ದಾರೆ. ಅಂಡರ್ ಎಂಪ್ಲಾಯ್ಡ್ ಎಷ್ಟು ಜನರಿದ್ದಾರೆ ಎನ್ನುವುದು ಗೊತ್ತಿಲ್ಲ. ಗ್ರಾಮಾಂತರದಲ್ಲಿರುವ ಮಾನವ ಶಕ್ತಿ, ನಗರಗಳಲ್ಲಿರುವ ಮಾನವ ಶಕ್ತಿಯನ್ನು ಪ್ರಚೋದನೆ ಮಾಡಿ ರಾಜ್ಯ ಪ್ರಗತಿಗೆ ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಅದನ್ನು ಉಪಯೋಗಿಸಿಕೊಳ್ಳುವಂಥ ಸುವ್ಯವಸ್ಥಿತವಾದ ರೀತಿಯಲ್ಲಿ ಯಾವ ವ್ಯವಸ್ಥೆಯನ್ನೂ ಸರ್ಕಾರ ಮಾಡಿಲ್ಲ ಎಂದು ಹೇಳಬೇಕಾಗಿದೆ.

ಬಹು ಮುಖ್ಯವಾದ ಎರಡು ಭಾಗ, ಕೈಗಾರಿಕೆ ಒಂದು, ನೀರಾವರಿ ಇನ್ನೊಂದು ಕೈಗಾರಿಕೆಯಲ್ಲಿ 159 ಕೋಟಿ ರೂಪಾಯಿ ಬಂಡವಾಳವನ್ನು ತೊಡಗಿಸಿದ್ದಾರೆ. ಇದರಲ್ಲಿ ಕೇವಲ 9 ಉದ್ದಿಮೆಗಳಲ್ಲಿ 148 ಕೋಟಿ ರೂಪಾಯಿಗಳಷ್ಟು ಹಣವನ್ನು ಹಾಕಿದ್ದಾರೆ. ಈ 9 ಉದ್ದಿಮೆಗಳಲ್ಲಿ ಒಂದೇ ಒಂದು ಉದ್ದಿಮೆಯಲ್ಲಿ ಕೂಡ ನಫೆ ಬಂದಿಲ್ಲ. 148 ಕೋಟಿ ರೂಪಾಯಿಗಳನ್ನು ಒಂದು ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್‌ನಲ್ಲಿ ಇಟ್ಟಿದ್ದರೆ ಐದಾರು ಪರ್ಸೆಂಟ್ ಪ್ರತಿಫಲ ಬರುತ್ತಿತ್ತು. ಆದರೆ ಈ ಹಣವನ್ನು ತೊಡಗಿಸಿರುವ ಪ್ರತಿಯೊಂದು ಉದ್ದಿಮೆಯಲ್ಲಿಯೂ ನಷ್ಟ, ನಷ್ಟ ಎಂದು ಹೇಳುತ್ತಿದ್ದಾರೆ, ಜನ

ಸಾಮಾನ್ಯರಿಂದ ವಸೂಲು ಮಾಡಿದಂಥ ಹಣವನ್ನು ವಿನಿಯೋಗಿಸಿರುವಂಥ ಕೈಗಾರಿಕೆಗಳೆಲ್ಲ ನಷ್ಟದಲ್ಲಿ ನಡೆಯುತ್ತಿವೆ. ಮೈಸೂರು ಕಬ್ಬಿಣದ ಕಾರ್ಖಾನೆ, ನ್ಯೂ ಗವರ್ನ್‌ಮೆಂಟ್ ಎಲೆಕ್ಟ್ರಿಕ್ ಕಾರ್ಖಾನೆ, ಮೈಸೂರು ಕೆಮಿಕಲ್ಸ್, ಷುಗರ್ ಮಿಲ್ಸ್ ಇವುಗಳಲ್ಲಿ ಯಾವುದನ್ನು ತೆಗೆದುಕೊಂಡರೂ ಕೂಡ ಅದರಲ್ಲಿ ಬಹಳ ಅನ್ಯಾಯವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಸಂತೋಷ. ಒಬ್ಬ ಫೈನಾನ್ಷಿಯಲ್ ಅಡ್ವೈಸರನ್ನು ನೇಮಕ ಮಾಡಿಕೊಳ್ಳುತ್ತೇವೆ, ಅದರಿಂದ ಈ ಸಮಸ್ಯೆಗಳು ಪರಿಹಾರವಾಗುತ್ತವೆ ಎನ್ನುವಂಥ ಮಾತನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಒಬ್ಬ ಫೈನಾನ್ಷಿಯಲ್ ಅಡ್ವೈಜರ್ 148 ಕೋಟಿ ರೂಪಾಯಿಗಳಷ್ಟು ಹಣವನ್ನು ವಿನಿಯೋಗಿಸುವಂಥ ಕೈಗಾರಿಕೆಗಳನ್ನು ಲಾಭದಾಯಕವಾಗಿ ನಡೆಸುವಂಥ ರೀತಿಯಲ್ಲಿ ತನ್ನ ಒಂದು ಮ್ಯಾಜಿಕ್‌ನಿಂದ ಮಾಡುತ್ತಾನೆಂದು ಏನು ಹೇಳಿದ್ದಾರೆ ಅದು ರೆವೂಪ್ ಟ್ರಿಕ್‌ನ ಹಾಗೆ ಕಾಣುತ್ತದೆ. ಇದೇ ರೀತಿ ಇನ್ನೊಂದು ಹೇಳಿದ್ದಾರೆ. ಹೊಸಪೇಟೆಯಲ್ಲಿ ಆಗಬೇಕೆಂದಿರುವ ಉಕ್ಕಿನ ಕಾರ್ಖಾನೆ ಮತ್ತು ಸಣ್ಣ ಕಾರು ಪ್ರಾಜೆಕ್ಟ್ ಬಗ್ಗೆ ಹೇಳಿದ್ದಾರೆ ತಮ್ಮ ನೇತೃತ್ವದಲ್ಲಿ, ಮೈಸೂರಿನಲ್ಲಿ ತಯಾರಾಗತಕ್ಕ ಸಣ್ಣ ಕಾರಿನಲ್ಲಿ ನಮ್ಮನ್ನು ತೆಗೆದುಕೊಂಡು ಹೋಗುತ್ತೀರಾ ಎಂದು ಕೇಳುತ್ತೇನೆ. ಇದು ಕಾರ್ಯಗತವಾಗುವಂಥ ವ್ಯವಸ್ಥೆಯಾಗಿ ಕಾಣುತ್ತಿಲ್ಲ. ಇದು ಬೃಹತ್ ಕೈಗಾರಿಕೆಯಾಗಿ ಇದ್ದರೂ ಮೊನ್ನೆ ಕೇಂದ್ರ ಸರ್ಕಾರದವರು 2 ಕೋಟಿ ರೂಪಾಯಿಗಳ ಒಳಗಿರುವಂಥ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಲೈಸೆನ್ಸ್ ಬೇಕಾಗಿಲ್ಲ ಎಂದು ಹೇಳುತ್ತಿದ್ದಾರೆ. ಸಣ್ಣ ಕಾರು ಪ್ರಾಜೆಕ್ಟನ್ನು ಸ್ಪ್ಲಿಟ್ ಮಾಡಿ ಹತ್ತು ಹನ್ನೆರಡು ಕಾಂಪೊನೆಂಟ್ಸ್ ಮಾಡುವಂಥ ಕೈಗಾರಿಕೆಗಳನ್ನು ಮಾಡಿ, ಕೇಂದ್ರ ಸರಕಾರದ ಲೈಸೆನ್ಸ್ ಇಲ್ಲದೆ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ಹೊಸಪೇಟೆ ಸ್ಟೀಲ್ ಪ್ಲಾಂಟ್ ಬಗ್ಗೆ ಇನ್ನೊಂದು ಅಪಾಯ ಬಂದಿದೆ. ಎರಡು ಕಡೆ ಕಾರ್ಖಾನೆಗಳನ್ನು ಸ್ಥಾಪಿಸುವ ವಿಷಯವನ್ನು ತಿಳಿಸುತ್ತ, ಹೊಸಪೇಟೆ ಸ್ಟೀಲ್ ಪ್ಲಾಂಟ್ ಬಗ್ಗೆ ಹೊಸಪೇಟೆಯಲ್ಲಿ ಮಾಡಬೇಕೋ ಗೋವಾದಲ್ಲಿ ಮಾಡಬೇಕೋ ಎಂದು ಆಲೋಚನೆ ಮಾಡುತ್ತಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಪ್ರಾಯಶಃ ಸಿಂಡಿಕೇಟ್, ಇಂಡಿಕೇಟ್‌ಗಳ ಘರ್ಷಣೆಯಲ್ಲಿ ಗೋವ ವಿಷಯ ಬಂದಿದೆ ಎಂದು ಕಾಣುತ್ತದೆ. ಪ್ರಪಂಚದಲ್ಲಿ ಶ್ರೇಷ್ಠವಾದ ಅದಿರು ಹೊಸಪೇಟೆಯಲ್ಲಿ ಸಿಕ್ಕುವಾಗ ಗೋವ ಹೆಸರು ಬರಬೇಕಾದ ಅವಶ್ಯಕತೆ ಇಲ್ಲ. ಗೋವ ಹೆಸರು ಬಾರದೆ ಇರುವಂತೆ, ಹೊಸಪೇಟೆಯಲ್ಲಿಯೇ ಸ್ಟೀಲ್ ಪ್ಲಾಂಟ್ ಸ್ಥಾಪನೆ ಮಾಡಿಸುವಂಥ ಮತ್ತು ಮಾಡುವಂಥ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ದೇಶಕ್ಕೆ ಸುಮಾರು 350 ಕೋಟಿ ರೂಪಾಯಿಗಳು ನಾಲ್ಕನೆಯ ಯೋಜನೆಗೆ ಬೇಕು. ಒಟ್ಟು ಯೋಜನೆಯ ಮೊತ್ತದ ಕನಿಷ್ಠ ನೂರು ಕೋಟಿ ರೂಪಾಯಿಗಳ ಮೊತ್ತವನ್ನು ಕೆಲವು ಸಂಸ್ಥೆಗಳು ಡಿಬೆಂಚರ್ ಸಾಲದ ಮೂಲಕ ಎತ್ತುವುವು ಎಂದೂ, 1969-74ರ ಅವಧಿಯಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಉಜ್ಜುಗಿಸಲ್ಪಡುವ ಹಣವೇ 500 ಕೋಟಿ ರೂಪಾಯಿಗಳಾಗಬಹುದು ಜೊತೆಗೆ ಖಾಸಗೀ ವಲಯದವರು ಕನಿಷ್ಠ 300 ರಿಂದ 350 ಕೋಟಿ ರೂಪಾಯಿಗಳವರೆಗೂ ಪ್ರೈವೇಟ್ ಸೆಕ್ಟರಿನಲ್ಲಿ ವಿನಿಯೋಗಿಸಬಹುದು ಎಂದು ಹೇಳಿದ್ದಾರೆ. ಈ ರೀತಿಯಾಗಿ ಹಣವನ್ನು ತೊಡಗಿಸಲು ಯಾರು ನಮ್ಮ ರಾಜ್ಯಕ್ಕೆ ಬರುತ್ತಾರೆ? ಯಾವ ರೀತಿಯ ಸೌಲಭ್ಯವನ್ನು ಅಂಥವರಿಗೆ ಕೊಡಲಾಗುತ್ತಿದೆ? ಮೊನ್ನೆಯ ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ಹೇಳಿರುವಂತೆ ಎರಡು ಲಕ್ಷ ರೂಪಾಯಿ ವರಮಾನ ಬಂದರೆ ಅದರಮೇಲೆ ಸರ್ಕಾರ 93 ಪರ್ಸೆಂಟ್ ವರಮಾನ ತೆರಿಗೆಯನ್ನು ಹಾಕುವುದಾದರೆ ಯಾರು ಮುಂದೆ ಬರುತ್ತಾರೆ? ಒಂದು ವೇಳೆ ಯಾರಾದರೂ ಮುಂದೆ ಬಂದರೆ ಅವರಿಗೆ ಬೇಕಾದ ಲೈಸೆನ್ಸ್, ಯಂತ್ರಗಳು ಮತ್ತು ಇತರ ವಿಧವಾದ ಸಹಾಯವನ್ನು ಒದಗಿಸಿಕೊಡುವುದರಲ್ಲಿ ಅಸಫಲರಾಗಿದ್ದಾರೆ ಎಂದು ಹೇಳದಿದ್ದರೆ ತಪ್ಪಾಗುತ್ತದೆ. ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೋಸ್ಕರವಾಗಿ ಧನ ಸಹಾಯವನ್ನು ಸಣ್ಣ ಕೈಗಾರಿಕೋದ್ಯಮಿಗಳಿಗೆ ಒದಗಿಸಿಕೊಟ್ಟರೆ, ನಷ್ಟವಾಗುತ್ತಿರುವ, ತಳವಿಲ್ಲದ ಸರ್ಕಾರದ ಕೈಗಾರಿಕೆಗಳಿಗೆ ಒದಗಿಸುವ ಹಣದಲ್ಲಿ ಕೇವಲ ಕಾಲು ಭಾಗದಷ್ಟು ಸಣ್ಣ ಕೈಗಾರಿಕೆಗಳಿಗೆ ಕೊಟ್ಟಿದ್ದರೆ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಪಂಜಾಬ್ ರಾಜ್ಯದಲ್ಲಿ ಬೆಳೆದಿರುವಂತೆ ಬೆಳೆಯತಕ್ಕ ಅವಕಾಶವಾಗುತ್ತಿತ್ತು.

ವ್ಯವಸಾಯದ ಬಗ್ಗೆ ಹೇಳುತ್ತ ನಮ್ಮಲ್ಲಿರುವ ಕೃಷಿಯೋಗ್ಯವಾದ 262 ಲಕ್ಷ ಎಕರೆ ಪ್ರದೇಶವಲ್ಲಿ 22 ವರ್ಷಗಳ ಮುಖ್ಯ ಮುಖ್ಯ ಯೋಜನೆಗಳಿಂದ ನೀರನ್ನು ಒದಗಿಸಿರುವುದು ಕೇವಲ 26 ಲಕ್ಷ ಎಕರೆಗೆ ಮಾತ್ರ ಎಂದರೆ ಕೇವಲ 10 ಪರ್ಸೆಂಟ್ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ, ಖರ್ಚು ಮಾಡಿರುವ ಹಣ 192 ಕೋಟಿ ರೂಪಾಯಿಗಳು. ಆದರೆ ಅದರಿಂದ ನೀರಾವರಿ ಸೌಲಭ್ಯವನ್ನು ಕೊಟ್ಟಿರುವುದು ಕೇವಲ 26 ಸಾವಿರ ಎಕರೆಗೆ ಎಂದರೆ ಅರ್ಧ ಪರ್ಸೆಂಟ್

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ಪ್ರತಿಫಲವನ್ನು ಪಡೆಯುವುದಕ್ಕೆ ಇಲ್ಲಿಯವರೆಗೂ ಆಗಿಲ್ಲ. ಇದರಿಂದ ಬರತಕ್ಕ ಉತ್ಪತ್ತಿ ಸಿಬ್ಬಂದಿ ಖರ್ಚಿಗೆ ಆಗುತ್ತದೆ, ಎಂದರೆ ತಪ್ಪಾಗಲಾರದು, ಇದಕ್ಕೆ ನನ್ನ ಸಲಹೆ ಇಷ್ಟೆ ಈಗಲಾದರೂ ಕೂಡ ಸಣ್ಣ ಸಣ್ಣ ಅಣೆಕಟ್ಟುಗಳು, ಇಂಥವುಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟು, ಮೇಜರ್ ಟ್ಯಾಂಕ್ಸ್ ಮತ್ತು ಮೈನರ್ ಟ್ಯಾಂಕ್ಸ್ ಹೊಸ ಹೊಸದಾಗಿ ಕಟ್ಟಿಸುವ ಪ್ರಯತ್ನ ಮಾಡಬೇಕು. ಮಾನ್ಯ ರೆವಿನ್ಯೂ ಮಂತ್ರಿಗಳು ಟಿಪ್ಪುಸುಲ್ತಾನನ ಕಾಲದಲ್ಲಿ ಕಟ್ಟಿದ, ಪಾಳೇಗಾರರ ಕಾಲದಲ್ಲಿ ಕಟ್ಟಿದ ಕೆರೆಗಳ ಕೆಳಗಡೆ ಇರುವಂಥ ಅಚ್ಚುಕಟ್ಟಿಗೆ ಕೂಡ ವಾಟರ್ ರೇಟ್ ಕೊಡಿ ಎಂದು ಕೇಳುತ್ತಿದ್ದಾರೆ. ಇಂಥದಕ್ಕೆ ವಾಟರ್ ರೇಟ್ ಕೊಡಿ ಎಂದು ಯಾವರೀತಿ ಕೇಳುತ್ತಾರೆ? ಒಂದು ಹೊಸ ಕೆರೆಯನ್ನು ಕಟ್ಟಲು ಹೆಚ್ಚು ಬಂಡವಾಳ ಬೇಕಾಗಿಲ್ಲ; ಸಣ್ಣ ಸಣ್ಣ ಆಣೆಕಟ್ಟುಗಳನ್ನು ಕಟ್ಟಿ ಲಿಫ್ಟ್ ಇರಿಗೇಷನ್ ನದಿಯ ಎರಡೂ ಕಡೆ ವಿದ್ಯುಚ್ಛಕ್ತಿ ಲೈನ್ ತೆಗೆದುಕೊಂಡು ಹೋಗಿ ಅವಕಾಶ ಮಾಡಿಕೊಟ್ಟರೆ ಹೆಚ್ಚು ಪರಿಹಾರ ಸಿಕ್ಕುತ್ತದೆ. ರೈತನಿಂದ ದೇಶಕ್ಕೆ ಉಪಯೋಗವಾಗಬೇಕು ಎಂದು ಇದ್ದರೆ ರೈತನಿಗೆ ವಿದ್ಯುತ್ ಶಕ್ತಿ ಗೊಬ್ಬರ ಬೀಜ ಪಂಪ್ ಸೆಟ್ ಕೊಳ್ಳುವುದಕ್ಕೆ ಸೌಕರ್ಯ ಒದಗಿಸಿಕೊಡಿ. ಅಂದರೆ ರೈತ ಉದ್ಧಾರವಾಗುತ್ತಾನೆ. ಇದಕ್ಕೆ ಬೇಕಾದ ಒಂದು ಏಜೆನ್ಸೀ ಏರ್ಪಾಡು ಮಾಡಿ ರೈತನಿಗೆ ಬೇಕಾದ ಎಲ್ಲಾ ಸಾಮಾನುಗಳು ಸ್ಥಳದಲ್ಲಿಯೇ ಕೊಡುವ ವ್ಯವಸ್ಥೆ ಮಾಡಿದರೆ ರೈತ ಉದ್ಧಾರವಾಗುತ್ತಾನೆ.

3-30 P.M.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಹೇಳುವಾಗ ಬ್ಯಾಂಕುಗಳಿಂದ ಹಣ ತಂದು ಭೂಮಾಲೀಕರಿಗೆ ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಭೂಸುಧಾರಣೆ ಜಾರಿಗೆ ತರುವುದರಲ್ಲಿ ನಮಗೆ ಸಂಶಯವಿಲ್ಲ. ಇಲ್ಲಿ ಸಣ್ಣ ಸಣ್ಣ ಹಿಡುವಳಿಗಳು ಇವೆ. ನಮ್ಮಲ್ಲಿ ದೊಡ್ಡ ದೊಡ್ಡ ಜಮೀನುದಾರರು ಇಲ್ಲ. ಭೂ ಮಾಲೀಕರಿಗೆ ಕೊಡಬೇಕಾದ ಕಾಂಪೆನ್‌ಸೇಷನ್ ಬೇಗ ಕೊಡುವುದನ್ನು ಬಿಟ್ಟು ಕೋರ್ಟ್ ಕಚೇರಿ ಅಲೆದಾಡುವಂತಾಗಿ ಹೊತೆದಾಟ ಬಡಿದಾಟ ಆಗುತ್ತಿದೆ. ಇದನ್ನು ಬೇಗ ಸೆಟಲ್ ಮಾಡಿ ಕೊಟ್ಟು ಬಿಡಬೇಕು.

ಇನ್ನು ಪಾವರ್ ಬಗ್ಗೆ ಹೇಳುವಾಗ 1976ರ ವೇಳೆಗೆ ಶರಾವತಿ ವಿದ್ಯುತ್ ಶಕ್ತಿ ಸಾಕಾಗದೇ ಹೋಗಬಹುದು, ಆದಕ್ಕಾಗಿ ಕಾಳೀ ನದಿ ಯೋಜನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಕಾಳೀ ನದಿ ಯೋಜನೆಗೆ 45 ಕೋಟಿ ಅಂದಾಜಾಗಿರುವುದರಲ್ಲಿ 2 ಕೋಟಿ ಹಣ ಈ ವರ್ಷ ಒದಗಿಸಿದ್ದಾರೆ. ಒಂದು ಯೋಜನೆ ಪ್ರಾರಂಭವಾಗಬೇಕಾದರೆ ಎಸ್ಟ್ಯಾಬ್ಲಿಷಮೆಂಟ್ ಸುರು ಆಗಿ ಒಂದು ಡಿವಿಜನ್ ಪ್ರಾರಂಭ ಮಾಡುತ್ತಾರೆ. ಹಣ ಅದಕ್ಕೇ ಖರ್ಚಾಗುತ್ತದೆ. ಆದುದರಿಂದ ಕಾಳೀ ನದಿ ಯೋಜನೆಗೆ ಕೇಂದ್ರದ ಸಹಾಯ ನ್ಯಾಷನಲ್ ಗ್ರಿಡ್ ಮೂಲಕ ಮಾಡಿಕೊಂಡರೆ ಕೇಂದ್ರದ ಕೈಯಿಂದ ಸಹಾಯ ದೊರೆಯಬಹುದು. ಏನೇ ಆದರೂ ಕೇಂದ್ರದ ಕೈಗೆ ನೀವು ಬೀಳಬೇಡಿ. 10 ಕೋಟಿ ಸಾಲ ತೆಗೆದುಕೊಂಡು 5 ವರ್ಷಗಳಲ್ಲಿ ಈ ಯೋಜನೆ ಪೂರ್ತಿ ಮಾಡಲು ಅವಕಾಶ ಇದೆ. ಆದುದರಿಂದ ಬೇಗನೇ ಕಾಳಿ ನದಿಯೋಜನೆ ಮಾಡಬೇಕು.

ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್‌ಶಕ್ತಿ ಕೊಟ್ಟಿದ್ದೀರಿ. ಪಂಪು ಸೆಟ್ಟುಗಳನ್ನು ಕೊಟ್ಟಿದ್ದೀರಿ. ಆದರೆ ಎಷ್ಟು ಕೊಟ್ಟಿದ್ದೀರಿ? ಮದ್ರಾಸಿನಲ್ಲಿ ಕಾಮರಾಜರು ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಶಕ್ತಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 20 ಸಾವಿರ ಗ್ರಾಮಗಳಿಗೆ ವಿದ್ಯುತ್ ಶಕ್ತಿ ಕೊಡಬೇಕಾಗಿದೆ. ಇದು ಲಾಭದಾಯಕವಾಗಿಲ್ಲ. ನಷ್ಟದಲ್ಲಿ ನಡೆಯುತ್ತಿದೆ. ಇದಕ್ಕೆ ಸರಕಾರ ಸಹಾಯ ಮಾಡಬೇಕಾಗಿದೆ. ಇದಕ್ಕೆ ಸಹಾಯ ಮಾಡಿ ವಿದ್ಯುತ್ ಶಕ್ತಿ ಕೊಟ್ಟಿದ್ದರೆ ಒಂದು ಸಾವಿರ ಕಡೆ ಕೈಗಾರಿಕೆಗಳನ್ನು ಬೆಳೆಸಲು ಅನುಕೂಲವಾಗುತ್ತಿತ್ತು. ಇದಲ್ಲದೆ ಯಾವ ರೀತಿ ಟ್ಯಾಕ್ಸಸ್ ಹೆಚ್ಚು ಮಾಡಬೇಕು ಎಂಬುದನ್ನು ಕೇಳಿದ್ದಾರೆ. ಈ ವಿಚಾರದಲ್ಲಿ ಒಳ್ಳೇ ಕೆಲಸ ಮಾಡಿದ್ದಾರೆ ಅದಕ್ಕಾಗಿ ಅವರನ್ನು ಅಭಿನಂದಿಸಬೇಕು. ಕನ್ನಡವನ್ನು ರಾಜ್ಯ ಭಾಷೆ ಮಾಡಲು ಕಳಕಳಿ ತೋರಿಸಿದ್ದಾರೆ. ಸಾವಿರಾರು ವರ್ಷದ ಹಿನ್ನೆಲೆ ನಮ್ಮ ಕನ್ನಡ ಭಾಷೆಗೆ ಇದೆ. ಸಾಹಿತ್ಯ ಪರಿಷತ್ತಿಗೆ 25 ಸಾವಿರ ರೂ. ಸಹಾಯ ಕೊಡಬೇಕು ಎಂದು ಇರುವುದನ್ನು ಒಂದು ಲಕ್ಷ ರೂಪಾಯಿ ಹೆಚ್ಚಿಸಬೇಕು. ಯಾಕೆಂದರೆ ಇದು ಸಾಲದು. ಸಾಹಿತ್ಯ ಪರಿಷತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಕಾರ್ಯ ಕ್ರಮ ಇಟ್ಟುಕೊಂಡಿದೆ. ಆದುದರಿಂದ ಪ್ರತಿಯೊಂದು ಜಿಲ್ಲೆಗೆ 10 ಸಾವಿರವಾದರೂ ಕೊಡಬೇಕು ಎಂದು ಸೂಚಿಸುತ್ತೇನೆ.

ಇನ್ನು ಕನ್ನಡ ನಿಘಂಟು, ವಿಶ್ವ ಕೋಶ ಬೇಗ ತಯಾರಾಗಬೇಕು. ವಿಶ್ವವಿದ್ಯಾನಿಲಯ, ಹೈಸ್ಕೂಲುಗಳ ಪಠ್ಯ ಪುಸ್ತಕಗಳ ಮುದ್ರಣಕ್ಕಾಗಿ ಹೆಚ್ಚು ಹಣ ಕೊಟ್ಟಿದ್ದಾರೆ ಆದರೆ ಅದು ಸಾಲದು. ಇನ್ನೂ ಹೆಚ್ಚು ಹಣ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸಾಹಿತ್ಯ ಸಂಗೀತ ನಾಟಕ ಅಕಾಡೆಮಿಗೆ ಸಹಾಯ 5 ಲಕ್ಷ ಇದ್ದುದನ್ನು 7 ಲಕ್ಷ ಮಾಡಿದ್ದಾರೆ. ಆದರೂ ಕೂಡ ಇಷ್ಟು ಹಣ ಸಾಲದು. ಇಂದು ಅನೇಕ ಸಾಹಿತಿಗಳು, ಕಲಾವಿದರು, ನಾಟಕ ಕಂಪೆನಿಗಳವರು ನಿರ್ಗತಿಕರಾಗಿದ್ದಾರೆ. ಕರ್ನಾಟಕ ಏಕೀಕರಣಕ್ಕೆ ಈ ಮಹನೀಯರೇ ಕಾರಣರು. ಅಂಥವರನ್ನು ಸರಕಾರ ಮರೆತಿದ್ದಾರೆ. ಈ ಹಣ ಬಹಳ ಕಡಿಮೆಯಾಗಿರುವುದರಿಂದ ಏಳು ಲಕ್ಷ ಇರುವುದನ್ನು ಹತ್ತು ಲಕ್ಷ ಮಾಡಬೇಕು ಎಂದು ಆಶಿಸುತ್ತೇನೆ.

ಇನ್ನು ಭೂತಲಿಂಗಂ ವರದಿ ಟ್ಯಾಕ್ಸೇಷನ್ ಬಗ್ಗೆ ಇರುವುದನ್ನು ಅನುಮೋದಿಸುತ್ತೇವೆಂದು ಹೇಳಿದ್ದಾರೆ. ಸೇಲ್ಸ್ ಟ್ಯಾಕ್ಸ್ ಎಗ್ಜಂಪಷನ್ ಹತ್ತು ಸಾವಿರದಿಂದ ಇಪ್ಪತ್ತೈದು ಸಾವಿರಕ್ಕೆ ಏರಿಸಿ ವರ್ತಕರಿಗೆ ತುಂಬಾ ಸಹಾಯ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತೇನೆ. ಇದು ಇಂಡಿವಿಜ್ಯುಯಲ್ ಕೇಸಿಸ್ಸಗಳಿಗೆ ಆಯಿತು. ಇದು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ನಗಳಿಗೆ ಅನ್ವಯಿಸುವುದಿಲ್ಲ. ಆದುದರಿಂದ ಕೋ ಆಪರೇಟಿವ್ ಸೊಸೈಟಿಗಳಿಗೆ 50 ಸಾವಿರದವರೆಗೆ ಎಗ್ಜಂಪಷನ್ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಸೂಚಿಸುತ್ತೇನೆ.

ಕಾಂಪೆನ್‌ಷೇಷನ್ ಲಿಮಿಟ್ 75 ಸಾವಿರಕ್ಕೆ ಏರಿಸಿದ್ದೀರಿ ಅದನ್ನು ಒಂದು ಲಕ್ಷಕ್ಕೆ ಏರಿಸಬೇಕು ಎಂದು ಸೂಚಿಸುತ್ತೇನೆ.

ಇನ್ನು ಇಲೆಕ್ಟ್ರಿಸಿಟಿ ರೇಟ್ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಿಂದ ಹೊರಗಡೆ ಅಂದರೆ ಆಂಧ್ರ ಮಹಾರಾಷ್ಟ್ರ ಮದ್ರಾಸಕ್ಕೆ ಕೇವಲ ನಾಲ್ಕೂವರೆಯಿಂದ ಐದು ಪೈಸೆ ರೇಟಿನಲ್ಲಿ ವಿದ್ಯುತ್ ಶಕ್ತಿ ಕೊಟ್ಟು ಇಲ್ಲಿ ಮಾತ್ರ 26 ಪೈಸೆ ರೇಟ್ ಇದ್ದುದನ್ನು 36 ಪೈಸೆಗೆ ಏರಿಸಿದ್ದು ಅನ್ಯಾಯವಾದುದು. ನಮ್ಮಲ್ಲಿ ರೇಟು ಜಾಸ್ತಿ ಮಾಡಿರುವುದನ್ನು ಬಿಟ್ಟು ಬಿಡಬೇಕು ಎಂದು ಹೇಳುತ್ತೇನೆ. ಯಾಕೆಂದರೆ ಈ ರೀತಿ ನಮ್ಮಲ್ಲಿ ಜಾಸ್ತಿ ರೇಟು ಮಾಡಿರುವುದು ಸಾಧುವಲ್ಲ. ಈ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ತಾವು ನಮ್ಮ ಮುಂದೆ ಇಟ್ಟಿರತಕ್ಕಂಥ ಕೆಲವು ವಿಷಯುಗಳು ವಾಸ್ತವ ವಿಷಯಕ್ಕೆ ಬಹು ದೂರವಾಗಿವೆ. ಒಟ್ಟಿನಲ್ಲಿ ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ : ಇವರು ಯಾವ ಒಂದು ಇಮ್ಯಾಜಿನರಿ ಗುರಿಯನ್ನು ಸಾಧಿಸತಕ್ಕ ಬಗ್ಗೆ ಶ್ರಮಪಡಬೇಕಾಗಿಲ್ಲ. ದೇಶದಲ್ಲಿ ಯಾವ ಒಂದು ಆದರ್ಶಕ್ಕೂ ತಗುಲಿ ಹಾಕಿಕೊಳ್ಳದೆ ನೈಜವಾದ ಪದ್ಧತಿಗೆ ಹೊಂದಿಕೊಂಡು ಪರಿಸ್ಥಿತಿಯನ್ನು ಎದುರಿಸಿ ದೇಶದ ಪ್ರಗತಿಯನ್ನು ಸಾಧಿಸತಕ್ಕದ್ದು ಸರಿಯಾದ ಮಾರ್ಗವೆಂದು ಅಭಿಪ್ರಾಯಪಡುತ್ತೇನೆ. Shall we distribute poverty among ourselves? You arrange to have prosperity first and then think of distributing it ಇಷ್ಟನ್ನು ಹೇಳಿ ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಈ ಖೋತಾ ಬಜೆಟ್ಟನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ನಮ್ಮ ಹಣಕಾಸಿನ ಸಚಿವರು 1970-71 ನೇ ಸಾಲಿನ ಆಯವ್ಯಯದ ಹಣಕಾಸಿನ ತಃಖ್ತೆಯನ್ನು ಈ ವರ್ಷ ಅನಾದಿಯಿಂದಲೂ ನಡೆದುಕೊಂಡು ಬರುತ್ತಿದ್ದ ಪದ್ಧತಿಯನ್ನು ಬದಲಾಯಿಸಿ ಅದನ್ನು ಒಂದು ನವೀನ ರೀತಿಯಲ್ಲಿ ಬಹಳ ಬುದ್ಧಿವಂತಿಕೆಯಿಂದಲೂ ಮತ್ತು ಬಹಳ ಜಾಗರೂಕತೆಯಿಂದಲೂ ಮಂಡಿಸಿದ್ದಾರೆ, ಹಾಗೂ ಅವರು ಈ ವಿಚಾರಗಳಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ. ಹೀಗೆ ಕಳೆದ ಐದು ವರ್ಷಗಳಲ್ಲಿ ಇಷ್ಟು ಕಳಕಳಿಯಿಂದ ಮಂಡಿಸಿದಂಥ ಬಜೆಟ್ ಇನ್ನೊಂದಿಲ್ಲ ಎಂದರೆ ತಪ್ಪಾಗಲಾರದು.

ಈ ವರ್ಷ ನಮ್ಮ ಬಜೆಟ್ಟಿನ ಪರಿಸ್ಥಿತಿ ಬಹಳ ಕಷ್ಟದಲ್ಲಿ ಸಿಕ್ಕಿಕೊಂಡಿದೆ. ನಮ್ಮ ರಾಜ್ಯದ ಐದನೇ ಪಂಚವಾರ್ಷಿಕ ಯೋಜನೆಗೆ ಐದನೇ ಹಣಕಾಸಿನ ಆಯೋಗದವರು 18 ಕೋಟಿ ರೂಪಾಯಿಗಳನ್ನು ಖೋತಮಾಡಿದ್ದರಿಂದ ನಮ್ಮ ರಾಜ್ಯದ ಹಣಕಾಸಿನ ವ್ಯವಸ್ಥೆ ಏರುಪೇರಾಗಿ ರಾಜ್ಯಕ್ಕೆ ಬರತಕ್ಕ ಎಲ್ಲ ವರಮಾನಗಳ ಒಟ್ಟು ಮೊತ್ತ 233.7 ಕೋಟಿ ರೂಪಾಯಿಗಳಿದ್ದರೆ ರಾಜ್ಯದ ಒಟ್ಟು ವೆಚ್ಚದ ಮೊಬಲಗು 248.95 ಕೋಟಿಗಳಷ್ಟಿದೆ. ಅಂದರೆ ನಮ್ಮ ಈ ಸಾಲಿನ ಬಜೆಟ್ 15 ಕೋಟಿ 48 ಲಕ್ಷ ರೂಪಾಯಿಗಳಷ್ಟು ಖೋತಾ ಆಗಿದೆ ಎಂದಾಯಿತು. ಈ ವರ್ಷದ ರಾಜ್ಯ ಸರ್ಕಾರದವರ ಕಾರ್ಯಚಟುವಟಿಕೆಗಳು ಬಹಳ ವಿಸ್ತಾರವಾಗಿರುವುದರಿಂದ ಅವುಗಳ ಆದಾಯವೆಚ್ಚಗಳನ್ನು ಹೊಂದಾಣಿಕೆ ಮಾಡುವುದು ಬಹಳ ಕಷ್ಟವಾಗಿದೆ. ಹೀಗಾಗಿ ನಾವು

(ಶ್ರೀ ಡಿ. ಎಂ. ಸಿದ್ದಯ್ಯ)

ಹೆಚ್ಚಿನ ಓವರ್ ಡ್ರಾಫ್ಟ್‌ಗಳನ್ನು ತೆಗೆದುಕೊಳ್ಳಬೇಕಾಯಿತು. ಆದ್ದರಿಂದ ನಾವು ನಮ್ಮ ಹಲವಾರು ರಂಗಗಳಲ್ಲಿ ಎಷ್ಟು ತೃಪ್ತಿಕರವಾಗಿ ಕೆಲಸಕಾರ್ಯಗಳನ್ನು ನಡೆಸಬೇಕಾಗಿತ್ತೋ ಅಷ್ಟನ್ನು ನಡೆಸುವುದಕ್ಕಾಗಿಲ್ಲ. ನಮ್ಮ ಪಕ್ಷವು ರಾಜ್ಯದಲ್ಲಿ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳನ್ನು ಉದ್ಧರಿಸಲು ಪಣತೊಟ್ಟಿರುವುದರಿಂದ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಅತ್ಯಗತ್ಯವಾದಂಥ ಅಂದರೆ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಮತ್ತು ಇರುವುದಕ್ಕೆ ವಾಸಕ್ಕೆ ಒಂದು ಗುಡಿಸಲು ಇಷ್ಟನ್ನಾದರೂ ಒದಗಿಸಬೇಕೆಂಬ ಆ ದೃಷ್ಟಿಯಿಂದ ಕೆಲಸ ನಡೆಸುತ್ತಿದೆ. ಆದರೆ ಹೀಗೆ ಪ್ರತಿಯೊಬ್ಬರ ಕಣ್ಣೀರನ್ನೂ ಒರೆಸಬೇಕೆಂದು ಸಂಕಲ್ಪ ಮಾಡಿದ್ದರೂ ಅದನ್ನು ಒರೆಸುವುದಕ್ಕೆ ಸಾಧ್ಯವಾಗದಿರಬಹುದು. ಆ ಕಣ್ಣೀರು ಎಲ್ಲಿಯವರೆಗೂ ನಾವು ನಮ್ಮ ಕಾರ್ಯವನ್ನು ಮಾತ್ರ ನಿಲ್ಲಿಸುದಿಲ್ಲ ಎಂದು ಹಿಂದೆ ಒಮ್ಮೆ ಮಹಾತ್ಮಾ ಗಾಂಧಿಯವರು ಹೇಳಿದ್ದರು. ಅದೇರೀತಿ ಈ ದಿವಸ ನಮ್ಮ ಸರ್ಕಾರಕ್ಕೆ ರಾಜ್ಯದಲ್ಲಿರತಕ್ಕ ಕೋಟ್ಯಾನು ಕೋಟಿ ಬಡಜನರ ಕಣ್ಣೀರನ್ನು ಒರೆಸುವುದಕ್ಕೆ ಅನೇಕ ಕಾರಣಗಳಿಂದ ಇನ್ನೂ ಸಾಧ್ಯವಾಗಲಿಲ್ಲ. ಅದು ಇನ್ನೂ ಹರಿಯುತ್ತಲೇ ಇದೆ. ಅದನ್ನು ನಾವು ಬಗೆಹರಿಸುತ್ತೇವೆಂದು ಎಷ್ಟರಮಟ್ಟಿಗೆ ಹೇಳಿದ್ದೇವೋ ಅಷ್ಟರಮಟ್ಟಿಗೆ ಅದನ್ನು ಅನುಷ್ಠಾನಕ್ಕೆ ತರಲಾಗಿಲ್ಲ. ಈ ಮಾತುಗಳನ್ನು ಹೇಳುತ್ತಿರುವುದರ ಜೊತೆಯಲ್ಲಿಯೇ ಮಾನ್ಯ ಸಚಿವರು ನಮ್ಮ ರಾಜ್ಯಾಂಗದಲ್ಲಿ ಅಡಗಿರತಕ್ಕ ಡೈರೆಕ್ಟೀವ್ ಪ್ರಿನ್ಸಿಪಲ್ಲುಗಳನ್ನೂ ಪ್ರಸ್ತಾಪ ಮಾಡಿದ್ದಾರೆ, ಅವುಗಳನ್ನೂ ಉದ್ಧರಿಸಿದ್ದಾರೆ. ಅವರ ಭಾಷಣದಲ್ಲಿ ಸರ್ಕಾರ ಕಳೆದ 22 ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಕೆಲಸಗಳನ್ನೂ ಸಾಧಿಸಿದೆ ಎಂಬುದನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ರಾಜ್ಯಾಂಗದಲ್ಲಿರತಕ್ಕ ಆ ಡೈರೆಕ್ಟೀವ್ ಪ್ರಿನ್ಸಿಪಲ್ಲುಗಳು ಅಷ್ಟು ಕಾನೂನು ಬದ್ಧವಲ್ಲದಿದ್ದರೂ ಆ ರಾಜ್ಯಾಂಗಗಳನ್ನು ರಚಿಸುವುದರಲ್ಲಿ ಸಹಾಯಕರಾಗಿದ್ದ ಹಾಗೂ ರಾಷ್ಟ್ರದಲ್ಲಿರತಕ್ಕ ಬಡಬಗ್ಗರ ಕಷ್ಟನಷ್ಟವನ್ನು ಚೆನ್ನಾಗಿ ಅರಿತು ನುರಿತಂಥ ಡಾ|| ಅಂಬೇಡ್ಕರರವರು ದೇಶದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗಳನ್ನು ಸರಿಪಡಿಸುವುದಕ್ಕಾಗಿ ಅವುಗಳನ್ನು ರಾಜ್ಯಾಂಗದಲ್ಲಿ ಸೇರಿಸಿದ್ದರೂ ಅವುಗಳನ್ನು ಕಾರ್ಯಗತ ಮಾಡುವುದರಲ್ಲಿ ಅವುಗಳ ವೇಗ ಬಹಳ ಕುಂಠಿತವಾಗಿದೆ.

> "that the ownership and control of the material resources of the community are so distributed as best to subserve the common good '

ಹೀಗೆ ನಮ್ಮ ಆರ್ಥಿಕಸ್ಥಿತಿಗತಿಗಳು ಉತ್ತಮವಾಗಬೇಕಾಗಿದ್ದರೆ ದೇಶದ ಆರ್ಥಿಕೋತ್ಪನ್ನಗಳೂ ಮತ್ತು ಜನರು ಗಳಿಸಿರತಕ್ಕ ಆಸ್ತಿಪಾಸ್ತಿಗಳೂ ಈ ಎಲ್ಲವೂ ದೇಶದಲ್ಲಿರತಕ್ಕ ಸರ್ವೇಸಾಮಾನ್ಯರ ಉದ್ಧಾರಕ್ಕೆ ನೆರವಾಗಬೇಕೆಂದು ಅವರು ಹೇಳಿದ್ದಾರೆ.

> "that the citizens, men and women, equally, have the right to an adequate means of livelihood;

ಹೀಗೆ ಹೇಳಿರತಕ್ಕ ಮಾತುಗಳೇನಿವೆ ಇವು ಬಹಳ ಮಹತ್ತ್ವದವುಗಳಾಗಿವೆ. ದೇಶದಲ್ಲಿರತಕ್ಕ ಪ್ರತಿ ಒಬ್ಬ ಸಾಮಾನ್ಯ ಮನುಷ್ಯನಿಗೂ ನಾನಾಗಲೇ ಹೇಳಿದಂತೆ ಹೊಟ್ಟೆಗೆ ಅನ್ನ ಮೈಗೆ ಬಟ್ಟೆ ಮತ್ತು ವಾಸಕ್ಕೊಂದು ಗುಡಿಸಲು ಇಷ್ಟಾದರೂ ಇರಲೇಬೇಕು ಇದು ದೇಶದಲ್ಲಿ ಸಾಧಿಸಬೇಕಾಗಿರತಕ್ಕ ನಮ್ಮ ಮೊದಲನೆಯ ಸಮಸ್ಯೆ. ಈ ದಿವಸ ಭರತಖಂಡದಲ್ಲಾಗಲೀ ಅಥವಾ ನಮ್ಮ ಮೈಸೂರು ರಾಜ್ಯದಲ್ಲೇ ಆಗಲಿ ದಿನಕ್ಕೆ ಒಪ್ಪತ್ತು ಊಟಮಾಡತಕ್ಕ ಜನರೆಷ್ಟು ಕೋಟಿ ಇದ್ದಾರೋ ಹಾಗೂ ಮೈಗೆ ಬಟ್ಟೆ ಇಲ್ಲದೆ, ವಾಸಕ್ಕೆ ಮನೆಯಿಲ್ಲದೆ ಬತ್ತಲೆ ತಿರುಗುವಂಥ ಜನರೆಷ್ಟಿದ್ದಾರೋ ಗೊತ್ತಿಲ್ಲ. ಈ ಅಂಶಗಳೆನ್ನೆಲ್ಲಾ ನಾವು ತುಲನಾತ್ಮಕ ದೃಷ್ಟಿಯಿಂದ ನೋಡಿದ್ದೇ ಆದರೆ ನಾವು ಸಮತಾವಾದ ಸಮಾಜದ ನಿರ್ಮಾಣದತ್ತ ಸಾಗುತ್ತಿದ್ದೇವೆಯೇ ಎಂಬುದರ ಬಗ್ಗೆ ವಿಮರ್ಶೆಮಾಡಿ ನೋಡಬೇಕಾಗಿದೆ. ರಷ್ಯಾದೇಶದ ಜನನಾಯಕನಾದ ಲೆನಿನ್ನನು ಕೇವಲ 5 ವರ್ಷಗಳಕಾಲ ಮಾತ್ರ ಅಂದರೆ 1917 ರಲ್ಲಿ ಅಧಿಕಾರಕ್ಕೆ ಬಂದವನು 1922 ರಲ್ಲಿ ನಿಧನ ಹೊಂದಿದನಂತೆ. ಆದರೆ ಆತನು ತಾನು ದೇಶದಲ್ಲಿ ಸಾಧಿಸಬೇಕೆಂದು ಪಣತೊಟ್ಟಿದ್ದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ತಾನು ತನ್ನ ಕಾಲದಲ್ಲೇ ಸಾಧಿಸಿದೆನೆಂಬ ಒಂದು ಸಂತೋಷದಿಂದ ಆತನು ತಾನು ಕುರ್ಚಿಯಲ್ಲಿ ಕುಳಿತು ಹಾಗೇ ಆನಂದಪಡುತ್ತಿದ್ದಾಗ ಕಾಲವಾದನಂತೆ. ಆದರೆ ಅವರದು ಏಕನಾಯಕ ಪ್ರಭುತ್ವವೇ ಇರಬಹುದು, ನಮ್ಮದು ಬೇರೆ ರೀತಿಯ ಆಡಳಿತವಿರಬಹುದು, ನಾವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸುಖೀರಾಜ್ಯವನ್ನು ಸ್ಥಾಪಿಸತಕ್ಕ ಕಾರ್ಯವನ್ನು ಕೇಂದ್ರ ಸರ್ಕಾರ

ಮತ್ತು ರಾಜ್ಯ ಸರ್ಕಾರಗಳು ನಡೆಸುತ್ತಾ ಬಂದಿದ್ದರೂ ದೇಶದಲ್ಲಿರತಕ್ಕ ಶ್ರೀಸಾಮಾನ್ಯರ ಹಾಗೂ ರೈತರ ಮತ್ತು ಕಾರ್ಮಿಕರ ಸ್ಥಿತಿಗತಿಗಳು ಉತ್ತಮಗೊಂಡಿವೆಯೇ ಅವರ ಜೀವನದಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆಯೇ ಎನ್ನುವುದನ್ನು ನಾವು ಪರೀಲಿಸಿದರೆ ನಾವು ಮುಟ್ಟತಕ್ಕ ಗುರಿಗೆ ಇನ್ನೂ ಬಹಳ ಹಿಂದೆಯೇ ಇದ್ದೇವೆಂಬುದನ್ನು ಒಪ್ಪಿಕೊಳ್ಳಲೇ ಬೇಕು. ಇದರಬಗ್ಗೆ ನಾವು ಕರ್ತವ್ಯವಿಮುಖರಾಗಿದ್ದೇವೆ. ಅದಕ್ಕೆ ಸಾಕಷ್ಟು ಕಾರಣಗಳೂ ಉಂಟು. ಇದಕ್ಕೆ ಮೂಲ ಕಾರಣ ಎಂದರೆ ಇಂದು ಭರತಖಂಡದಾದ್ಯಂತವೂ ಎದ್ದಿರತಕ್ಕ ರಾಜಕೀಯ ಅಂದೋಳನವೇ ಹೊರತು ಬೇರೆಯೇನೂ ಇಲ್ಲ. ನಾವು ಆಡಿದ ಮಾತುಗಳನು ಸಾರವಾಗಿ ತತ್ವಗಳನ್ನು ಅನುಷ್ಠಾನಕ್ಕೆ ತರಲಿಲ್ಲ. ಪ್ರತಿಯೊಬ್ಬರೂ ಅಧಿಕಾರ ವ್ಯಾಮೋಹದಲ್ಲಿ ಸಿಕ್ಕಿ ವ್ಯಕ್ತಿಗಳ ಪ್ರತಿಷ್ಠೆಗೆ ಮಣಿದು ನಿಷ್ಪಕ್ಷಪಾತ ಭಾವನೆಯಿಂದ ಕೆಲಸಮಾಡದೆ ಇದ್ದುದೇ ಇದಕ್ಕೆಲ್ಲಾ ಕಾರಣವಾಗಿದೆ ಎಂದು ಮಾನ್ಯ ಸಚಿವರು ತಮ್ಮ ಭಾಷಣದಲ್ಲೂ ಇದನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಸಚಿವರ ಭಾಷಣದ ಬಗ್ಗೆ ನನ್ನ ಸಂತೋಷವನ್ನು ವ್ಯಕ್ತಪಡಿಸಬೇಕಾಗಿದೆ. ಇವರು ತಮ್ಮ ಬಡ್ಜೆಟ್ಟಿನಲ್ಲಿ ಹೇಳಿರತಕ್ಕ ವಿಷಯಗಳು ಬಹಳ ನೈಜ ಸ್ವರೂಪದವುಗಳಾಗಿವೆ. ಕನ್ನಡದಲ್ಲಿ ಒಂದು ಗಾದೆ ಇದೆ. ಹಾಲಿದ್ದಾಗ ಹಬ್ಬವನ್ನು ಮಾಡು ಎಂದು. ಯಾರೇ ಆಗಲಿ ಬರೀ ಬಾಯಿಮಾತಿನಲ್ಲಿ ಏನನ್ನು ಸಾಧಿಸುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಮನಬಿಚ್ಚಿ ಮಾತನಾಡಿದ್ದಾರೆ. ಸರಕಾರದವರು ಮೂಟೆಯುಗಟ್ಟಲೆ ನುಡಿಗಿಂತ ಒಂದು ರಾಗಿಯ ಕಾಳಿನಷ್ಟು ಕೃತಿಯಲ್ಲಿ ಸಾಧಿಸುವುದು ಹೆಚ್ಚಿನದು ಎಂಬುದನ್ನು ಬಹಳ ಚನ್ನಾಗಿ ಹೇಳಿದ್ದಾರೆ. ಅದಕ್ಕೆ ನಮ್ಮ ಪ್ರೋತ್ಸಾಹ ಬೆಂಬಲ ಇದೆ ಎಂದು ಹೇಳುತ್ತೇನೆ. ಇದನ್ನು ಕಾರ್ಯತಃ ಮಾಡಬೇಕೆಂದು ನಾನು ಆಶಿಸುತ್ತೇವೆ. ಅವರು ಸಾಧಿಸಿರುವ ಕಾರ್ಯದ ಪಟ್ಟಿಯನ್ನು ಕೊಟ್ಟಿದ್ದಾರೆ. ಅವರು ಏನೇನು ಸಾಧನೆ ಮಾಡಬೇಕು ಎನ್ನುವುದನ್ನೂ ಹೇಳಿದ್ದಾರೆ. ಮತ್ತು ಸಾಧನೆ ಮಾಡುವುದು ಬೇಕಾದಷ್ಟು ಇದೆ ಎಂತಲೂ ಹೇಳಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ.—ಸಾಧಿಸಿರುವ ಪಟ್ಟಿಯಲ್ಲಿ ಯಾವ ಯಾವ ಕಂಟ್ರಾಕ್ಟರುಗಳಿಗೆ ಏನೇನು ಕೊಟ್ಟಿದ್ದಾರೆ ಎನ್ನುವುದು ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಅದು ಬಹಳ ಸಣ್ಣ ವಿಷಯ. ಹಣಕಾಸಿನ ಸಚಿವರು ನೀರಾವರಿ ಪ್ರಶ್ನೆ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಎಷ್ಟು ಪ್ರಗತಿ ಸಾಧಿಸಬೇಕೋ ಅಷ್ಟು ಪ್ರಗತಿ ಸಾಧಿಸಿಲ್ಲ. ನೀರಾವರಿಗೆ ಒಳಪಟ್ಟಿರುವ ಪ್ರದೇಶ ಕೇವಲ 10 ಪರ್ಸೆಂಟ್ ಇದೆ. ಈ 16 ವರ್ಷಗಳಲ್ಲಿ ಎರಡು ಪರ್ಸೆಂಟ್ ಜಾಸ್ತಿಯಾಗಿದೆ. ಮೈಸೂರು ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ನದಿಯ ಪ್ರತಿಹನಿಯನ್ನು ಉಪಯೋಗಿಸಿದರೆ ಇರಿಗೇಷನ್ ಪೊಟೆನ್‌ಷಿಯಲ್ ಕೇವಲ 25 ಪರ್ಸೆಂಟ್ ಬರುತ್ತದೆ. ಅದಕ್ಕಿಂತ ಜಾಸ್ತಿ ಬರುವುದಿಲ್ಲ. ಇದರ ಬಗ್ಗೆ ಸಾಕಷ್ಟು ಪ್ರಗತಿ ಸಾಧಿಸಿಲ್ಲ ಎಂದು ಆರ್ಥಿಕ ಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀರು ಇಲ್ಲದೇ ಇರುವ ಕಡೆ ಪ್ರಾಜೆಕ್ಟ್ ಕಟ್ಟಿದರೆ ಪ್ರಗತಿ ಆಗುತ್ತದೆಯೇ ?

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ನಮ್ಮ ಪಕ್ಕದ ರಾಜ್ಯವಾದ ಮದ್ರಾಸ್ ಮತ್ತು ಆಂಧ್ರ ರಾಜ್ಯದಲ್ಲಿ ಈ ಪ್ರಾಜೆಕ್ಟ್‌ಗಳನ್ನು ಹೇಗೆ ಕಟ್ಟಿದರು ಎಂದರೆ ಅವರು ಸಾಲಮಾಡಿ ಮಾಡಿದ್ದಾರೆ. ಆಂಧ್ರದವರು ರಸ್ತೆಗಳನ್ನು ಮಾಡುವುದು, ಸೇತವೆಗಳನ್ನು ಕಟ್ಟಿಸುವುದು, ಬಿಲ್ಡಿಂಗ್ ಕಟ್ಟಿಸುವುದು ಮುಂತಾದ ಕೆಲಸ ನಿಲ್ಲಿಸಿ ಅವರ ಸಂಪನ್ಮೂಲಗಳನ್ನೆಲ್ಲಾ ನಾಗಾರ್ಜುನ ಸಾಗರದಯೋಜನೆಗೆ ಹಾಕಿ 130 ಕೋಟಿ ರೂಪಾಯಿಯನ್ನು ಖರ್ಚುಮಾಡಿ ಅದನ್ನು ಮುಗಿಸಿದ್ದಾರೆ. ನಾವುಗಳು ಏನೂಮಾಡದೆ ಹಾಗೆಯೇ ಇದ್ದುಕೊಂಡು ಬಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕೃಷ್ಣ ಪ್ರಾಜೆಕ್ಟನ್ನು ಕಟ್ಟಿಲ್ಲ. ನಾನು ಈ ಮಾನ್ಯ ಸಭೆಯಲ್ಲಿ 6–7 ವರ್ಷಗಳಿಂದಲೂ ಪಬ್ಲಿಕ್ ವರ್ಕ್ಸ್ ಡಿಮ್ಯಾಂಡ್ ಬಂದಾಗಲೆಲ್ಲಾ ಇದೇ ರಾಗವನ್ನು ಹಾಡಿಕೊಂಡು ಬಂದಿದ್ದೇನೆ. ರಸ್ತೆಗಳಾಗಲಿ, ಬಿಲ್ಡಿಂಗ್‌ಗಳಾಗಲೀ, ಸೇತುವೆಗಳಾಗಲಿ, ಇಲ್ಲದೆ ಇದ್ದರೆ ಜನ ಸಾಯುವುದಿಲ್ಲ, ಅನ್ನ ಇಲ್ಲದಿದ್ದರೆ ಜನ ಸಾಯುತ್ತಾರೆ, ಆದುದರಿಂದ ರಸ್ತೆಗಳಿಗೆ ಮುಂತಾದ ಕೆಲಸಕ್ಕೆ ಹಾಕುವ ಹಣವನ್ನು ಈ ಪ್ರಾಜೆಕ್ಟುಗಳಿಗೆ ಹಾಕಿ ಎಂದು ಹೇಳಿಕೊಂಡೇ ಬಂದಿದ್ದೇನೆ. ಆದರೂ ಈ ಹೊತ್ತಿನ ದಿವಸ ಹಣಕಾಸಿನ ಸಚಿವರು ಇದರ ಬಗ್ಗೆ ಸಾಕಷ್ಟು ಕೆಲಸ ಮಾಡಿಲ್ಲ ಎಂದು ಹೇಳಿಕೊಂಡು ಬಂದಿದ್ದಾರೆ. ಕೇವಲ 10ಪರ್ಸೆಂಟ್ ಮಾಡಿದ್ದೇವೆ, ಇನ್ನೂ ಮಾಡುವುದು ಬಹಳ ಇದೆ ಎಂದು ಹೇಳಿದ್ದಾರೆ. ಜೊತೆಗೆ ಸಭಾ ಸದಸ್ಯರಿಗೆ ಗೊತ್ತಿರುವ ಹಾಗೆ ನಮ್ಮ ಕಾವೇರಿ ಒಪ್ಪಂದ 1974ನೇ ಇಸವಿಗೆ ಪುನರ್ವಿಮರ್ಶೆ ಆಗತಕ್ಕಂಥ ಕಾಲ ಬಂದಿದೆ. ಆಂಧ್ರದವರು

ಶ್ರೀ ಡಿ. ಎಂ. ಸಿದ್ದಯ್ಯ)

ನಾಗಾರ್ಜುನ ಸಾಗರವನ್ನು ಕಟ್ಟಿಕೊಂಡು ಕ್ರಸ್ಟ್‌ಗೇಟ್ ಹಾಕುವ ಸ್ಥಿತಿಯಲ್ಲಿದ್ದಾರೆ. ಇದು ಬಹಳ ಪ್ರಾಮುಖ್ಯವಾದದ್ದು. ಅವರು ಎರಡನೇ ಸ್ಟೇಜನ್ನು ಕಟ್ಟಬೇಕಾದರೆ ಕೇಂದ್ರದವರನ್ನು ಒಪ್ಪಿಸಬೇಕಾಗಿದೆ. ಅದನ್ನು ನ್ಯಾಷನಲ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳುವ ಕಾಲದಲ್ಲಿ ಇದ್ದಾರೆ. ಮಾನ್ಯ ಸ್ನೇಹಿತರಾದ ಶ್ರೀಮಾನ್ ಸಿದ್ದವೀರಪ್ಪನವರು ಪ್ರಭಾವವನ್ನು ಬೀರಿ ಜನತೆಗೆ ಅನುಕೂಲ ವಾಗುವಂತೆ ಮಾಡಿಕೊಟ್ಟರೆ ನಾವು ಅವರಿಗೆ ಚಿರಋಣಿಯಾಗಿರುತ್ತೇವೆ. ಕನ್ನಡನಾಡಿನ ಜನತೆಯೂ ಚಿರಋಣಿಯಾಗಿರುತ್ತಾರೆ. ಈವೊತ್ತು ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಕಟ್ಟಿಸುವುದಕ್ಕೆ ಸಾಧ್ಯ ಇಲ್ಲ. ಈವೊತ್ತು ಹೊಟ್ಟೆಯನ್ನಾದರೂ ಕಟ್ಟಿ ನಮ್ಮ ಪ್ರಾಜೆಕ್ಟನ್ನು ಕಟ್ಟಿಸಬೇಕು. ಈ ಪೂರ್ಣ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಇದೆ. ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವ ವಿಚಾರದಲ್ಲಿ ನಿಜವಾಗಿಯೂ ಸಮಾಜವಾದದ ಕಡೆಗೆ ದೇಶವನ್ನು ಒಯ್ಯಬೇಕಾದರೆ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕು. ಸಾರ್ವಜನಿಕ ಕ್ಷೇತ್ರಕ್ಕೆ 3,000 ಕೋಟಿ ರೂಪಾಯಿಗಳ ಬಂಡವಾಳ ಕೇಂದ್ರ ಸರ್ಕಾರದವರು ಹಾಕಿದ್ದರೂ ಸಹ ಲಾಭ ಪಡೆಯುತ್ತಾ ಇಲ್ಲ. ಒಬ್ಬ ವ್ಯಕ್ತಿ ತನ್ನ ಸ್ವಂತ ಬಂಡವಾಳ ಹಾಕಿ ಲಾಭಪಡೆಯುತ್ತಾನೆ. ಸಾರ್ವಜನಿಕ ಕ್ಷೇತ್ರದಲ್ಲಿ ಸರ್ಕಾರದವರು ನಡೆಸಿಕೊಂಡು ಹೋಗತಕ್ಕಂಥಾದ್ದರಲ್ಲಿ ನಷ್ಟವಾಗುವುದಕ್ಕೆ ಕಾರಣ ಏನು? ಅಂದರೆ ಸರ್ಕಾರದಲ್ಲಿ ಸರಿಯಾದವರು, ಯೋಗ್ಯರಾದವರು, ಪ್ರಾಮಾಣಿಕರು ಮತ್ತು ಮುತ್ಸದ್ದಿ ಜನ ಇಲ್ಲದೇ ಇರುವುದ ರಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಲಾಭ ಬರುತ್ತಾ ಇಲ್ಲ. ಪ್ರೈವೇಟ್‌ನವರಿಗೆ ಲಾಭ ಬರುತ್ತಾ ಇದೆ. ಸಾರ್ವಜನಿಕ ಕ್ಷೇತ್ರದಲ್ಲಿ ಹೀಗೆ ಮಾಡಿದರೆ ಸಮಾಜವಾದ ತತ್ವಕ್ಕೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ನಾವು ಬಹಳ ದೂರ ಸರಿದ ಹಾಗೆ ಆಗುತ್ತದೆ, ಎಂದು ನಾವು ಆಗ್ರಹಪೂರ್ವಕವಾಗಿ ಯೋಚನೆ ಮಾಡುತ್ತೇವೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ನಡೆಸುವುದು ಬರೀ ಲಾಭ ಮಾಡುವ ಉದ್ದೇಶವಲ್ಲ. ಆದ್ದರಿಂದ ಎಷ್ಟೋ ಜನಕ್ಕೆ ಕೆಲಸ ಸಿಕ್ಕುತ್ತದೆ. ಅದು ಇಡೀ ರಾಷ್ಟ್ರದ ಸ್ವತ್ತಾಗುತ್ತದೆ. ರಾಷ್ಟ್ರದ ಕಲ್ಯಾಣಕ್ಕೋಸ್ಕರ ವೆಚ್ಚ ಮಾಡಬೇಕು ಎನ್ನುವ ಉದ್ದೇಶದಿಂದ ಹಿಂದೆ ಇದ್ದಂಥ ಹಣಕಾಸಿನ ಸಚಿವರಾದ ಮುರಾರ್ಜಿ ದೇಸಾಯಿಯವರು 3,000 ಕೋಟಿ ರೂಪಾಯಿಗಳನ್ನು ಈ ಕೈಗಾರಿಕೆಗಳಲ್ಲಿ ತೊಡಗಿಸಿದ್ದರೂ ಲಾಭ ಬರಲಿಲ್ಲ, ಬಂದಿದ್ದರೂ 1 ಪರ್ಸೆಂಟ್, 2 ಪರ್ಸೆಂಟ್ ಎಂದಿದ್ದಾರೆ. ನಮ್ಮ ಸರಕಾರದವರು ನಡೆಸತಕ್ಕಂಥ ಸಾರ್ವಜನಿಕ ಕ್ಷೇತ್ರದಲ್ಲಿ ಲಾಭ ಬರದಿದ್ದರೆ ಅದನ್ನು ಸರಿಯಾದ ರೀತಿಯಲ್ಲಿ ನಡೆಸಿ ಲಾಭ ಬರುವಂತೆ ಮಾಡಬೇಕು. ಅಲ್ಲಿಂದ ಅಧಿಕಾರಿಗಳನ್ನು ತೆಗೆದು ಸಾರ್ವಜನಿಕರನ್ನು ಅದರಲ್ಲಿಟ್ಟು ಸರಿಪಡಿಸಬೇಕು. ನಮ್ಮ ದೇಶದಲ್ಲಿ ದೊಡ್ಡ ಕೊರತೆ ಏನೆಂದರೆ ಸರಿಯಾದ ಅಧಿಕಾರಿಗಳು ಪ್ರಾಮಾಣಿಕರಾದ ಅಧಿಕಾರಿಗಳು ಅಮೇರಿಕಾ ದೇಶದಲ್ಲಿ ಪ್ರತಿ 4 ವರ್ಷಗಳಿಗೆ ಚುನಾವಣೆ ಆದಾಗ ಯಾವ ಅಧ್ಯಕ್ಷರು ಚುನಾಯಿತರಾಗಿ ಬರುತ್ತಾರೋ ಅವರ ಪಕ್ಷದವರು ಮತ್ತು ಇನ್ನೂ ಇತರರು ಅಧಿಕಾರಕ್ಕೆ ಬರುತ್ತಾರೆ. ಅವರ ಪಕ್ಷದ ಜನರನ್ನು ಸೆಕ್ರೆಟೇರಿಯೇಟ್‌ಗೆ ಮತ್ತು ಅಡ್ಮಿನಿಸ್ಟ್ರೇಷನ್‌ಗೆ ಹಾಕುತ್ತಾರೆ. ನಾವು ಬ್ರಿಟಿಷ್‌ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುವುದರಿಂದ ರೆಡ್‌ಟೇಪಿಸಮ್‌ನಿಂದ ರಾಜ್ಯಭಾರವನ್ನು ನಡೆಸಿಕೊಂಡು ಬಂದಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಹಾಗಾದರೆ ಕಾಂಗ್ರೆಸ್ ಜನರನ್ನೆ ಅಧಿಕಾರಿಗಳನ್ನಾಗಿ ಹಾಕ ಬೇಕೇ?

ಶ್ರೀ ಡಿ. ಎಂ. ಸಿದ್ದಯ್ಯ.—ಪ್ರಾಮಾಣಿಕತೆ ಸಾರ್ವಜನಿಕ ಸ್ವತ್ತು. ಯಾವ ಪಕ್ಷದಲ್ಲಿ ಪ್ರಾಮಾಣಿಕರಿದ್ದರೂ ಅವರನ್ನು ನೇಮಕ ಮಾಡಿಕೊಳ್ಳಬಹುದು. ಪ್ರಾಮಾಣಿಕತೆ ದೇಶದಲ್ಲಿರ ತಕ್ಕಂಥ ಪ್ರತಿಪ್ರಜೆಯ ಸ್ವತ್ತು. ಯಾರು ಪ್ರಾಮಾಣಿಕರು ಆಗಿದ್ದಾರೋ ದೇಶದ ವಾತ್ಸಲ್ಯ ದಿಂದ ಕೂಡಿದ್ದಾರೋ ಅಂಥವರನ್ನು ಅಧಿಕಾರ ಸ್ಥಾನಕ್ಕೆ ನೇಮಿಸಿಕೊಳ್ಳಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹಾಕಿ ನಷ್ಟವಾಗುತ್ತಾ ಇರುವುದರಿಂದ ಎನ್‌ಕ್ವೈರಿ ಮಾಡಿದ್ದೀರಾ? ದೋಷ ಇದ್ದರೆ ಸರಿಪಡಿ ಸಲು ಕಾರ್ಯಕ್ರಮ ತೆಗೆದುಕೊಳ್ಳಬೇಕು, ಎನ್‌ಕ್ವೈರಿ ಮಾಡಿಸಬೇಕು. 1956ನೇ ಇಸವಿಯಲ್ಲಿ ನೆಹರು ಮುಖಂಡತ್ವದಲ್ಲಿ ಇದ್ದ ಇಂಡಸ್ಟ್ರಿಯಲ್ ಪಾಲಿಸಿಯನ್ನು ಆವಾಗಿನಿಂದ ಅನುಸರಿಸುತ್ತಿದ್ದೇವೆ. ನೆಹರೂರವರು ಸಾರ್ವಜನಿಕ ಕ್ಷೇತ್ರದಲ್ಲಿಗತಕ್ಕಂಥ ಕೈಗಾರಿಕೆಗಳು ದೇಶದ ಸಂಪತ್ತು. ಈ ದೇಶದ ಸಂಪತ್ತು ಹೆಚ್ಚಾದರೆ ಅಭಿವೃದ್ಧಿ ಕಾರ್ಯ ಕಲಾಪಗಳಿಗೆ ದುಡ್ಡು ಸಿಕ್ಕುತ್ತದೆ, ಎಂದು ಹೇಳಿದರು. ಆ ದೃಷ್ಟಿಯಲ್ಲಿ ನೋಡಿದರೆ ನಾವು ಫೈಲ್ಯೂರ್ ಆಗಿದ್ದೇವೆ. ಹಾಗೆ ಆಗುವುದಕ್ಕೆ ಅಧಿಕಾರಿಗಳೇ

ಕಾರಣ. ಈ ವ್ಯವಸ್ಥಾ ಕಾರ್ಯವನ್ನು ಸರಿಯಾಗಿ ವಿಮರ್ಶೆ ಮಾಡಿ ಕೈಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು. ದೋಷಗಳು ಇದ್ದರೆ ಅದನ್ನು ಹೋಗಲಾಡಿಸಲು ಅದಕ್ಕೆ ರೆಮಿಡಿ ಕಂಡುಹಿಡಿಯಬೇಕು. ಪ್ರೈವೇಟ್ ಏಜೆನ್ಸಿಗೆ ಮತ್ತು ಜಾಯಿಂಟ್ ಸ್ಟಾಕ್ ಕಂಪನೀಸ್ ವ್ಯಕ್ತಿಗಳಿಗೆ ಕೈಗಾರಿಕೆಗಳನ್ನು ಯಾವದೃಷ್ಟಿಯಿಂದಲೂ ವಹಿಸತಕ್ಕದ್ದು ಸರಿಯಲ್ಲ. ಪ್ರಾಮುಖ್ಯವಾಗಿ ಈ ಕೈಗಾರಿಕಾ ನೀತಿಯನ್ನು ಅರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಸಮಾಜವಾದ ದಾರಿಯಲ್ಲಿ ಎತ್ತಿ ಹಿಡಿದಿದ್ದಾರೆ. ಮತ್ತು ಆ ದೇಶದ ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ಕ್ರಾಂತಿಕಾರಕವಾಗಿ ತೆಗೆದುಕೊಂಡು ಹೋಗಿ ಅದು ಕಾರ್ಯಗತವಾಗಬೇಕಾದರೆ ಸಾರ್ವಜನಿಕ ಕ್ಷೇತ್ರಗಳನ್ನು ಸರಿಯಾಗಿ ನಡೆಸಬೇಕು. ಸಾರ್ವಜನಿಕ ಕ್ಷೇತ್ರದ ಸಂಪತ್ತು ದೇಶದ ಸಂಪತ್ತು. ಆದರೆ ವ್ಯಕ್ತಿಗಳ ಸಂಪತ್ತು ಹಾಗಲ್ಲ. ಅದು ಅವರ ಸಂಪತ್ತು. ಈ ಕೋಟ್ಯಾಧೀಶ್ವರ ಸಂಪತ್ತು ರಾಜ್ಯದ ಬೊಕ್ಕಸಕ್ಕೆ ಬರುವುದಿಲ್ಲ. ನಮ್ಮ ಕೈಗಾರಿಕಾನೀತಿ ಫಲಪ್ರದವಾಗಬೇಕಾದರೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿರುವ ಲೋಪದೋಷಗಳನ್ನು ತಿದ್ದಬೇಕು. ಮತ್ತು ದೇಶದಲ್ಲಿ ನಾವು ಪ್ರಾಮಾಣಿಕರಾಗಿ ಕೆಲಸವನ್ನು ಕಲಿಯಬೇಕು ಎಂದು ನಮ್ರವಾಗಿ ಸೂಚಿಸಬಯಸುತ್ತೇನೆ.

ಇನ್ನು ಮೂರನೆಯದಾಗಿ ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ದೀನದಲಿತರಿಗೆ ಮತ್ತು ಹರಿಜನರ ವಿಷಯದಲ್ಲಿ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಏರ್ಪಡಿಸುವುದಕ್ಕೆ ಹೆಚ್ಚು ಹಣ ಖರ್ಚು ಮಾಡಬೇಕು. ಅದು ನಮ್ಮ ಪವಿತ್ರವಾದ ಕರ್ತವ್ಯ ಎಂದು ಹೇಳುತ್ತೇನೆ.

4-00 P.M.

ಇವೊತ್ತಿನ ದಿವಸ ಹರಿಜನರಿಗಾಗಲೀ ದೀನ ದಲಿತವರ್ಗದವರಿಗಾಗಲೀ ಅಥವಾ ಇನ್ನುಳಿದ ಹಿಂದುಳಿದವರಿಗಾಗಲೀ ಸ್ವಲ್ಪ ಮಟ್ಟಿಗೆ ಹೆಚ್ಚು ಖರ್ಚ ಮಾಡುತ್ತಿದ್ದೇವೆ ಎಂದರೆ ಅದು ಸಾಲದು. ಇವೊತ್ತು ದೇಶದ ಜನತೆಯೊಳಗೆ ಹಾಗೂ ಸಮಾಜದೊಳಗೆ ಇರತಕ್ಕ ನ್ಯೂನತೆಗಳನ್ನು ತೆಗೆದು ಹಾಕಬೇಕು, ಇಲ್ಲದಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇದನ್ನು ಬಗೆಹರಿಸಲು ಜನತೆಯಲ್ಲಿ ಆರ್ಥಿಕ ಸಮಾನತೆ ಬಂದ ಹೊರತು ಏನೂ ಉಪಯೋಗವಾಗುವುದಿಲ್ಲ. ನಮ್ಮ ದೇಶದಲ್ಲಿ ಇವೊತ್ತು ದೀನ ದಲಿತರು ಹಾಗೂ ಹರಿಜನರು ಗಿರಿಜನರು ಯಾವ ರೀತಿ ಹಿಂದುಳಿದಿದ್ದಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಅವರೂ ಇತರರಂತೆ ಆರ್ಥಿಕವಾಗಿ ಹಾಗೂ ಸಮಾಜಿಕವಾಗಿ ಸಮಾನತೆಯಿಂದಿರಲು ಅವರ ನೆರವಿಗೆ ಬರುವುದು ಪ್ರತಿಯೊಬ್ಬರ ಕರ್ತವ್ಯ. ರಾಜಕೀಯ ಸ್ವಾತಂತ್ರ್ಯ ಬಂದರೆ ಅದರಿಂದ ಆರ್ಥಿಕ ಸ್ವಾತಂತ್ರ್ಯ ಬಂದ ಹಾಗಾಗುವುದಿಲ್ಲ. ಹರಿಜನರು ಗಿರಿಜನರು ಮತ್ತು ದೀನದಲಿತರು ಸಾವಿರಾರು ವರ್ಷಗಳಿಂದಲೂ ಹಿಂದುಳಿದಿದ್ದಾರೆ. ಅವರನ್ನು ಇತರರಿಗೆ ಸಮಾನವಾಗಿ ತರುವವರೆಗೆ, ನಮ್ಮ ಆರ್ಥಿಕ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಿಜವಾಗಿಯೂ ದೀನ ದಲಿತರ ಉದ್ಧಾರವಾಗಬೇಕು, ಸಮಾಜದಲ್ಲಿ ಅವರಿಗೆ ಗೌರವ ಬರಬೇಕು ಎಂದು ಮಾಡಬೇಕಾದರೆ ಅವರಲ್ಲಿ ಆರ್ಥಿಕ ಸಮಾನತೆ ಬೆಳೆದರೇನೇ ಅವರನ್ನು ಮೇಲೆ ತರಬಹುದು ಮತ್ತು ಅವರು ತಮ್ಮ ಕಾಲಿನ ಮೇಲೆ ನಿಲ್ಲುವಂತೆ ಆಗುತ್ತಾರೆ. ಹಾಗಿಲ್ಲದ ಪಕ್ಷದಲ್ಲಿ ಈಗ ದೇಶದಲ್ಲಿ ಏನೊಂದು ಅಂದೋಲನ ನಡೆಯುತ್ತಿದೆ, ಅದು ಇನ್ನು ಮುಂದೆಯೂ ನಡೆಯುತ್ತದೆ. ನಮ್ಮ ದೇಶಕ್ಕೆ ಸ್ವರಾಜ್ಯ ಬಂದು ಸುಮಾರು ಇಪ್ಪತ್ತು ವರ್ಷಗಳಾದರೂ ನಮ್ಮ ಜನರ ಹಕ್ಕುಬಾಧ್ಯತೆಗಳೇನು ಎನ್ನುವುದು ಬರೀ ಕಾಗದದಲ್ಲೇ ಇದೆ. ದೇಶದಲ್ಲಿರುವ ಎಲ್ಲ ಜನರೂ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮತ್ತು ಸುಖವಾಗಿ ಜೀವನ ಮಾಡುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಅವರಿಗೆ ಹಕ್ಕು ಇದೆ. ಇದರಲ್ಲಿ ಒಂದೇ ಪಕ್ಷದವರಿಗೇ ಎಲ್ಲ ರಿಯಾಯಿತಿಗಳನ್ನು ಕೊಡಬೇಕೆಂದು ಅವರೇನೂ ವರ ಪಡೆದುಕೊಂಡು ಬಂದಿಲ್ಲ ಮತ್ತು ಆ ರೀತಿ ಆಗಬಾರದು. ಒಕ್ಕಲುತನ ಮಾಡುವ ರೈತಾಪಿ ಜನರನ್ನು ಮುಂದುವರಿಸಲು ಸಾಧ್ಯ ಇದೆ. ಮಾನ್ಯ ಆರ್ಥಿಕ ಸಚಿವರು ವ್ಯವಸಾಯದ ಬಗ್ಗೆ ಹಾಗೂ ಆರೋಗ್ಯದ ಬಗ್ಗೆ ಮತ್ತು ಇನ್ನಿತರ ಸಮಸ್ಯೆಗಳ ಬಗ್ಗೆ ಅವರ ಭಾಷಣದಲ್ಲಿ ಹೇಳಿದ್ದಾರೆ ಮತ್ತು ಸರಕಾರ ಮುಂದೆ ಮಾಡಬೇಕಾದ ಕೆಲಸವನ್ನೂ ಹೇಳಿದ್ದಾರೆ. ವ್ಯವಸಾಯದಲ್ಲಿ ಹೆಚ್ಚು ಪ್ರಗತಿ ಸಾಧಿಸಲು ಇತ್ತೀಚೆಗೆ ನನಗೆ ಆಗ್ರೋ ಇಂಡಸ್ಟ್ರೀಸ್ ಚೇರ್ಮನ್ನರಾಗಿ ಕೆಲಸ ಮಾಡುವ ಜವಾಬುದಾರಿಯನ್ನು ವಹಿಸಿದ್ದಾರೆ. ಮೊದಲು ವ್ಯವಸಾಯ ಮಾಡುವ ಶ್ರೀಮಂತರಿಗೆ ಮಾತ್ರ 40-50 ಸಾವಿರ ಬೆಲೆಯುಳ್ಳ ಟ್ರಾಕ್ಟರುಗಳ ಉಪಯೋಗ ಸಿಗುತ್ತಿತ್ತು. ಇದರಿಂದ ಬಡವರಿಗೆ ಹೆಚ್ಚು ಅನುಕೂಲ ಸಿಗುತ್ತಿಲ್ಲ ಎಂದು ನಾನು ಬಂದು ಎರಡು ತಿಂಗಳುಗಳಲ್ಲೇ ಎಲ್ಲ ತಾಲ್ಲೂಕುಗಳಲ್ಲೂ ಸರ್ವಿಸ್ ಸೆಂಟರುಗಳನ್ನು ಏರ್ಪಾಡು ಮಾಡಬೇಕೆಂದು ಇದರಿಂದ ಎರಡು ಮೂರು ಎಕರೆ

(ಶ್ರೀ ಡಿ. ಎಂ. ಸಿದ್ದಯ್ಯ)

ಯುಳ್ಳ ಸಣ್ಣ ರೈತರಿಗೂ ಟ್ರಾಕ್ಟರುಗಳನ್ನು ಸುಲಭ ದರದಲ್ಲಿ ಬಾಡಿಗೆಗೆ ಪಡೆದು ಟ್ರಾಕ್ಟರುಗಳ ಉಪಯೋಗ ಪಡೆಯಲು ಅವರಿಗೂ ಅವಕಾಶ ಸಿಗುವಂತೆ ವ್ಯವಸ್ಥೆ ಮಾಡುತ್ತಿದ್ದೇನೆ. ಇದಕ್ಕಾಗಿ ಪ್ರತಿ ತಾಲ್ಲೂಕುಗಳಲ್ಲಿಯೂ ಒಂದು ಟೆಂಪರರಿ ಆಫೀಸು ಎಂದು ಮಾಡಿ ಇದರ ಮೂಲಕ ಬಡ ರೈತರಿಗೆ ಸಹಾಯ ಒದಗಿಸಿಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಇದಕ್ಕಾಗಿ ಒಂದು ವ್ಯವಸ್ಥಿತವಾದ ಯೋಜನೆಯನ್ನೂ ಮಾಡಿಕೊಂಡು ದೇಶದ ಎಲ್ಲ ಕಡೆಗೂ ಆಗ್ರೋ ಇಂಡಸ್ಟ್ರೀಸ್ ಮುಖೇನ ಎಷ್ಟು ಮಟ್ಟಿಗೆ ಪ್ರಯೋಜನ ಜನಕ್ಕೆ ಕೊಡಬಹುದು ಎಂದು ಯೋಚನೆ ಮಾಡುತ್ತಿದ್ದೇವೆ. ಸರಕಾರದವರು ಇತ್ತೀಚೆಗೆ ವ್ಯವಸಾಯದ ಇಲಾಖೆಯಲ್ಲಿರುವ ಇಂಜನಿಯರಿಂಗ್ ಇಲಾಖೆಯನ್ನೂ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿಗೇ ವರ್ಗ ಮಾಡಬೇಕೆಂದು ಮಾಡುತ್ತಿದ್ದಾರೆ. ಇದನ್ನು ಮಾಡಿದರೆ ನಮ್ಮ ಕಾರ್ಯವಿಸ್ತರಣೆಯಾಗಿ ಕೆಲಸ ಇನ್ನೂ ಚೆನ್ನಾಗಿ ಮಾಡಲು ಒಂದು ಅವಕಾಶ ಸಿಗುತ್ತದೆ ಮತ್ತು ರೈತರಿಗೂ ವ್ಯವಸಾಯ ಮಾಡಲು ಸಾಕಷ್ಟು ನೆರವನ್ನು ಕೊಡಲು ಅನುಕೂಲವಾಗುತ್ತದೆ ಮತ್ತು ಇದರಿಂದ ತೃಪ್ತಿಕರವಾಗಿ ಸಕಾಲದಲ್ಲಿ ರೈತರಿಗೆ ನೆರವು ಕೊಡಲೂ ಅನುಕೂಲವಾಗುತ್ತದೆ. ಎರಡು ಮೂರು ಎಕರೆಯುಳ್ಳ ಬಡ ರೈತರಿಗೂ ಟ್ರಾಕ್ಟರುಗಳ ಹಾಗೂ ಬುಲ್‌ಡೋಜರುಗಳ ಅನುಕೂಲವನ್ನು ಒದಗಿಸಿಕೊಡಬೇಕೆಂದು ನಮ್ಮ ಇಲಾಖೆಯಿಂದ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ ದೇಶದಲ್ಲಿ ಆರ್ಥಿಕ ಸಂಪತ್ತನ್ನು ಹೆಚ್ಚು ಮಾಡಬೇಕೆನ್ನುವ ಒಂದು ಆಸೆಯನ್ನು ಮಾನ್ಯ ಹಣಕಾಸಿನ ಸಚಿವರು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆ ಭೂತಲಿಂಗಂ ಕಮಿಟಿಯ ವರದಿ ವಿಷಯವನ್ನೂ ಇದರಲ್ಲಿ ಪ್ರಸ್ತಾಪ ಮಾಡುತ್ತಾ ಟ್ಯಾಕ್ಸ್‌ಗಳನ್ನು ಹೇಗೆ ಜಾಸ್ತಿ ಮಾಡಬಹುದು ಎನ್ನುವುದನ್ನೂ ಸೂಚಿಸಿದ್ದಾರೆ. ಇದರಲ್ಲಿ ಮಾನ್ಯ ಸಭೆಯ ಎಲ್ಲ ಸದಸ್ಯರನ್ನೂ ಯಾವ ರೀತಿ ಸಹಕಾರ ಕೊಡಬೇಕು ಎನ್ನುವುದನ್ನೂ ಸೂಚಿಸಿದ್ದಾರೆ. ಇವೊತ್ತಿನ ದಿನ ಜನರು ಟ್ಯಾಕ್ಸನ್ನು ಕೊಡುವುದಕ್ಕೆ ಶಕ್ತಿ ಇಲ್ಲ ಎಂದು ಹೇಳಬಹುದು. ಇದರಲ್ಲಿ ಪ್ರಿನ್ಸಿಪಲ್ ಏನಿದೆ ಎಂದರೆ The principle of taxation is the capacity to pay, ಈ ರೀತಿ ಇರುವಾಗ ಜನತೆಗೆ ಹೆಚ್ಚು ಸೌಕರ್ಯಗಳನ್ನು ಒದಗಿಸಿಕೊಡಬೇಕಾದರೆ ಜನರು ಸ್ವಲ್ಪಮಟ್ಟಿನ ಹೆಚ್ಚು ತೆರಿಗೆ ಕೊಡಲು ಸಿದ್ಧರಾಗಲೇ ಬೇಕು. ಇದಕ್ಕಾಗಿ ಜನರು ಮೀನ ಮೇಷ ನೋಡುತ್ತಾರೆ ಎಂದು ತೆರಿಗೆಯನ್ನು ಹಾಕದೇ ಇರಲಾಗುವುದಿಲ್ಲ. ತೆರಿಗೆಯನ್ನು ಹಾಕಲೇ ಬೇಕಾಗುತ್ತದೆ. ಹಣಕಾಸಿನಲ್ಲಿ ಒಂದು ಕಡೆ ಸುಮಾರು ಒಂದೂವರೆ ಅಥವಾ ಎರಡು ಕೋಟಿ ಉಳಿತಾಯವಾಗಬಹುದು ಎಂದು ಇದ್ದರೂ ನಮಗೆ ನಮ್ಮ ರಿಸೋರ್ಸ್‌ಗಳು ಯಾವ ರೀತಿ ಇದೆ ಎನ್ನುವ ವಿವರಗಳನ್ನೂ ತಿಳಿಸಿದ್ದಾರೆ. ಇದರ ಜೊತೆಗೆ ಸರಕಾರ ಒಂದು ಸಂಪನ್ಮೂಲ ಸಮಿತಿ ಎಂದು ಮಾಡಿ ಇದರ ಮೂಲಕ ದೇಶದಲ್ಲಿ ಅತಿ ಮುಖ್ಯವಾದ ಕೆಲವು ನೀರಾವರಿ ಯೋಜನೆಗಳನ್ನು ಆದ್ಯತೆ ಕೊಟ್ಟು ಬೇಗನೆ ಕಾರ್ಯಗತವಾಗುವಂತೆ ಮಾಡಲು ಹಣಕಾಸಿನ ಸಚಿವರು ಬಹು ಪ್ರಯಾಸ ಪಟ್ಟು ಸುಮಾರು ಹತ್ತು ಕೋಟಿಯಷ್ಟು ಹಣದ ಉಳಿತಾಯವನ್ನು ತೋರಿಸಿ ನೀರಾವರಿ ಯೋಜನೆಗಳನ್ನು ಬೇಗನೆ ಮಾಡಲು ಬಹುವಾಗಿ ಶ್ರಮಪಟ್ಟು ಸಹಾಯ ಮಾಡಿದ್ದಾರೆ. ಮಾನ್ಯ ಹಣಕಾಸಿನ ಸಚಿವರ ಇನಿಷಿಯೇಟೀವ್ ಇದಕ್ಕೆ ಇಲ್ಲದೆ ಇದ್ದರೆ ಈ ಯೋಜನೆಗಳು ಇಷ್ಟು ಬೇಗ ಕಾರ್ಯಗತವಾಗಲು ಆಗುತ್ತಿರಲಿಲ್ಲ. ಇಂದಿನ ನಮ್ಮ ಕಷ್ಟ ಸ್ಥಿತಿಯನ್ನು ತಕ್ಕ ಮಟ್ಟಿಗೆ ಸುಧಾರಿಸಲು ಪ್ರಯತ್ನ ಮಾಡಿದ್ದಾರೆ. ಕೇಂದ್ರದವರ ಸಹಾಯ ಸಾಕಷ್ಟು ಬರದೇ ಇದ್ದರೂ ನಮ್ಮ ಸರಕಾರ ನೀರಾವರಿ ಯೋಜನೆಗಳಿಗೆ ಸಹಾಯ ಮಾಡುವುದು ತಮ್ಮ ಕರ್ತವ್ಯ ಎಂದು ಅವನ್ನು ತ್ವರಿತವಾಗಿ ಮಾಡಲು ಸಹಾಯ ಮಾಡಿದ್ದಾರೆ. ಮತ್ತೆ ವ್ಯವಸಾಯದ ಇಲಾಖೆ, ಸೋಷಿಯಲ್ ಸರ್ವಿಸಸ್ ಇಲಾಖೆ ಹಾಗೂ ವಿದ್ಯಾಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲು ಸರಕಾರ ಹಣ ಒದಗಿಸಿಕೊಡುವುದು ತಮ್ಮ ಕರ್ತವ್ಯ ಎಂದು ಸಹಾಯ ಮಾಡುತ್ತಿದ್ದಾರೆ. ನಮ್ಮ ಇಂದಿನ ಕಷ್ಟದ ಪರಿಸ್ಥಿತಿಯಲ್ಲಿ ಆಡಳಿತದಲ್ಲಿ ಯಾವ ಪಕ್ಷವೇ ಇರಲಿ ನಮ್ಮ ರಾಜ್ಯದ ಜನರನ್ನು ಸರ್ವತೋಮುಖವಾಗಿ ಅಭಿವೃದ್ಧಿ ಮಾಡಬೇಕು ಎನ್ನುವ ಗುರಿ ಇಟ್ಟುಕೊಂಡು ಎಲ್ಲ ಜನರಿಗೂ ಅನುಕೂಲವಾಗುವ ಹಾಗೆ ಸಹಾಯ ಮಾಡಬೇಕು ಎಂದು ಸಧ್ಯದ ಪರಿಸ್ಥಿತಿಯಲ್ಲಿ ನಮ್ಮ ಎಲ್ಲರ ಸಹಕಾರವನ್ನು ಪಡೆದು ಜನತೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕು. ಇನ್ನು ಕನ್ನಡದ ಜನಕ್ಕೆ ತಮ್ಮ ಭಾಷೆಯನ್ನು ಅಭಿವೃದ್ಧಿ ಮಾಡಲು ಏನೇನು ಮಾಡಬೇಕೆಂಬುದರ ಬಗ್ಗೆ ಸಲಹೆಗಳನ್ನೂ ಕೊಟ್ಟಿದ್ದಾರೆ. ನಮ್ಮ ಆರ್ಥಿಕ ಮಂತ್ರಿಗಳು ಜನತೆಯನ್ನು ಮುಂದಕ್ಕೆ ತರುವ ಕಾರ್ಯದಲ್ಲಿ ಯಾರಿಗೂ ಹೆದರದೆ ನಿಷ್ಪೆಯಿಂದ ಮತ್ತು ಧೈರ್ಯದಿಂದ ಆಡಳಿತವನ್ನು ನಡೆಸುವ ಧೀರೋದಾತ್ತವಾದ ಧ್ಯೇಯವನ್ನು ತಾಳಿ ಸರಕಾರ ಮುಂದೆ ಹೋಗಬೇಕು.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರುವ ಬಜೆಟ್ಟಿನಲ್ಲಿ ಅನೇಕ ಅಂಶಗಳನ್ನು ಮೆಚ್ಚಬಹುದಾದರೂ ಇದರಲ್ಲಿರುವ ಯೋಜನೆಗಳೆಲ್ಲವನ್ನೂ ಪೂರ್ತಿಯಾಗಿ ನಿರ್ವಹಿಸುವುದರಲ್ಲಿ ಈ ಮಂತ್ರಿ ಮಂಡಲದವರು ಸಮರ್ಥರಾಗಿಲ್ಲ ಎನ್ನುವ ಅನುಮಾನಕ್ಕಾಗಿ ನಾನು ಆರ್ಥಿಕ ಮಂತ್ರಿಗಳ ಭಾಷಣವನ್ನು ವಿರೋಧಿಸಿ ಮಾತನಾಡುತ್ತಿದ್ದೇನೆ. ಬಜೆಟ್ಟಿನ ಭಾಷಣ ನೋಡಿದರೆ ಸಾಹಿತ್ಯದ ಹಾಗೆ ಅದನ್ನು ರಸಭರಿತವಾಗಿ ಅರ್ಥಮಂತ್ರಿಗಳು ಮಾಡಿದ್ದಾರೆ. ಇವರ ಭಾಷಣವನ್ನು ಪ್ರಬಂಧ ಸ್ಪರ್ಧೆಗೆ ಏನಾದರೂ ಇಟ್ಟಿದ್ದರೆ ಇವರಿಗೇ ಮೊದಲು ಬಹುಮಾನ ಸಿಗಬಹುದಿತ್ತು. ಎಷ್ಟೋ ಕಡೆಗಳಲ್ಲಿ ಅರ್ಥ ಮಂತ್ರಿಗಳೇ ಇದನ್ನು ಒಪ್ಪಿಕೊಂಡಿದ್ದಾರೆ. ಭ್ರಷ್ಟಾಚಾರ ಅಥವಾ ಅದಕ್ಷತೆ ವಿಷಯಗಳಿಗೆ ತಕ್ಕ ಪರಿಹಾರವನ್ನು ಕಂಡುಹಿಡಿಯುವುದರಲ್ಲಿ ಅರ್ಥ ಮಂತ್ರಿಗಳು ವಿಫಲರಾಗಿದ್ದಾರೆ. ಆರ್ಥಿಕ ಮಂತ್ರಿಗಳ ಸ್ಥಿತಿ ಯಾವ ರೀತಿಯಾಗಿದೆ ಎಂದರೆ ಕಣ್ಣು ಕಾಣದ ಶ್ರೀಮಂತ ಮುದುಕರಂತೆ ಆಗಿದೆ. ಮುದುಕರಾದವರು ಖರ್ಚಿಗಾಗಿ ಮೊಮ್ಮೊಕ್ಕಳಿಗೆ ಹಣ ಕೊಡುವುದೊಂದೇ ಅವರಿಗಿರುವ ಕೆಲಸ. ಅದು ಹೇಗೆ ಖರ್ಚಾಗುತ್ತದೆ ಎಂದು ನೋಡುವ ಅಧಿಕಾರ ಅವರಿಗಿಲ್ಲ. ಹೀಗೆ ನಮ್ಮ ಅರ್ಥ ಮಂತ್ರಿಗಳು ಎಲ್ಲ ಖಾತೆಗಳಿಗೂ ಹಣವನ್ನು ಕೊಡುತ್ತಾರೆ. ಆಯಾ ಖಾತೆಯಲ್ಲಿ ಕೊಡುವ ಹಣದ ವಿನಿಯೋಗ ಸರಿಯಾಗಿ ಆಗುತ್ತದೆಯೋ ಎಂದು ನೋಡುವ ಮತ್ತು ಹಣವನ್ನು ಹೇಗೆ ಖರ್ಚು ಮಾಡಬೇಕು ಎನ್ನುವುದರ ಪರಿಶೀಲನೆ ಮಾಡುವ ಅಧಿಕಾರ ಇವರಿಗಿಲ್ಲ. ಆದರೆ ಇವರೇನೋ ಆಸೆಯನ್ನು ಸಾಕಷ್ಟು ಇಟ್ಟುಕೊಂಡಿದ್ದಾರೆ. ಅವರ ಆಶೋತ್ತರಗಳೇನೋ ಒಳ್ಳೆಯವು. ಆದರೆ ನಮ್ಮ ಮಂತ್ರಿ ಮಂಡಲದಲ್ಲಿ ನಮ್ಮ ಕಡೆಯಿಂದ ಬಂದ ಸದಸ್ಯರ ಚರಿತ್ರೆಗಳನ್ನು ಅರಿತವರಾದ ನಾವು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಇವರು ಮಾಡುವ ಕೆಲಸಗಳನ್ನು ನೋಡುವಾಗ ಇವರು ಕೆಲಸ ಮಾಡಬೇಕೆಂದು ಇದ್ದರೂ ಇದಕ್ಕೆ ತೊಂದರೆಗಳೇ ಬಹಳ ಎಂದು ಹೇಳಬೇಕಾಗಿದೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಈಗಿನ ಮಂತ್ರಿ ಮಂಡಲದಲ್ಲಿ ಅನುಭವಹೀನರು ಅಂದರೆ ಅನುಭವ ಇಲ್ಲದವರು ಕೆಲವರು ಇದ್ದಾರೆ. ಕೆಲವು ಮಂತ್ರಿಗಳು ಹೆಚ್ಚಾಗಿ ಸಂಚಾರಿ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಕೆಲವರಿಗೆ ಮೆರವಣಿಗೆ ಮಾಡಿಸಿಕೊಳ್ಳುವುದು ತುಂಬಾ ಇಷ್ಟ. ಲೋಕೋಪಯೋಗಿ ಶಾಖೆಯ ಉಪಮಂತ್ರಿಯವರು ಮೊನ್ನೆ ಬಿಜಾಪುರದಲ್ಲಿ ಮಾತನಾಡುತ್ತಾ ಕಳೆದ 20 ವರ್ಷಗಳಲ್ಲಿ ಸಮಾಜವಾದವನ್ನು ಮೋಸಗೆಳಿಸಿದ್ದೇವೆ. ಇನ್ನು ಮುಂದೆ ಸಮಾಜವಾದದ ಬಗ್ಗೆ ಮೋಸಗೊಳಿಸುವ ಇಚ್ಛೆ ನಮಗೆ ಇಲ್ಲ ಎಂಬುದಾಗಿ ಹೇಳಿದ್ದಾರೆ. ಸೊಲ್ಲಾಪುರದ ನನ್ನ ಒಬ್ಬ ಮಿತ್ರರು ಈ ವಿಚಾರವನ್ನು ಕಳೆದ ತಿಂಗಳ 13 ರಂದು ನನಗೆ ಹೇಳಿದರು. ನಾವು ಮೈಸೂರಿಗೆ ಸೇರಬೇಕೆಂದು ಚಳವಳಿ ಮಾಡುತ್ತಿದ್ದೇವೆ, ಆ ರೀತಿ ಏನಾದರೂ ಸೇರಿದರೆ ಇಂತಹ ಮಂತ್ರಿಗಳು ಇರುವ ರಾಜ್ಯಕ್ಕೆ ಬಂದು ನಾವು ಏನನ್ನು ತಿನ್ನುವುದು ಎಂಬ ಒಂದಿಗಿ ಕೂಡ ಆ ಮಿತ್ರರು ನನ್ನನ್ನು ಕೇಳಿದರು. ತಾರೀಖು 13-2-1970 ರ ಹುಬ್ಬಳ್ಳಿಯಿಂದ ಪ್ರಕಟವಾಗುವ ಸಂಯುಕ್ತ ಕರ್ನಾಟಕದ ಪತ್ರಿಕೆಯಲ್ಲಿಯೂ ಕೂಡ ಇದೇ ರೀತಿ ಹೇಳಲಾಗಿದೆ. ಮಂತ್ರಿ ಮಂಡಲದಲ್ಲಿರುವವರು ದಕ್ಷತೆಯಿಂದ ಕೆಲಸ ಮಾಡಿ, ದೇಶದ ಹಣ ಸದುಪಯೋಗವಾಗುವಂತಹ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುವಂತಹ ಇಚ್ಛೆ ಈ ಸರ್ಕಾರಕ್ಕೆ ಇದ್ದರೆ ಕೂಡಲೇ ಈ ಉಪಮಂತ್ರಿಗಳನ್ನು ವಜಾ ಮಾಡಬೇಕು. ಈ ಉಪಮಂತ್ರಿಗಳು ತಾವು ಹೇಳಿರುವಂತಹ ಮಾತು ಸತ್ಯ ಎಂಬುದಾಗಿ ಒಪ್ಪಿಕೊಳ್ಳುವುದಾದರೆ ಇದುವರೆಗೆ ಜನರಿಗೆ ಮೋಸ ಮಾಡಿರುವ ಈ ಸರ್ಕಾರದಲ್ಲಿ ಇರುವ ಇಚ್ಛೆ ನಮಗೆ ಇಲ್ಲ ಎಂಬುದಾಗಿ ಇಡೀ ಮಂತ್ರಿಮಂಡಲವೇ ರಾಜೀನಾಮೆ ಕೊಡಬೇಕು. ಈ ಬಜೆಟ್ ಭಾಷಣ ಓದುವಾಗ ಸಹರಾ ಮರುಭೂಮಿಯಲ್ಲಿ ಒಬ್ಬ ಸವಾರ ಒಂಟೆಯ ಮೇಲೆ ಪ್ರಯಾಣ ಮಾಡುವಾಗ ಆತನು ಬಿಸಿಲುಕುದುರೆಯನ್ನು ನೋಡಿ ಅಲ್ಲಿ ನೀರಿದೆ ಎಂದು ತಿಳಿದುಕೊಂಡಂತೆ ಭಾಸವಾಗುತ್ತದೆ. ಆದರೂ ಕೂಡ ಒಂದೊಂದು ಕಡೆ ಓಯಸಿಸ್ ಎಂಬತಕ್ಕಂಥ ಸಮೃದ್ಧವಾದ ಗಿಡಗಳು ಮತ್ತು ಅಲ್ಲಿ ನೀರು ಸಿಗುವಂತೆ ಮಾನ್ಯ ಆರ್ಥಿಕ ಮಂತ್ರಿಗಳ ಭಾಷಣದಲ್ಲಿ ಒಂದೊಂದು ಕಡೆ ಒಳ್ಳೆಯ ವಿಷಯಗಳು ಇವೆ. ಬಿ. ಎಲ್. ಗೌಡ ಸಮಿತಿಯ ವರದಿಯ ಮೇಲೆ ಆಧಾರಿತವಾಗಿರುವ ಒಂದು ತಿದ್ದುಪಡಿಯನ್ನು ಈ ಅಧಿವೇಶನದಲ್ಲಿ ಮಂಡಿಸುತ್ತೇವೆ ಎಂಬ ವಿಚಾರವನ್ನು ಹೇಳಿದ್ದಾರೆ. ಈ ತಿದ್ದುಪಡಿಯ ಮುಖ್ಯ ಉದ್ದೇಶ ಸಹಕಾರಿ ಸಂಸ್ಥೆಗಳಿಂದ ಪಟ್ಟಭದ್ರ ಹಿತಗಳನ್ನು ತೊಡೆದು ಹಾಕುವುದು ಅಥವಾ ಉಚ್ಚಾಟನೆಗೊಳಿಸುವುದು ಎಂಬ ಮಾತನ್ನು ಸಹ ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನನಗೆ ತಿಳಿದಂತೆ ಮಾನ್ಯ ಹಣಕಾಸಿನ ಸಚಿವರು ಸಹಕಾರ ಸಂಸ್ಥೆಗಳ ವಿಚಾರವನ್ನು ಸಂಪೂರ್ಣವಾಗಿ ಅರಿತುಕೊಂಡಿಲ್ಲವೆಂದು ಅರ್ಥಮಾಡಿಕೊಳ್ಳಬಹುದು. ಪಟ್ಟಭದ್ರ ಹಿತಾಸಕ್ತಿಗಳು ಸಹಕಾರ ಸಂಸ್ಥೆಯಲ್ಲಿ ಯಾವ ರೀತಿ ತಳವೂರಿದೆ ಎಂದು ಹೇಳುವುದಾದರೆ ಹಿಂದಿನವರು ಈ ಸಹಕಾರ ಸಂಸ್ಥೆಗಳಲ್ಲಿ ಬೇರೆಯವರು ಕಾಲಿಡಬಾರದಂತೆ ಮಾಡಿಬಿಟ್ಟಿದ್ದಾರೆ. "ಅಗಳಿನ ಮೇಲೆ ಅನ್ನದ ಪರೀಕ್ಷೆ" ಎಂದು ಹೇಳುವಂತೆ ಇದು ಸತ್ಯವಾದ ಮಾತು.

(ಶ್ರೀ ಕೆ. ಪಿ. ನಾಡಗೌಡ)

ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಹೋದ ಅಧಿವೇಶನದಲ್ಲಿ ಮುಧೋಳ್ ತಾಲ್ಲೂಕಿನ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಕಾರ್ಯದರ್ಶಿಯವರು 16 ಸಾವಿರ ರೂಪಾಯಿಗಳನ್ನು ಎತ್ತಿಹಾಕಿರುವುದು ನಿಜವೇ ಎಂಬ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಸಹಕಾರ ಸಚಿವರು ಉತ್ತರ ಕೊಡುತ್ತಾ ಆ ಕಾರ್ಯದರ್ಶಿಯವರಿಂದ ಹಣವನ್ನು ವಸೂಲಿ ಮಾಡಿದ್ದೇವೆ ಮತ್ತು ಅವರನ್ನು ನೌಕರಿಯಿಂದ ತೆಗೆದುಹಾಕಿದ್ದೇವೆಂದು ಹೇಳಿದರು. ಆದರೆ ಇವತ್ತಿನವರೆಗೂ ಕೂಡ ಆ ವ್ಯಕ್ತಿ ಅದೇ ಬ್ಯಾಂಕ್‌ನಿಂದ ತನ್ನ ಸಂಬಳವನ್ನು ಪಡೆಯುತ್ತಿದ್ದಾನೆ. ಇದನ್ನು ನೋಡಿದಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಸಹಕಾರ ಸಂಸ್ಥೆಗಳ ಬಗ್ಗೆ ಏನು ಒಂದು ಆಶೆಯನ್ನು ಇಟ್ಟುಕೊಂಡಿದ್ದಾರೋ ಅದು ಆಶೆಯಾಗಿಯೇ ಉಳಿಯುತ್ತಯೇ ಹೊರತು ಕಾರ್ಯತಃ ಏನೂ ಆಗುವುದಿಲ್ಲವೆಂದು ಹೇಳಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮ ಊರಿನಲ್ಲಿ ಆ ರೀತಿ ನಡೆದಿದ್ದರೆ ನಮ್ಮ ಊರಿನಲ್ಲಿ ತಪ್ಪು ಮಾಡಿದವರಿಗೆ ಪ್ರಮೋಷನ್ ಸಿಕ್ಕಿದೆ.

ಶ್ರೀ ಕೆ. ಪಿ. ನಾಡಗೌಡ.—ತಪ್ಪು ಮಾಡಿದಂತಹ ಕಾರ್ಯದರ್ಶಿಯವರನ್ನು ಅಲ್ಲಿಯೇ ಇಟ್ಟುಕೊಂಡು ಸಂಬಳ ಕೊಡುತ್ತಿರಬೇಕಾದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಬಿ. ಎಲ್. ಗೌಡ ಸಮಿತಿಯ ಬಗ್ಗೆ ಒಂದು ಆಶೆ ಇಟ್ಟುಕೊಂಡು ಆ ಬಗ್ಗೆ ಒಂದು ತಿದ್ದುಪಡಿ ತರಲಾಗುತ್ತದೆ ಎಂದು ಹೇಳುತ್ತಿದ್ದಾರೆ. ಹಿಂದಿನವರು ರೈಲು ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬ ಬಗ್ಗೆ ಮೊದಲಿನಿಂದ ಒಂದು ದಾರಿಯನ್ನು ಮಾಡಿ ಇಟ್ಟಿದ್ದಾರೆ. ಹಿರಿಯರು ಮಾಡಿ ಇಟ್ಟಿರುವ ದಾರಿಯನ್ನು ಬಿಟ್ಟು ಬೇರೆ ದಾರಿಯಲ್ಲಿ ಹೋಗುವುದಾಗಿ ಹೇಳುವುದಾದರೆ ಸಾರ್ವತ್ರಿಕ ಚುನಾವಣೆ ಹತ್ತಿರ ಬರುತ್ತಿದೆ. ಅಲ್ಲಿ ಆರಿಸಿ ಬರುವುದು ಕಷ್ಟವಾಗುತ್ತದೆ. ಈ ಒಂದು ಕಾರಣದಿಂದ ಪಟ್ಟಭದ್ರಹಿತಾಸಕ್ತಿಗಳನ್ನು ಕಿತ್ತೊಗೆಯುವುದು ಕಷ್ಟವಾಗುತ್ತದೆ. ಈ ಕಾರಣದಿಂದ ಮಾನ್ಯ ರಾಮಕೃಷ್ಣ ಹೆಗಡೆಯವರ ಕನಸು ನನಸಾಗುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ. ಸಹಕಾರಿ ರಂಗದಲ್ಲಿ ತಾಲ್ಲೂಕ್ ಮಟ್ಟದಲ್ಲಿ ಒಂದೊಂದು ಮಾರ್ಕೆಟ್ ಕಮಿಟಿಗಳು ಇರುತ್ತವೆ. ಯಾವುದಾದರು ಒಂದು ತಾಲ್ಲೂಕ್‌ನಲ್ಲಿರುವ ಮಾರ್ಕೆಟ್ ಕಮಿಟಿಯು ಅಧಿಕಾರ ಆಡಳಿತ ಪಕ್ಷದವರ ಕೈಯಲ್ಲಿ ಇರದಿದ್ದರೆ ಅದೇ ತಾಲ್ಲೂಕ್‌ನಲ್ಲಿ ಇನ್ನೊಂದು ಮಾರ್ಕೆಟ್ ಕಮಿಟಿಯನ್ನು ನಿರ್ಮಾಣ ಮಾಡುತ್ತಾರೆ. ಈ ಪ್ರಕಾರ ಸರ್ಕಾರದವರು ಒಂದೇ ತಾಲ್ಲೂಕ್‌ನಲ್ಲಿ ಎರಡು ಸೊಸೈಟಿಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ರೀತಿ ಎರಡು ಸೊಸೈಟಿಗಳನ್ನು ನಿರ್ಮಾಣ ಮಾಡುವುದರಿಂದ ಆ ತಾಲ್ಲೂಕ್ ಮಟ್ಟದಲ್ಲಿ ಯಾವ ರೀತಿಯ ಅನ್ಯಾಯ ನಡೆಯುತ್ತದೆ ಎನ್ನುವ ಮಾತು ಅಲ್ಲಿಯ ಪ್ರತಿನಿಧಿಗೇ ಗೊತ್ತು. ಆಡಳಿತ ಪಕ್ಷದವರಿಂದ ನಡೆಸಲ್ಪಡುವ ಸೊಸೈಟಿಯವರಿಗೆ ಸರ್ಕಾರದವರು ತಮ್ಮ ಸಹಾಯ ಮತ್ತು ಸಹಕಾರವನ್ನು ನೀಡುತ್ತಾ ಬೇರೆಯವರು ನಡೆಸುತ್ತಿರುವ ಸೊಸೈಟಿಯವರನ್ನು ಕೆಟ್ಟವರನ್ನಾಗಿ ಮಾಡುತ್ತಿದ್ದಾರೆ. ಈ ಒಂದು ಕೆಟ್ಟ ಪದ್ಧತಿ ಪುರಾಣ ಕಾಲದಿಂದಲೂ ಕೂಡ ನಡೆದುಕೊಂಡು ಬಂದಿದೆ. ಒಬ್ಬ ಕವಿ ಈ ರೀತಿ ಹೇಳುತ್ತಾನೆ:

> ಪೊಡೆವೊಡೆ ಪರಸದೆ ಬಿನ್ನಪಿ ।
> ಪೊಡೆ ಕೇಳದೆ ಮುಂದೆ ನಿಂದಿರಂ ಕಾಣದೆ ತ ॥
> ಕ್ಕಡೆಯೊಳ್ ಕಡೆಗಣಿಸುವ ನೃಪ ।
> ವಿಡಂಬಮಿವು ಲಕ್ಷ್ಮೀ ನಿನ್ನ ದೂಸರಿನತ್ತೆ ॥

ಎಂಬುದಾಗಿ. ಅಂದರೆ ಏನಾದರೂ ಉದ್ದೇಶ ಇಟ್ಟುಕೊಂಡು ಮಂತ್ರಿಗಳ ಹತ್ತಿರ ಹೋಗಿ ವಿನಂತಿ ಮಾಡಿಕೊಂಡಾಗ ಅವರು ಕಿವಿಮುಚ್ಚಿಕೊಳ್ಳುತ್ತಾರೆ. ಯೋಗ್ಯವಾದ ಕೆಲಸಗಳನ್ನು ಸಹ ಮಾಡದೆ ಕಡೆಗಣಿಸುತ್ತಾರೆ. ಮತ್ತು ಬೇರೆಯವರು ಮಾಡುವುದಕ್ಕೂ ಸಹ ಬಿಡುವುದಿಲ್ಲ. ಮಾಡುವ ಕೆಲಸವನ್ನು ವಿಳಂಬವಾಗಿ ಮಾಡುವುದು. ಹಿಂದೆ ರಾಜರೂ ಕೂಡ ವಿಳಂಬ ಮಾಡುತ್ತಿದ್ದರು. ಆ ಒಂದು ರೋಗ ಈಗಿನ ಸರ್ಕಾರದಲ್ಲಿಯೂ ಕಾಣುತ್ತಿದೆ. ಮಂತ್ರಿಮಂಡಲದಲ್ಲಿರುವ ಯಾರಾದರೂ ಒಬ್ಬರು ಮಂತ್ರಿಗಳು ಆಡಳಿತ ಚೌಕಟ್ಟಿನಲ್ಲಿ ಹುಮ್ಮಸ್ಸಿನಿಂದ ಕೆಲಸ ಮಾಡುವುದಕ್ಕೆ ಹೋದಾಗ ಇನ್ನೊಬ್ಬ ಮಂತ್ರಿ ಮೊದಲಿನ ಮಂತ್ರಿಯವರ ಖಾತೆಗೆ ಸಂಬಂಧಪಟ್ಟ ಡೈರೆಕ್ಟರನ್ನು ಮತ್ತು ಸೆಕ್ರೆಟರಿಯವರನ್ನು ಒಳಗಿಂದೊಳಗೆ ಭೇಟಿ ಮಾಡಿ ಕುಹಕ ಕಾರಣಗಳನ್ನು ಕೊಟ್ಟು ಫಲಕಾರಿಯಾದಂತಹ ಯೋಜನೆಗಳು ಜಾರಿಗೆ ಬರುವುದನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಅನ್ನ ಬೆಂದಿದೆಯೋ ಹೇಗೆ ಎಂಬುದನ್ನು ನೋಡಬೇಕಾದರೆ ಒಂದು ಅಗುಳು ಅನ್ನವನ್ನು ತೆಗೆದುಕೊಂಡು ನೋಡಿದರೆ ಸಾಕು. ಎಲ್ಲಾ ಅನ್ನವನ್ನೂ ನೋಡಬೇಕಾಗಿಲ್ಲ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮಂತ್ರಿಗಳೊಬ್ಬರು ಮಾಡಲ್ ಸ್ಕೂಲನ್ನು ನಿರ್ಮಾಣ ಮಾಡಿ ಅದಕ್ಕೆ ಗ್ರಾಜುಯೇಟ್ ಟ್ರೇನ್ಡ್ ಟೀಚರನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದರು. ಆಗ ಇನ್ನೊಬ್ಬ ಮಂತ್ರಿಗಳ ಅನುಯಾಯಿಗಳು ಅದನ್ನು ತಿಳಿದುಕೊಂಡು ಅಲ್ಲಿಗೆ ಪೋಸ್ಟ್ ಮಾಡಿಸಬೇಕೆಂದಿದ್ದ ತಮಗೆ ಬೇಕಾದಂತಹ ಶಿಕ್ಷಕರಿಗೆ ಆ ಕ್ವಾಲಿಫಿಕೇಷನ್ ಇರಲಿಲ್ಲ ಎಂದು ಹೇಳಿ ಬೇರೆ ಟ್ರೇನ್ಡ್ ಗ್ರಾಜುಯೇಟ್ ಟೀಚರನ್ನು ಅಲ್ಲಿಗೆ ಪೋಸ್ಟ್ ಮಾಡುವುದನ್ನು ತಡೆ ಹಿಡಿಸಿದ್ದಾರೆ. ಇದು ಮಾನ್ಯ ವಿದ್ಯಾ ಮಂತ್ರಿಗಳಿಗೆ ಗೊತ್ತಿಲ್ಲ. ಇದರ ಬಗ್ಗೆ ಒಂದು ವರ್ಷದ ವರೆಗೆ ವಿರೋಧಪಕ್ಷದವರು ಪ್ರಶ್ನೆಯನ್ನು ಹಾಕಿದ ನಂತರ ಆ ಪ್ರದೇಶದಲ್ಲಿ ಮಾಡೆಲ್ ಸ್ಕೂಲ್ ಮಾಡುವುದಕ್ಕೆ ಆರ್ಡರ್ ಬಂದಿದೆ. ಆ ಸ್ಕೂಲಿನ ಹೆಡ್ಮಾಸ್ಟರ್ ಚಾರ್ಜ್ ತೆಗೆದುಕೊಳ್ಳುವುದಕ್ಕೆ ಮತ್ತೊಬ್ಬರು ಟ್ರೇನ್ಡ್ ಗ್ರಾಜುಯೇಟ್ ಟೀಚರ್ ಬಂದಿದ್ದಾರೆ. ಈಗ ಅಲ್ಲಿದ್ದ ಉಪಾಧ್ಯಾಯರು ಹೊಸದಾಗಿ ಬಂದಿರತಕ್ಕ ಉಪಾಧ್ಯಾಯರಿಗೆ ಚಾರ್ಜ್ ಕೊಡುವುದಕ್ಕೆ ತಯಾರು ಇಲ್ಲ. ಅಂದ ಮೇಲೆ ಇವೊತ್ತಿನ ದಿವಸ ಬಡ್ಜೆಟ್ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಒಂದು ತತ್ವದ ಆಧಾರದ ಮೇಲೆ ಜನತೆಯ ಆಶೋತ್ತರಗಳನ್ನು ಕಾರ್ಯಗತ ಮಾಡಬೇಕಾದರೆ ನಾನು ಒಂದು ಮಾತನ್ನು ನೇರವಾಗಿ ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಗಾಂಧೀಜಿಯವರ ಶತಾಬ್ದಿಯ ಪುಣ್ಯ ಸ್ಮರಣೆಯ ಕಾಲದಲ್ಲಿ ಕೆಲವು ಸುಧಾರಣೆಗಳನ್ನು ಮಾಡುತ್ತಾ ಮಾಡುತ್ತಾ ಸಾರ್ವಜನಿಕರಿಗೆ ಅಹಿತವನ್ನುಂಟುಮಾಡುವಂತಹ ಎಷ್ಟೋ ಮನೆತನಗಳನ್ನು ಹಾಳುಮಾಡುವಂತಹ ಪ್ರಯತ್ನ ಮಾಡಿ ನಮ್ಮ ರಾಜ್ಯದ ಬೊಕ್ಕಸವನ್ನು ಹೇಗಾದರೂ ಮಾಡಿ ತುಂಬಿಕೊಂಡು ನಮ್ಮ ಬಡ್ಜೆಟ್ಟನ್ನು ಸರಿದೂಗಿಸುವಂತಹ ವಿಚಾರವನ್ನು ಇಟ್ಟುಕೊಂಡು ಪ್ರೊಹಿಬಿಷನ್ ಕಿತ್ತುಹಾಕಿ ಎಕ್ಸೈಜ್ ಡಿಪಾರ್ಟಮೆಂಟ್‌ಅನ್ನು ಬಲಗೊಳಿಸಿ ಸೇಂದಿ ಸಾರಾಯಿಯನ್ನು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಕೆಲವರು ಇಂದ್ರಿಯ ನಿಗ್ರಹ ಇಲ್ಲದೆ ಕುಡಿಯುವ ಚಟಕ್ಕೆ ಬಲಿಯಾಗಿದ್ದಾರೆ. ಕೆಲವರು ಮತ್ತೆ ಯಾವುದೋ ಕಾರಣಕ್ಕಾಗಿಯೋ ಏನೋ ಕುಡಿಯುವ ಚಟಕ್ಕೆ ಬಲಿಯಾಗಿದ್ದಾರೆ. ಇನ್ನೊಂದು ಮಾತನ್ನು ಇದರಲ್ಲಿ ಹೇಳಬೇಕಾಗಿದ್ದರೆ ಬಡವರಿಗೆ ಬೇಕಾದ ವಿಟಮಿನ್ 'ಬಿ' ಈ ಸೇಂದಿ ಮತ್ತು ಸಾರಾಯಿಯಲ್ಲಿ ಇರುತ್ತದೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಮತ್ತು ಅಗ್ನಿಮಾಂದ್ಯಕ್ಕೆ ಇದು ಉತ್ತಮವಾದ ಔಷಧಿ ಎಂತಲೂ ಹೇಳುತ್ತಾರೆ. ದೊಡ್ಡದೊಡ್ಡ ಕಂಟ್ರಾಕ್ಟರುಗಳಿಗೆ ಜಿಲ್ಲಾವಾರು ಆಕ್ಷನ್ ಮಾಡಿಕೊಡಬೇಡಿ ಎಂದು ನನ್ನ ಮಿತ್ರರಾದ ಶ್ರೀಮಾನ್ ವಿ. ಎನ್. ಪಾಟೀಲ್ ಅವರು ಮತ್ತು ನಾಗಪ್ಪನವರು ಅಂಗಲಾಚಿ ಬೇಡಿಕೊಂಡರು. ಆದರೂ ಕೂಡ ಒಬ್ಬ ಕಂಟ್ರಾಕ್ಟರು ಬಿಜಾಪುರ ಜಿಲ್ಲೆಯ ಕಂಟ್ರಾಕ್ಟನ್ನು ಹಿಡಿದಿದ್ದಾನೆ. ಅವರು ಬಾಗಲಕೋಟೆಯಲ್ಲಿ ಒಂದು ಕೇಂದ್ರವನ್ನು ಮಾಡಿಕೊಂಡಿರುತ್ತಾರೆ. ನಾನು, ನನ್ನ ಸ್ನೇಹಿತರು, ಎಕ್ಸೈಜ್ ಆಫೀಸರು ಆ ಕಂಟ್ರಾಕ್ಟರ ಕಾರಿನಲ್ಲಿ ಬಾಗಲಕೋಟೆಯಿಂದ ಮುಧೋಳಿಗೆ ಹೋದೆವು. ಆಗ ಸುಮಾರು 6½ ಗಂಟೆಯಾಗಿತ್ತು. ಅಲ್ಲಿ ಒಂದುಕಡೆ ಒಂದು ದೊಡ್ಡ ಬೆಲ್ಲದ ಗಂಗಾಳದಲ್ಲಿ ಸೇಂದಿಯನ್ನು ಸಾರಾಯಿಯನ್ನು ಸುರಿದು ಅದಕ್ಕೆ ನೀರು ಮತ್ತು ಯಾವುದೋ ಒಂದು ತರಹ ಪೌಡರನ್ನು ಮಿಶ್ರಣ ಮಾಡಿ ಸುಮಾರು 8 ಜನ ಆಳುಗಳಿಂದ ಬಾಟಲುಗಳಿಗೆ ತುಂಬಿಸಿ, ಅದನ್ನು ಪೆಟ್ಟಿಗೆಯಲ್ಲಿಟ್ಟು ಟ್ರಕ್ಕುಗಳಲ್ಲಿ ಭರ್ತಿಮಾಡುತ್ತಿದ್ದರು. ಸೇಂದಿಯನ್ನು ಟ್ಯಾಪ್ ಮಾಡಿ ಅದಕ್ಕೆ ನೀರು ಮತ್ತು ಔಷಧಿಯನ್ನು ಬೆರಸಿ ಬೇರೆ ಬೇರೆ ತಾಲ್ಲೂಕುಗಳಿಗೆ ಅದನ್ನು ಕಳುಹಿಸುತ್ತಾರೆ. ಈ ರೀತಿ ಮಾಡಿದರೆ ಯಾವ ಸತ್ಯ ಉಳಿದೀತು ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಈ ಎಕ್ಸೈಜ್ ಖಾತೆಯಲ್ಲಿ ಕೂಡ ಸಾಕಷ್ಟು ದಕ್ಷತೆಯಿಲ್ಲ. ಸೇಂದಿ, ಷರಾಬು, ಸಾರಾಯಿ, ಇವುಗಳ ವ್ಯಾಪಾರ ಕಳ್ಳರು, ಅಯೋಗ್ಯರು ಇಂಥವರ ಕೈಯಲ್ಲಿ ಸಿಕ್ಕಿ ಈ ಬಾಬಿನಲ್ಲಿ ರಾಜ್ಯದ ಬೊಕ್ಕಸಕ್ಕೆ ಪ್ರಾಮಾಣಿಕವಾಗಿ ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಹಣ ಬರುತ್ತಿಲ್ಲ. ಎಕ್ಸೈಜ್ ಖಾತೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಶುದ್ಧವಾದ ಸೇಂದಿಯನ್ನು ಮಾರಾಟ ಮಾಡುವುದರಿಂದ ಗಿರಾಕಿಗಳು ಮೆಚ್ಚುವುದಿಲ್ಲ ಎನ್ನುವ ಉದ್ದೇಶದಿಂದ ಅದರ ಜೊತೆಗೆ ಔಷಧಿಯನ್ನು ಕೂಡಿಸಿ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದಕಾರಣ ಸೇಂದಿ ಕಂಟ್ರಾಕ್ಟರು ಸೇಂದಿಯಲ್ಲಿ ಔಷಧಿಯನ್ನು ಕೂಡಿಸಿ ಮಾರಾಟ ಮಾಡುತ್ತಾರೆ. ಇಲ್ಲದಿದ್ದರೆ ಅದು ಸಾಕಷ್ಟು ಪ್ರಮಾಣದಲ್ಲಿ ಮಾರಾಟವಾಗುವುದಿಲ್ಲ. ಸಾಮಾನ್ಯವಾಗಿ ಈ ಸೇಂದಿ ಕಂಟ್ರಾಕ್ಟರು ಒಂದು ಜೀಪನ್ನು ಇಟ್ಟುಕೊಂಡಿರುತ್ತಾರೆ. ಈ ಕಂಟ್ರಾಕ್ಟರು ಹಳ್ಳಿಗಳ ಕಡೆ ಹೋಗುವಾಗ ಅವರ ಜೊತೆಯಲ್ಲಿ ಎಕ್ಸೈಜ್ ಇನ್‌ಸ್ಪೆಕ್ಟರನ್ನು ಕರೆದುಕೊಂಡು ಹೋಗುತ್ತಾರೆ. ಹಳ್ಳಿಗಳಲ್ಲಿ ಯಾರಾದರೂ ಫ್ರೆಂಚ್ ಪಾಲಿಷ್ ಇಟ್ಟುಕೊಂಡಿರುವವರು ಒಂದುವೇಳೆ ಗೊತ್ತಾದರೂ ಕೂಡ ಅವನ್ನು ಜಫ್ತಿ ಮಾಡಿ ಅದನ್ನು ಕೋರ್ಟಿಗೆ ಕೊಡುವುದಿಲ್ಲ. ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ.

(ಶ್ರೀ ಕೆ. ಪಿ. ನಾಡಗೌಡ)

ನೀರಾವರಿ, ವಕ್ಕಲುತನ ಇದು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯಾಗಿಲ್ಲ. ವಕ್ಕಲುತನದ ವಿಷಯದಲ್ಲಿ ಒಕ್ಕಲುತನದ ಇಲಾಖೆಯ ಅಧಿಕಾರಿಗಳು ವಕ್ಕಲಿಗರಿಗೆ ಯೋಗ್ಯ ಮಾರ್ಗದರ್ಶನ ಮಾಡುವುದಿಲ್ಲ. ಒಕ್ಕಲುತನ ಇಲಾಖೆಯ ಅಧಿಕಾರಿಗಳು ನಿಮ್ಮಲ್ಲಿ ನಂಬಿಕೆಯನ್ನು ಇಟುಕೊಂಡಿಲ್ಲ. ಇದಕ್ಕೆ ಕಾರಣ ಮಂತ್ರಿಮಂಡಲದಲ್ಲಿರತಕ್ಕ ಕೆಲವರ ಸ್ವಾರ್ಥ. ಅಗ್ರಿಕಲ್‌ಚರಲ್ ಇಲಾಖೆಯಲ್ಲಿ ಅಗ್ರಿಕಲ್‌ಚರಲ್ ಡೆಮಾನ್‌ಸ್ಟ್ರೇಟರ್ ಎಂದು ಇದ್ದಾರೆ. ಇವರಲ್ಲಿ ಸೀನಿಯಾರಿಟಿಗೆ ಸಂಬಂಧಪಟ್ಟ ಹಾಗೆ ಸ್ವಲ್ಪ ತೊಂದರೆ ಇದೆ. ಸ್ಟೇಟ್ ರೀ ಆರ್ಗನೈಜೇಷನ್ ಆದಮೇಲೆ ಶ್ರೀಮಾನ್ ನಿಜಲಿಂಗಪ್ಪ ನವರ ಮಂತ್ರಿಮಂಡಲ ಇದ್ದಾಗ ನಿಜಲಿಂಗಪ್ಪನವರಿಗೆ ಸಂಬಂಧಿ ಎನ್ನುವ ನೆಪದಲ್ಲಿ ಶಿವಪ್ಪ ಎನ್ನುವ ವರಿಗೆ 40 ಜನ ಡೆಮಾನ್‌ಸ್ಟ್ರೇಟರುಗಳನ್ನು ಸೂಪರ್ ಸೀಡ್ ಮಾಡಿ ಪ್ರಮೋಷನ್ ಕೊಟ್ಟಿದ್ದಾರೆ. ಇದರಿಂದ ತೊಂದರೆಯಾಗತಕ್ಕವರು ಕೆಲವರು ಹೈಕೋರ್ಟಿಗೆ ರಿಟ್ ಹೋದರು. ಈ ರಿಟ್ಟಿನಲ್ಲಿ ಸರ್ಕಾರದ ತಲೆ ಬೋಳಿಸಿತು. ಹೈಕೋರ್ಟಿನವರು ಸರ್ಕಾರಕ್ಕೆ ವಿರುದ್ಧವಾಗಿ ಜಡ್ಜ್‌ಮೆಂಟ್ ಕೊಟ್ಟರು. ಅದನ್ನು ಸರ್ಕಾರದವರು ಇಂಪ್ಲಿಮೆಂಟ್ ಮಾಡದೆ ಕಂಟೆಂಪ್ಟ್ ಕೇಸು ಬಂದು ಅವರಲ್ಲಿ ಸರ್ಕಾರದವರು ಹಾಜರಾದರು.

4–30 P.M.

ಅಲ್ಲಿ ಹೇಳಿದರು ಒಂದು ತಾರೀಕು ಕೊಡಿ, ಆ ತಾರೀಕಿನಲ್ಲಿ ಎಲ್ಲಾ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರು. ಆ ಡೇಟ್ ಕೊಟ್ಟರು. ಏಕೆಂದರೆ, ಹೈಕೋರ್ಟಿನವರು ನಂಬುವಂತ ವರು, ನ್ಯಾಯಾಧೀಶರು ನಂಬಿಕೆ ಇರುವವರು. ಡೇಟ್ ಕೊಟ್ಟರ ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಿದರು. ಇವರಲ್ಲಿ ಈ ಸರ್ಕಾರದ್ದು ಏನೂ ಹೋಗಿಲ್ಲ. ಶಿವಪ್ಪನವರು ಅದೇ ಸ್ಥಾನದಲ್ಲಿ ಇದ್ದು ಪೆನ್‌ಶನ್ ಕೊಟ್ಟು ಕಳಿಸುವ ರೀತಿಯಿಂದ, ಸುಪ್ರೀಂ ಕೋರ್ಟಿಗೆ ಹೋಗಿ ಸ್ಟೇ ತಂದರು. ಇಲ್ಲಿ ಬೆಂಗಳೂರಿನಲ್ಲಿ 15–16 ಜನ ಡೆಮೊನಸ್ಟ್ರೇಟರ್ಸ್ ಅಲೆದಾಡುತ್ತಿದ್ದಾರೆ. ಅವರಲ್ಲಿ ಏಕೆ ಬಂದಿದ್ದೀರಿ ಎಂದು ಕೇಳಿದರೆ, ಹೈಕೋರ್ಟಿನಲ್ಲಿ ನಮ್ಮ ರಿಟ್ ಕೆಲಸ ಇತ್ತು, ಅದಕ್ಕಾಗಿ ಬಂದಿದ್ದೇವೆಂದು ಹೇಳುತ್ತಾರೆ. ಇವರು ಹೀಗೆ ಇಲ್ಲಿ ಬಂದು 8–10 ದಿನ ನಿಂತರೆ, ಇವರು ಇಲ್ಲದಿದ್ದಾಗ ಜಿಲ್ಲಾ ಲೆವೆಲಿನಲ್ಲ, ತಾಲ್ಲೂಕು ಲೆವೆಲಿನಲ್ಲಿ, ಇವರ ಕೆಲಸಕ್ಕೆ ಏನೂ ಅತಂಕ ಬರುವುದಿಲ್ಲವೆಂದು ಕಾಣುತ್ತದೆ. ಆದ್ದರಿಂದ ಈ ಕೇಡರ್ ಏನಿದೆ, ಇದನ್ನು ತೆಗೆದರೆ ರಾಜ್ಯ ಬೊಕ್ಕಸದ ಮೇಲೆ ಕಡಿಮೆ ಭಾರ ಬೀಳುತ್ತದೆ. ಕೆಳದರ್ಜೆಯ ಅಧಿಕಾರಿಗಳು, ಸೆಕ್ರೆಟರಿಗಳು, ಅಂಡರ್ ಸೆಕ್ರೆಟರಿಯವರು, ಇವರನ್ನು ಆ ಅಧಿಕಾರಿಗಳು ನೋಡುತ್ತಿರುತ್ತಾರೆ. ಮಂತ್ರಿಯಾದವರು, ವಿದ್ಯೆಯಿಂದ ಅನುಭವದಿಂದ ಬುದ್ಧಿಯಿಂದ ಇದ್ದು ಮತ್ತು ಸಾಕಷ್ಟು ಯೋಗ್ಯರಾದ ಪರಿಜ್ಞಾನದ ಅಧಿಕಾರಿಗಳು ಅವರ ಜೊತೆ ಇದ್ದಾಗ ಅವರು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಆದರೆ ಪ್ರತಿಯೊಂದು ಮಾತಿಗೂ ಮಂತ್ರಿಯವರು ನನ್ನ ಮೇಲೆ ಇದ್ದಾರೆಂದು ಹೇಳಿದರೆ ಹೇಗೆ? ಮಂತ್ರಿಯವರನ್ನು ಕಾನೂನಿನ ಯಾವ ದೃಷ್ಟಿಯಲ್ಲಿ ನೋಡಬೇಕು? ಇವತ್ತು ಮಂತ್ರಿಯವರು ಏನಾಗಿದ್ದಾರೆಂದರೆ, ಇಲ್ಲಿ ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಎಷ್ಟು ಬೇಕೋ, ಅಷ್ಟು ಕೊಟ್ಟರೆ ಸಾಕು. ಅದಕ್ಕೆ 6 ತಿಂಗಳು ಅದನ್ನು ಪಠನ ಮಾಡಿಕೊಂಡು ಇಲ್ಲಿ ಬಂದು ಉತ್ತರ ಹೇಳಿದರೆ ಸಾಕು, ಅವರ ಕೆಲಸ ಮುಗಿಯಿತು. ಮತ್ತೆ ತಮ್ಮ ಕಾರಿನಲ್ಲಿ, ತಮ್ಮ ಬಂಗಲೆಯಲ್ಲಿ ಆರಾಮವಾಗಿ ಇದ್ದು ಬಿಡಬಹುದು. ಹೀಗೆ ಹೇಳಿದ್ದೇನೆಂದು ಬಿ. ಎಂ. ಪಾಟೀಲರು ತಪ್ಪು ತಿಳಿದುಕೊಳ್ಳುವುದು ಬೇಡ. ಹಲವು ಜನರು ಈ ರೀತಿ ಇದ್ದಾರೆ. ಇವತ್ತು ಕಂಡದ್ದನ್ನು ಹೇಳಿದರೆ ಕೆಂಡದಂತಹ ಕೋಪ ಬರುತ್ತದೆ. ವಕ್ಕಲುತನದ ವಿಷಯದಲ್ಲಿ, ಅಲ್ಲಿ ನ್ಯಾಯವಾದ, ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಅಂತಿಮವಾಗದೆ, ಯಾರಿಗೆ ಪ್ರೊಮೋಶನ್ಸ್ ಸಿಗಬೇಕೋ, ಅದನ್ನು ಕೊಡದೆ ಹೋದರೆ ಈ ರೀಜನಲ್ ಡಿಸ್ಪಾರಿಟಿ ತೆಗೆಯದೆ ಹೋದರೆ, ಅಲ್ಲಿ ಅವರು ಸಮಾಧಾನಕರವಾದ ರೀತಿಯಲ್ಲಿ ಕೆಲಸ ಮಾಡಲಾಗುವುದಿಲ್ಲ; ಮತ್ತು ಅವರಿಂದ ದಕ್ಷತೆಯನ್ನು ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಅಪೇಕ್ಷೆ ಮಾಡುವುದು ಉಚಿತವಾಗಲಾರದು. ಅದಕ್ಕೆ ದಕ್ಷತೆ ಮೊದಲು ಮಂತ್ರಿ ಮಂಡಲದಲ್ಲಿರಬೇಕು, ಮತ್ತು ಮಿತವ್ಯಯ ಇರಬೇಕು; ಸಂಚಾರದಿಂದ ಏನಾದರೂ ಫಲ ಸಿಗುವುದಾದರೆ ಮಾತ್ರ ಸಂಚಾರ ಮಾಡಬೇಕು. ಇಲ್ಲದಿದ್ದರೆ ಇಲ್ಲೇ ಕೂತುಕೊಂಡು ಇನ್ ಫಾರ್ಮೇಶನ್ ತೆಗೆದುಕೊಳ್ಳಬೇಕು. ಅದು ಬಿಟ್ಟು ಅಧಿಕಾರಿಗಳು ಜೀಪುಗಳಲ್ಲಿ ಟೂರ್ ಮಾಡುತ್ತಾರೆಂದು ನೀವೂ, ಕಾರಿನಲ್ಲಿ ಹೋಗುವುದು, ಅದರ ಜೊತೆಗೆ ಅಧಿಕಾರಿಗಳನ್ನೂ ಕೊಂಡು ಹೋಗುವುದು, ಇದರಿಂದ ಮಿತವ್ಯಯ ಎಲ್ಲಿ ಸಾಧಿಸಿದ ಹಾಗೆ ಆಗುತ್ತದೆ? ಆದ್ದರಿಂದ ಸರ್ಕಾರದ ಬೊಕ್ಕಸದ ಹಣವನ್ನು ಒಂದು ಮಿತಿಯಲ್ಲಿ ಖರ್ಚು ಮಾಡಬೇಕು.

ಇನ್ನು ಗಡಿ ಭದ್ರತೆಗಾಗಿ ಭಾರತ ಸರ್ಕಾರದವರು ಸೈನ್ಯವನ್ನು ಇಟ್ಟಿದ್ದಾರೆ. ರಾಜ್ಯ ಸರ್ಕಾರದವರಾದ ಮಹಾರಾಷ್ಟ್ರ ಸರ್ಕಾರದವರೂ ಗಡಿ ಭದ್ರತೆಗಾಗಿ, ಆಕ್ರಮಿತ ಪ್ರದೇಶವನ್ನು ಪುನಃ ಮಹಾರಾಷ್ಟ್ರದಲ್ಲಿ ಸೇರಿಸಿಕೊಳ್ಳುವುದಕ್ಕೆ ಒಂದು ಸೇನೆಯನ್ನು ನಿರ್ಮಾಣ ಮಾಡಿದ್ದಾರೆ. ಅಪ್ರತ್ಯಕ್ಷವಾಗಿ ಈ ಸೈನ್ಯಕ್ಕೆ ಸರ್ಕಾರದವರು ಸಹಾಯ ಮಾಡುತ್ತಾರೆ. ಆದರೆ ನಿಮ್ಮ ಗಡಿಗಳು ಅಭದ್ರವಾಗಿವೆ. ಬೆಳಗಾಂ ಪ್ರಕರಣ ನಡೆದಾಗ ನೋಡುವುದಾದರೆ, ಅಲ್ಲಿ ನೀವು ಮಾಡಿದ ಕೆಲಸ ವೇನೆಂಬುದನ್ನು ತಿಳಿಯಬೇಕಾಗಿದೆ. 12 ವರ್ಷಗಳ ಲಾಗಾಯ್ತು, ನೀವು ಮಾಡಿದ ಕೆಲಸವೇನು ? ಗಡಿಗಳನ್ನು ಭದ್ರವಾಗಿ ಇರಿಸಿಕೊಳ್ಳಬೇಕಾದರೆ, ಮಂತ್ರಿಯಾಗಿರುವವರು, ಅನುಭವಿಕರಾದ ಮುಖಂಡರು ಏನು ಮಾಡಿದ್ದಾರೆ? ಅಲ್ಲಿ ಪ್ರತಿ ಸಲವೂ 2-3 ವರ್ಷಗಳಿಗೊಮ್ಮೆ ಮಹಾರಾಷ್ಟ್ರದವರು ಗೊಂದಲ ಮಾಡುವುದಕ್ಕೆ ಕಾರಣವೇನು ಎಂಬುದನ್ನು ವಿಚಾರ ಮಾಡಿದರೆ, ಅಸೆಂಬ್ಲಿಗೆ ಅಲ್ಲಿಯ ಪ್ರತಿನಿಧಿಗಳನ್ನು ಆರಿಸುವಾಗ, ಅಲ್ಲಿಯ ಜನರು ಅವರಿಗೆ ಬೇಕಾದವರನ್ನೇ ಆರಿಸಿ ಕಳುಹಿಸುತ್ತಾರೆ. ಸಿಟಿ ಮುನಿಸಿಪಾಲಟಿಯನ್ನೂ ತಮ್ಮ ಮುಷ್ಠಿಯಲ್ಲಿಟ್ಟುಕೊಂಡಿದ್ದಾರೆ. ಇದಕ್ಕೆ ಕಾರಣವೇನೆಂದರೆ, ನಿಮ್ಮಲ್ಲಿರುವ ಅದಕ್ಷತೆ. ನೀವು ಆರಾಮವಾಗಿ ಕಾಲ ಕಳೆಯುತ್ತಾ ಹೋದರೆ, ನಮ್ಮ ಗಡಿ ಉಳಿಯುವುದಿಲ್ಲವೆಂಬುದನ್ನು ತಿಳಿದುಕೊಳ್ಳಬೇಕು. ಹೊಸದಾಗಿ ಡಾಮ್‌ಸೈಟಿನಲ್ಲಿ, ಮುಳುಗಡೆ ಪ್ರದೇಶದ ಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಅಕ್ಕಪಕ್ಕದಲ್ಲಿ ಒಂದು ಪ್ರಯತ್ನವನ್ನು ಮಾಡಬೇಕು. ಮತ್ತು ಅದೇ ರೀತಿ ಎಷ್ಟು ಉದ್ಯಮಗಳನ್ನು ಬೆಳಗಾಂ ಸಿಟಿ ಏರಿಯಾದಲ್ಲಿ ಸ್ಥಾಪನೆ ಮಾಡುತ್ತೀರೋ, ಅಲ್ಲಿ ಎಲ್ಲಾ ಕನ್ನಡ ಜನರನ್ನು ಆಹ್ವಾನಿಸಿ ಕೆಲಸವನ್ನು ಕೊಡಿ. ಬಜೆಟಿನಲ್ಲಿ ಇದು ಭಾರವಾದರೂ ಚಿಂತೆಯಿಲ್ಲ, ಅಲ್ಲಿ ನಮ್ಮ ಜನಸಂಖ್ಯೆಯನ್ನು ಹೆಚ್ಚಾಗಿ ಬೆಳೆಸಿ ಸಿಟಿ ಮುನಿಸಿಪಾಲಿಟಿ ಮತ್ತು ಅಸೆಂಬ್ಲಿ ಸೀಟುಗಳನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ, ಮಹಾರಾಷ್ಟ್ರೀಯರು ಏನೂ ಮಾಡುವುದಿಲ್ಲ. ಅಲ್ಲಿ ಕೆಲವು ಇನಾಂದಾರರಾದ ಕನ್ನಡಿಗರು ಇರುತ್ತಾರೆ. ಅವರು ಅಲ್ಲಿ ಆರಾಮವಾಗಿ ಇರುವುದಕ್ಕೆ ಪ್ರಯತ್ನ ಮಾಡುತ್ತಾರಲ್ಲದೆ ಬೆಳಗಾಂನ್ನು ಕೈಯಲ್ಲಿಟ್ಟುಕೊಳ್ಳುವುದಕ್ಕೆ ಏನೂ ಪ್ರಯತ್ನವನ್ನು ಅವರು ಮಾಡುವುದಿಲ್ಲ. ಆದ್ದರಿಂದ ಸರ್ಕಾರದ ಕರ್ತವ್ಯವೇನೆಂದರೆ, ಗಡಿಗಳನ್ನು ಭದ್ರವಾಗಿ ಕಾಯ್ದಿಟ್ಟುಕೊಳ್ಳುವುದು. ಈ ಕೆಲಸವನ್ನು ತಾವು ಈಗಲೇ ಕೈಗೆ ತೆಗೆದುಕೊಂಡು, ಒಳ್ಳೆಯ ಮಾರ್ಗದಲ್ಲಿ ಮುಂದುವರಿಯಬೇಕೆಂದು ಏನು ಸಲಹೆಗಳು ಬಂದಿವೆ, ಅವುಗಳನ್ನು ಸ್ವಾಗತ ಮಾಡಿ, ಈ ಸೂಚನೆಯಲ್ಲಿ ಪ್ರತ್ಯೇಕವಾಗಿ ಉಳಿದಿದ್ದವರನ್ನೂ ಮನವೊಲಿಸಿ, ಎಲ್ಲಾ ಮಂತ್ರಿಯವರು ದಕ್ಷತೆಯಿಂದ, ಶಿಸ್ತಿನಿಂದ ಕೆಲಸ ಮಾಡಿ ನಮ್ಮ ರಾಜ್ಯದ ಒಂದು ಕಾಸೂ ದುರ್ವಿನಿಯೋಗವಾಗದ ಹಾಗೆ ನೋಡಿಕೊಳ್ಳುತ್ತೇವೆಂಬ ಆಶ್ವಾಸನೆಯನ್ನು ತಮ್ಮ ಉತ್ತರದಲ್ಲಿ ನಿರೀಕ್ಷಣೆ ಮಾಡಿಕೊಂಡು, ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. CHAIRMAN (Sri D. M. SIDDAIAH) in the Chair]

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅರ್ಥ ಸಚಿವರು ಏನೊಂದು ಬಜೆಟನ್ನು ನಮ್ಮ ಮುಂದೆ ಇಟ್ಟಿದ್ದಾರೆ, ಅದನ್ನು ಮಂಡಿಸುತ್ತಾ ಹಲವಾರು ಮಾತುಗಳನ್ನು ಅವರು ಆಡಿದ್ದಾರೆ. ಅವರು ಮುಖ್ಯವಾಗಿ ನಮ್ಮ ದೇಶದಲ್ಲಿರುವಂತಹ ಘಟನಾವಳಿಯ ಕೆಲವು ಅಂಶಗಳನ್ನು ಹೇಳಿ, ಅದಕ್ಕನುಗುಣವಾಗಿ ನಾವು ನಡೆಯುತ್ತಿದ್ದೇವೆಂದು ಹೇಳಿದ್ದಾರೆ. ಅದರಲ್ಲಿರುವ ಕೆಲವು ಅಂಶಗಳನ್ನು ಈ ದಿನ ಅವರು ಕೊಟ್ಟಿದ್ದಾರೆ. ನಾನಾದರೆ ಘಟನಾವಳಿಯ ಎಲ್ಲಾ ಅಂಶಗಳನ್ನು ಓದಲಿಕ್ಕೆ ಹೋಗುವುದಿಲ್ಲ. ಆದರೆ ಅವರು ಏನು ದಿಕ್ಸೂಚಿಗಳನ್ನು ಕಾರ್ಯಗತ ಮಾಡಿದ್ದೇವೆಂದು ಹೇಳುತ್ತಾರೆ, ಅದನ್ನು ಕಾರ್ಯಗತ ಮಾಡಿದ್ದಾರೆಯೋ ಇಲ್ಲವೋ ಎಂದು ನೋಡಬೇಕಾದರೆ, ಘಟನಾವಳಿಯ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಏನಿದೆ, ಅದರಲ್ಲಿ ಎರಡು ಅಂಶಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಕಾನ್‌ಸ್ಟಿಟ್ಯೂಷನ್ನಿನ 39ನೇ ಸೆಕ್ಷನ್ನಿನ (ಎ), (ಬಿ), ಮತ್ತು (ಸಿ) ಏನಿದೆಯೋ ಅವು ಮೂರು ಬಹಳ ಮುಖ್ಯವಾದುವು. ಅವು ಈ ರೀತಿ ಇವೆ :

"The State shall, in particular, direct its policy towards securing—

(a) that the citizens, men and women equally, have the right to an adequate means of livelihood ;

(b) that the ownership and control of the material resources of the community are so distr buted as best to subserve the common good ;

(ಶ್ರೀ ಎಂ. ಎಸ್. ಕೃಷ್ಣನ್)

(*c*) that the operation of the economic system does not result in the concentration of wealth and means of production to the common detriment."

ಇವು ಮೂರು ಬಹಳ ಮುಖ್ಯಾಂಶಗಳು. ಈ ಅಂಶಗಳನ್ನು ಇವತ್ತಿನದಿವಸ ಕಾರ್ಯಗತ ಮಾಡುವ ರೀತಿಯಲ್ಲಿ ಈ ಸರ್ಕಾರ ನಡೆಯುತ್ತಿದೆಯೆಂದು ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೇಳಿದ್ದಾರೆ. ಅಷ್ಟೇ ಅಲ್ಲ. ಪುಟ 47ರಲ್ಲಿ ನಮ್ಮದು ಪ್ರಗತಿಪರ ರಾಜ್ಯವೆಂದು ಹೇಳಿದ್ದಾರೆ. ಅದರ ಜೊತೆಯಲ್ಲಿ ಅನೇಕ ಮಾತುಗಳನ್ನು ಹೇಳಿದ್ದಾರೆ. ನೀವು ಯಾವ ಆಧಾರದ ಮೇಲೆ ಇವನ್ನು ಹೇಳುತ್ತಿದ್ದೀರಿ, ಕಾರ್ಯಗತಮಾಡಿದ್ದೇವೆಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ? ಕೆಲವು ಅಂಕಿ ಅಂಶಗಳನ್ನು ಇಲ್ಲಿ ಕೊಟ್ಟಿದ್ದೀರಿ. ಅವನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರೊ ಗೊತ್ತಿಲ್ಲ. ನೀವು ಇಲ್ಲಿ ಏನು ಅಂಕಿ ಅಂಶಗಳನ್ನು ಕೊಟ್ಟಿದ್ದೀರೋ ಅವನ್ನು ನಾವು ಪೂರ್ತಿಯಾಗಿ ಒಪ್ಪಿಕೊಳ್ಳುವ ಹಾಗೆ ಇಲ್ಲ. ಹಿಂದೆ ವಿದ್ಯುಚ್ಛಕ್ತಿ ಕಡಿಮೆಯಾಗಿ ಉತ್ಪಾದನೆಯಾಗುತ್ತಿತ್ತು, ದರವೂ ಕಡಿಮೆ ಇತ್ತು, ಈಗ ದರ ಮತ್ತು ಉತ್ಪಾದನೆ ಎರಡೂ ಜಾಸ್ತಿಯಾಗಿದೆ. ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಅದಕ್ಕಾಗಿ ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. ಅದೇ ಸಮಯದಲ್ಲಿ ಸಾವಿರಾರು ಗ್ರಾಮಗಳಿಗೆ ಬೆಳಕು ಬಂದಿಲ್ಲ ಹೆಚ್ಚಿನ ಗ್ರಾಮಗಳಿಗೆ ಬೆಳಕು ಬಂದಿಲ್ಲ. ಇದಕ್ಕೆ ಕಾರಣ ಕೊಡಿ ಎಂದರೆ ಉತ್ತರವಿಲ್ಲ. ಅಷ್ಟೇ ಅಲ್ಲ. ಮೂಲಭೂತವಾಗಿ ಪರಿಶೀಲನೆ ಮಾಡುವುದಾದರೆ ಸರ್ಕಾರದವರು ಸಮಾಜವಾದದ ಉನ್ನತ ಧ್ಯೇಯವನ್ನು ಎತ್ತಿ ಹಿಡಿಯುವ ರೀತಿಯಲ್ಲಿ ಮಾನ್ಯ ಅರ್ಥ ಸಚಿವರು ಮಾತನಾಡಿದ್ದಾರೆಂದು ಕೆಲವರು ಹೇಳಿದ್ದಾರೆ. ಆದರೆ ಇದರಲ್ಲಿ ಸಮಾಜವಾದ ಎಂಬ ಒಂದು ಪದವೂ ಇಲ್ಲ.

ಸಭಾಪತಿಯವರು.—ನಿಮಗೆ ಕಾಣುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಕಾಣುವುದಿಲ್ಲವೆಂದು ಹೇಳಿದರೆ, ನನಗೆ ಕನ್ನಡಕ ಹಾಕುವ ಪದ್ಧತಿ ಇಲ್ಲ. ಸಮಾಜವಾದ ಎಂಬ ಪದ ಎಲ್ಲಿದೆಯೆಂಬುದನ್ನು ಕೆದಕಿ ಕೆದಕಿ ನೋಡಬೇಕು. ಭೂತಗನ್ನಡಿಯಲ್ಲಿ ನೋಡಿದರೂ ಸಹ ಸಿಕ್ಕುವುದಿಲ್ಲ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಕೆಲವು ದಿನಗಳ ಕೆಳಗೆ ಮಾತನಾಡುತ್ತಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಬ್ಯಾಂಕ್ ರಾಷ್ಟ್ರೀಕರಣವನ್ನು ತೆಗಳುವ ರೀತಿಯಲ್ಲಿ ಹೇಳಿದ್ದಾರೆ. ಮಾನ್ಯ ಅರ್ಥ ಸಚಿವರು ಬ್ಯಾಂಕುಗಳ ರಾಷ್ಟ್ರೀಕರಣದಿಂದ ಆಗುವ ಅಪಾಯವನ್ನು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಭಾಷಣ ಓದಿದಲ್ಲಿ ಅರ್ಥ ಸಚಿವರು ಬ್ಯಾಂಕ್ ರಾಷ್ಟ್ರೀಕರಣಕ್ಕೆ ವಿರೋಧವಾಗಿದ್ದಾರೆ ಎಂಬ ಅಭಿಪ್ರಾಯ ಬರುತ್ತದೆ. ಒಂದೆಡೆ ಕೇಂದ್ರ ಸರ್ಕಾರ ಬ್ಯಾಂಕ್ ರಾಷ್ಟ್ರೀಕರಣ ಒಳ್ಳೆಯದೆಂದೂ, ಪ್ರಗತಿಪರವಾದದ್ದೆಂದೂ ಹೇಳಿ, ಜನತೆಯ ಒತ್ತಾಯದ ಪರಿಣಾಮವಾಗಿ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದ್ದಾರೆ. ಇನ್ನೊಂದೆಡೆ ನಮ್ಮ ರಾಜ್ಯ ಸರ್ಕಾರದ ಆರ್ಥಿಕ ಸಚಿವರು ಬ್ಯಾಂಕ್ ರಾಷ್ಟ್ರೀಕರಣವನ್ನು ತೆಗಳಿ ಮಾತನಾಡಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ? ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಧೋರಣೆಯನ್ನು ವಿರೋಧಿಸುತ್ತದೆ ಎಂದಲ್ಲವೇ ಅರ್ಥ ಬರುವುದು ? ಇದನ್ನು ಸ್ಪಷ್ಟಪಡಿಸಲಿ. ಎಲ್ಲರಿಗೂ ತಿಳಿದಂತೆ ನಮ್ಮ ದೇಶದ ಬಂಡವಾಳಗಾರರೂ, ಪಟ್ಟಭದ್ರಹಿತಗಳೂ, ಕೋಮುವಾರು ಹಿತಾಸಕ್ತಿಗಳೂ ರಾಷ್ಟ್ರೀಕರಣವನ್ನು ವಿರೋಧಿಸುತ್ತಿದ್ದಾರೆ. ಜನಸಂಘದವರು ಬ್ಯಾಂಕ್ ರಾಷ್ಟ್ರೀಕರಣ ಮಾಡಿರುವುದು ತಪ್ಪೆಂದು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳಬಹುದು. ಏಕೆಂದರೆ ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಕೋಮುವಾರು ಹಿತಾಸಕ್ತಿಗಳ ಪರವಾಗಿರುವವರು ಬಂಡವಾಳಗಾರರ ಹಿತರಕ್ಷಕರು. ಸಮತಾವಾದದ ಮಾತನ್ನಾಡುವ ಶ್ರೀ ರಾಮಕೃಷ್ಣ ಹೆಗಡೆಯವರು ಇವರ ಜೊತೆಯಲ್ಲಿ ಸೇರಿಕೊಂಡಿದ್ದರೆ, ಇವರ ಸಮತಾವಾದ ಎಲ್ಲಿ ಹೋಯಿತು ? ಇವರೂ ಸಹ ಜನಸಂಘದವರೊಡನೆ ಸೇರಿ ಮುಸಲ್ಮಾನರನ್ನು ಭಾರತೀಕರಣ ಮಾಡಹೊರಟಿದ್ದಾರೇನು ?

ಶ್ರೀ ಬೋಳಾ ರಘುರಾಮ ಶೆಟ್ಟಿ.—ಇಂದಿರಾಗಾಂಧಿಯವರನ್ನೂ ಸಹ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮನ್ನೇ ಮೊದಲು ಮಾಡಬೇಕಾಗಿದೆ. ಮಾನ್ಯ ಸಚಿವರು ಸಮತಾವಾದದ ಹೆಸರಿನಲ್ಲಿ ಮೋಸ ಮಾಡುವುದು ಬೇಡ. ಅವರಿಗೆ ಸಮತಾವಾದವೆಂದರೇನು ಎಂಬುದು ತಿಳಿಯಬೇಕಾಗಿದೆ. ಇಂದಿನ ಕಾಲದಲ್ಲಿ ಎಲ್ಲರೂ ಸಮತಾವಾದ ನಾಮಸ್ಮರಣೆ ಮಾಡುತ್ತಾರೆ. ಆದರೆ ನಿಜವಾದ ಸಮತಾವಾದವೆಂದರೇನು ? ನನ್ನ ಅಭಿಪ್ರಾಯದಲ್ಲಿ, ಯಾರು

ಉತ್ಪಾದನೆ ಮಾಡುತ್ತಾರೋ ಅಂತಹವರ ಕೈಯ್ಯಲ್ಲಿ ಉತ್ಪಾದನಾ ಯಂತ್ರಗಳೂ ಶಕ್ತಿಗಳೂ ಇರಬೇಕು. ಹೀಗಿರುವ ಸಮಾಜ ಮಾತ್ರ ಸಮತಾವಾದಿ ಸಮಾಜ. ನೀವು ಠಕ್ಕು ಸಮತಾವಾದ ಹೇಳಿ ಜನರನ್ನು ವಂಚಿಸಬೇಡಿ. ಸಮತಾವಾದವಿರಲಿ. ನೀವು ಪ್ರಗತಿಪರವಾದ ಯಾವುದಾದರೂ ಹೆಜ್ಜೆಯೊಂದನ್ನು ಇಟ್ಟಿದ್ದೀರಾ? ಶಾಸನಗಳನ್ನು ಕಂಡಿದ್ದೀರಾ? ಕೇಂದ್ರದವರಾದರೂ, ಬ್ಯಾಂಕ್ ರಾಷ್ಟ್ರೀಕರಣ ಮಾಡಿ ಒಂದು ಪ್ರಗತಿಪರ ಹೆಜ್ಜೆ ಇಟ್ಟರು. ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಕ್ಷಣ ಸಮತಾವಾದ ಬಂದಿತು ಎಂದು ಹೇಳುವುದಿಲ್ಲ. ಇನ್ನೂ ಅನೇಕ ಧೀರ ಹೆಜ್ಜೆಗಳನ್ನಿಡಬೇಕಾಗಿದೆ. ಆದರೆ ಸ್ವಲ್ಪವಾದರೂ ಪ್ರಗತಿಪರವಾದ ಹೆಜ್ಜೆಯನ್ನು ಕೇಂದ್ರ ಸರ್ಕಾರದವರು ಇಟ್ಟಿದ್ದಾರೆ. ನೀವು ಆ ತರಹ ಒಂದನ್ನಾದರೂ ಮಾಡಿದ್ದೀರಾ? ಇಲ್ಲ. ಮತ್ತೇಕೆ ಸಮತಾವಾದ ಮಾತನಾಡು ತ್ತೀರಿ?

ಶ್ರೀ ಅಜೀಜ್ ಸೇಟ್.—ಈಗ ಜನಸಂಘ ಮತ್ತು ಕಮ್ಯೂನಿಸ್ಟ್ ಅವರು ಇಬ್ಬರೂ ಒಂದಾಗಿ ದ್ದಾರೆ.

ಶ್ರೀ ಎಂ. ಎಸ್ ಕೃಷ್ಣನ್.—ನಾನು ಅಜೀಜ್ ಸೇಟರ ಹಾಗೆ ದಿನದಿನಕ್ಕೂ ಒಂದು ಪಕ್ಷದಿಂದ ಮತ್ತೊಂದು ಪಕ್ಕೆ ಹಾರುವವನಲ್ಲ. ನಾನು ಮೊದಲಿನಿಂದಲೂ ಕಮ್ಯೂನಿಸ್ಟ್. ಈಗಲೂ ಸಹ ಕಮ್ಯೂನಿಸ್ಟ್ ಮುಂದೆಯೂ ಅದೇ.

ಶ್ರೀ ಬೋಳಾ ರಘುರಾಮಶೆಟ್ಟಿ.—ಅವರೀಗ ಬಂಡವಾಳಗಾರರ ಜೊತೆ ಸೇರಿದ್ದಾರೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಸದಸ್ಯರಿಗೆ ಸಮತಾವಾದ ವಿಷಯ ಗೊತ್ತಿಲ್ಲ. ಸುಮ್ಮನೆ ಏಕೆ ಮಾತನಾಡುತ್ತಾರೆ? ನಾನು ಏನಾದರೂ ಅವರ ಬಗ್ಗೆ ಟೀಕೆ ಮಾಡಿದರೂ ಅವರು ಸಹನೆಯಿಂದ ಇರಬೇಕು. ಏಕೆಂದರೆ ನನಗೆ ವೇಳೆಯಿಲ್ಲ ಉತ್ತರಿಸಲು. ಈಗ ಸರ್ಕಾರದವರು ಸಮತಾವಾದದ ತತ್ವಗಳನ್ನು ಎಷ್ಟು ದೂರ ಕಾರ್ಯಗತ ಮಾಡಿದ್ದಾರೆ ಎಂಬುದಾಗಿ ಕೇಳಿದರೆ, ನಿಜವಾಗಿಯೂ ಇವರು ಆ ಒಂದು ದಿಕ್ಸೂಚಿಯಲ್ಲಿ ಹೋಗುತ್ತಾ ಇಲ್ಲವೆಂಬುದು ಎದ್ದು ಕಾಣುತ್ತದೆ. ಅದಕ್ಕಾಗಿ ಎರಡು ಮೂರು ಉದಾಹರಣೆಗಳನ್ನು ಕೊಡುತ್ತೇನೆ. ಹಿಂದೆ ಭೂಸುಧಾರಣೆಯ ವಿಷಯವಾಗಿ ಒಂದು ಸಾರಿ ಮಾನ್ಯ ಶ್ರೀ ಕೌಜಲಗಿಯವರು ಮಾತನಾಡುತ್ತಾ 10 ಲಕ್ಷ ಎಕರೆ ಜಮೀನನ್ನು ಇನ್ನು ಕೆಲವೇ ತಿಂಗಳುಗಳಲ್ಲಿ ಭೂರಹಿತ ರೈತರಿಗೆ ಹಂಚುತ್ತೇವೆಂದು ಹೇಳಿದ್ದಾರೆ. ಆ ರೀತಿಯಾಗಿ ಮಾನ್ಯ ಶ್ರೀ ವೀರೇಂದ್ರ ಪಾಟೀಲರೂ ಸಹ ಹೇಳಿದ್ದಾರೆ. ಭೂಸುಧಾರಣೆಯ ಮಸೂದೆಯನ್ನು ಜಾರಿಗೆ ತರಬೇಕೆಂದೂ ಹೇಳಿದ್ದಾರೆ. ಇಲ್ಲಿಯೂ ಕೂಡ ಶಾಸನ ಮಾಡಿದ್ದರೂ ಸಹ ಎಲ್ಲರೂ ನಿದ್ರೆ ಮಾಡುತ್ತಿದ್ದಾರೆ ವಿನಹ ಕಾರ್ಯಗತ ಮಾಡಿಲ್ಲ. ಕೆಲವು ದಿನಗಳ ಹಿಂದೆ ಕೇಂದ್ರ ಸರ್ಕಾರದವರು ಮುಖ್ಯಮಂತ್ರಿಗಳ ಸಮ್ಮೇಳನ ಮಾಡಿದರು. ಅದಕ್ಕೆ ಮಾನ್ಯ ಶ್ರೀ ಜಗಜೀವನರಾಂ ಮತ್ತು ಮಾನ್ಯ ಶ್ರೀ ಚವಾಣ್ ಅವರೂ ಬಂದಿದ್ದರು. ಭೂಸುಧಾರಣಾ ಮಸೂದೆಗಳು ಜಾರಿಗೆ ಬಂದಿದ್ದಕ್ಕೆ ಹೊಲವಿಲ್ಲದ ರೈತರಿಗೆ ಹೊಲ ಹಂಚಿದ್ದಕ್ಕೆ ವ್ಯಸನ ವ್ಯಕ್ತ ಪಡಿಸಿದರು. ಮಾತಿನಿಂದ ಹಸಿರು ಕ್ರಾಂತಿಯಾಗುವುದಿಲ್ಲ. ಭೂಸುಧಾರಣೆಗಳನ್ನು ಜಾರಿಗೆ ತರದಿದ್ದಲ್ಲಿ ಭೂಹೀನರಿಗೆ ಭೂಮಿ ಕೊಡದಿದ್ದಲ್ಲಿ ರಕ್ತ ಕ್ರಾಂತಿಯಾಗುತ್ತದೆ ಎಂದು ಎಚ್ಚರಿಸಿದರು. ಇದಾದನಂತರವೇ ರಾಜ್ಯದ ಮಂತ್ರಿಗಳು ಕಣ್ಣು ಬಿಟ್ಟಂತಿವೆ. ಕಣ್ಣು ಬಿಟ್ಟು ಇವರೇನು ಮಾಡಿದ ರೆಂದರೆ, ಬರೀ ಒಂದು ಸ್ಟೇಟ್‌ಮೆಂಟನ್ನು ಕೊಟ್ಟರು. 10 ಲಕ್ಷ ಎಕರೆಯನ್ನು ಹಂಚುತ್ತೇವೆಂದು ಮೊದಲು ಹೇಳಿದರು. ಈಗ ಮಾನ್ಯ ಕೌಜಲಗಿಯವರು 11 ಲಕ್ಷ ಎಕರೆ ಭೂಮಿ ಇದೆಯೆಂದು ನನ್ನ ಪ್ರಶ್ನೆಗೆ ಉತ್ತರ ಹೇಳಿದರು. ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂಬುದಾಗಿ ಕೇಳಿದ್ದಕ್ಕೆ ಅದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಎಂದು ಹೇಳಲು ಸಾಧ್ಯವಿಲ್ಲ ಎಂದಿದ್ದಾರೆ. ಇದಕ್ಕೆ ವಿಷಾರ್ಣಂತರಗಳು ಬೇಕಿಲ್ಲ. ಸುಮಾರು 22 ವರ್ಷಗಳಿಂದಲೂ ನೀವು ಕೂತು ಕೂತು ಗಾಘ ನಿದ್ರೆ ಮಾಡಿದ್ದೀರಿ. ಬೇಕಾದಷ್ಟು ಈ ವಿಷಯದ ಬಗ್ಗೆ ಮನವಿಗಳು ಬಂದಿವೆ. ಇವತ್ತು ಈಗೀಗ ಅನೇಕ ಕಡೆಗಳಲ್ಲಿ ರೈತರ ಆಂದೋಳನ ಜರುಗುತ್ತಿದೆ. ವರ್ಗ ಘರ್ಷಣೆಗಳು ನಡೆಯುತ್ತಿವೆ. ಪ್ರಶ್ನೆ ಇನ್ನೂ ಬಗೆಹರಿಯಲಿಲ್ಲ. ಇನ್ನೂ ಉಲ್ಬಣಕ್ಕೆ ಹೋಗುವ ಪರಿಸ್ಥಿತಿಗೆ ಬಂದಿದೆ.

ಭೂ ಸುಧಾರಣೆಯಲ್ಲಿ ಅತಿ ಮುಖ್ಯವಾದ ವಿಷಯ ಎಂದರೆ ಭೂಮಿ ಯಾರಿಗೆ ಸೇರಬೇಕು ಎಂಬುದು. ವೆಸ್ಟಿಂಗ್ ರೈಟ್ಸ್ ಬಗ್ಗೆ ಲ್ಯಾಂಡ್ ರೀಫಾರಮ್ಸ್ ಆಕ್ಟಿನಲ್ಲಿ ಯಾವ ರೀತಿಯ ಸ್ಪಷ್ಟತೆಯೂ ಇಲ್ಲ. ಅಪ್ಲಿಕೇಷನ್ ಹಾಕಿಕೊಳ್ಳಿ, ಎಷ್ಟು ಭೂಮಿ ಇದೆ ಎಂದು ತಿಳಿಸಲಿ ಆಮೇಲೆ ತೀರ್ಮಾನ ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಮಾಡುವುದರಿಂದ ಈ ಲ್ಯಾಂಡ್ ರಿಫಾರಮ್ಸ್ ಆಕ್ಟನ್ನು ಪೂರ್ತಿ ಜಾರಿಗೆ ತರುವುದಕ್ಕಾಗುವುದಿಲ್ಲ. ಸಮತಾ ವಾದ ಎಂದು ಹೇಳು

(ಶ್ರೀ ಎಂ. ಎಸ್. ಕೃಷ್ಣನ್)

ತ್ತಾರೆ. ಆದರೆ ಇಂತಹ ಭೂಮಿ ಗೇಣೀದಾರನಿಗೆ ಸೇರುತ್ತದೆ ಎಂದು ಸ್ಪಷ್ಟವಾಗಿ ಹೇಳಿದರೆ ಮಾತ್ರ ಗೇಣೀದಾರನಿಗೆ ಆ ಭೂಮಿ ಸೇರುತ್ತದೆ ಈಗ ಎಷ್ಟೋ ಜನ ಈ ಕಾನೂನಿನಿಂದ ತಪ್ಪಿಸಿ ಕೊಂಡು ಅವರಿಗೆ ಅನುಕೂಲವಾಗುವ ಹಾಗೆ ನಡೆದುಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಮಸೂದೆಯಲ್ಲಿ ಶ್ರೀಮಂತ ರೈತರಿಗೆ ಅನುಕೂಲವಾಗುವಂತಹ ತಿದ್ದುಪಡಿಯನ್ನು ತಂದು, ಮತ್ತೆ ಸಮತಾವಾದ ಹಾದಿಯಲ್ಲಿ ಹೋಗುತಿದ್ದೇವೆ, ಡೈರಕ್ಟೀವ್ ಪ್ರಿನ್ಸಿಪಲ್ಸ್ ಸೂಚಿಯಲ್ಲಿ ಹೋಗುತ್ತಿದ್ದೇವೆ ಎಂದು ಹೇಳುವುದಕ್ಕೆ ಅವರಿಗೆ ನಾಚಿಕೆಯಾಗುವುದಿಲ್ಲವೇ? ಇನ್ನೊಂದು ಅಂಶ ಏನೆಂದರೆ ಫೇರ್ ರೆಂಟ್ ಫಿಕ್ಸೇಷನ್ ಮಾಡುವುದರಲ್ಲಿಯೂ ಸಹ ನನಗೆ ಗೊತ್ತಿರುವ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಹಸೀಲ್ದಾರರು ಯೀಲ್ಡ್ ಪರ್ ಎಕರ್ ಎಷ್ಟು ಎಂದು ಫಿಕ್ಸ್ ಮಾಡಿಲ್ಲ. ಮತ್ತು ಮಾಡಿರುವ ಕಡೆ ಏರುಪೇರಾಗಿದೆ ಎಂದು ತಿಳಿದು ಬಂದಿದೆ. ಇದರಿಂದ ಟೆನೆಂಟ್ಸ್‌ಗೆ ಕಷ್ಟವಾಗುತ್ತದೆ. ಲ್ಯಾಂಡ್‌ಲಾರ್ಡ್ಸ್‌ಗೆ ಕಷ್ಟವಾಗಿದೆ. ಇದು ಎಂತಹ ಸಮಾಜವಾದ ಎಂದು ಕೇಳುತ್ತೇನೆ? ಇನ್ನೊಂದು ಸರಕಾರದಲ್ಲಿ ನಮ್ಮವರೇ ಆಳುತ್ತಿದ್ದಾರೆ. ಅಲ್ಲಿನ ಅಂದರೆ ಕೇರಳ ರಾಜ್ಯದಲ್ಲಿ ಭೂಸುಧಾರಣೆ ಅಂಶಗಳನ್ನು ದಯವಿಟ್ಟು ರಾಮಕೃಷ್ಣ ಹೆಗ್ಗಡೆಯವರು ಓದಲಿ ತಿಳಿದುಕೊಳ್ಳಲಿ. ಜನವರಿ ಒಂದನೇ ತಾರೀಖಿನಿಂದ ಅಲ್ಲಿ ಭೂಮಾಲೀಕರನ್ನು ತೆಗೆದುಹಾಕಿ ರೈತರಿಗೆ ಹಕು ಗಳನ್ನು ಒದಗಿಸಿಕೊಟ್ಟಿದ್ದಾರೆ. ಅಲ್ಲಿ ಪಟ್ಟ ಕೊಡಲು ಪ್ರೊಸೀಜರ್ ಸಹ ಬಹಳ ಸಿಂಪ್ಲಿಫೈ ಮಾಡಿದ್ದಾರೆ. ಮೂರು ವರ್ಷಗಳಲ್ಲಿ ಅಚ್ಯುತ ಮೆನನ್ ಸರಕಾರ ಮಾಡುವುದಕ್ಕೆ ಸಾಧ್ಯವಾದದ್ದನ್ನು ವೀರೇಂದ್ರ ಪಾಟೀಲರ ಸರಕಾರ ಮಾಡದೆ ಹೋದರೆ ಇದನ್ನು ಪ್ರಗತಿಪರವಾದ ಸರ್ಕಾರ, ಇದು ಪ್ರಗತಿಪರ ವಾದ ಬಜೆಟ್ ಎಂದು ಯಾವ ರೀತಿ ಕರೆಯುವುದಕ್ಕೆ ಸಾಧ್ಯ? ಇದರಲ್ಲಿ ಪ್ರಗತಿ ಎಳ್ಳಷ್ಟೂ ಇಲ್ಲ. ಬದಲು ಪ್ರಗತಿಗೆ ವಿರೋಧವಾಗಿ ಹೋಗುತ್ತಾ ಇದೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇನ್ನೊಂದು ಅಂಶ ಕಾಂಗ್ರೆಸ್ ಆಡಳಿತಕ್ಕೆ ಅನುಕೂಲ ಮಾಡಿಕೊಡಬೇಕು ಮತ್ತು ಬಲಪಡಿಸಬೇಕು ಎಂದೂ, ಅದರಲ್ಲಿಯೂ ಯುವಜನರಿಗೆ ಹೆಚ್ಚಿನ ತಿಳುವಳಿಕೆ ಕೊಡಬೇಕೆಂದೂ ಫಾರ್ಮರ್ಸ್ ಫೋರಂ, ಯಂಗ್ ಫಾರ್ಮರ್ಸ್ ಅಸೋಸಿಯೇಷನ್ ಮತ್ತು ಯಂಗ್ ಫಾರ್ಮರ್ಸ್ ಕ್ಲಬ್ ಎಂದು ಮಾಡಿದ್ದಾರೆ. ಇವು ಮೈಸೂರು ರಾಜ್ಯದಲ್ಲಿಯೂ ಸಹ ಇವೆ. ಇದಕ್ಕೆ ಬೇಕಾದಷ್ಟು ಹಣ ಖರ್ಚಾಗುತ್ತಿದೆ. ಈ ಯಂಗ್ ಫಾರ್ಮರ್ಸ್ ಅಸೋಷಿಯೇಷನ್ನಿನವರು ಅಥವಾ ಯಂಗ್ ಫಾರ್ಮರ್ಸ್ ಫೋರಂನವರು ಏನು ಮಾಡುತ್ತಿದ್ದಾರೆ? ನಿಮಗೆ ಗೊತ್ತಿರಬಹುದು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ನಿಜಲಿಂಗಪ್ಪನವರ ಅಳಿಯಂದಿರು ಇವೊತ್ತಿನ ದಿವಸ ಇದರಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಿದ್ದಾರೆ. ಅವರ ವಿಚಾರದ ಬಗ್ಗೆ ಹೆಚ್ಚು ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ಯಂಗ್ ಫಾರ್ಮರ್ಸ್ ಫೋರಂ ಬಗ್ಗೆ ಹೇಳುತ್ತೇನೆ. ಅಲ್ಲಿಯೂ ಸಹ ಹಣ ಹಾಳು ಮಾಡಿದ್ದಾರೆ. ಡಿಫಾಲ್ಕೇಷನ್ ಮಾಡಿದ್ದಾರೆ. ಮತ್ತು ಸಾವಿರಾರು ರೂಪಾಯಿ ಖರ್ಚುಮಾಡಿದ್ದಾರೆ. ಮೋರಿಯಲ್ಲಿ ನೀರು ಹೋದ ಹಾಗೆ ಹಣ ಖರ್ಚಾಗಿ ಹೋಗಿದೆ ಎಂದು ಗೊತ್ತಾಗಿದೆ. ಈ ವಿಚಾರ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದು ಅದರಲ್ಲಿ ಸಿ.ಐ.ಎ. ಏಜೆಂಟುಗಳೂ ಇದ್ದಾರೆ ಎಂದು ಆಪಾದನೆ ಮಾಡಲಾಗಿದೆ. ಮೈಸೂರು ರಾಜ್ಯದಲ್ಲಿಯೂ ಕೂಡ ಅವರು ಇದ್ದಾರೆ ಎಂದೂ, ಅವರನ್ನು ಕಂಡು ಹಿಡಿಯುತ್ತಿದ್ದಾರೆ ಎಂದೂ ಕೇಳಿದ್ದೇನೆ. ಈ ಫಾರ್ಮರ್ಸ್ ಅಸೋಷಿಯೇಷನ್ನಿನವರು ವಾರಕ್ಕೆ ಒಂದು ಸಾರಿ, ತಿಂಗಳಿಗೆ ಒಂದು ಸಾರಿ ಅಮೇರಿಕಾಕ್ಕೆ ಹೋಗಿ ಬರುತ್ತಾರೆ. ರೈತರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿ ಅಲ್ಲಿಗೆ ವಿಹಾರಕ್ಕೆ ಹೋಗುತ್ತಾರೆ. ಈ ದಿಕ್ಕೂಚಿಯಲ್ಲಿ ಹೋಗುತ್ತಿರುವಾಗ ಅವರು ಸರಿಯಾದ ಹಾದಿಯಲ್ಲಿ ಹೋಗುತ್ತಿದ್ದಾರೆಯೇ ಎಂದು ಧೈರ್ಯವಾಗಿ ಹೇಳುವುದಕ್ಕೆ ಆಗುತ್ತದೆಯೇ? ಇನ್ನೊಂದು ಮುಖ್ಯವಾದ ವಿಷಯ ನಾವು ಎರಡು ಮೂರು ಅಂಶಗಳಿಂದ ದಿಕ್ಸೂಚಿಯನ್ನು ನೋಡಬೇಕು. ಕೈಗಾರಿಕೆ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಆಗಿದೆ. ಯಾವ ಯಾವ ಕೈಗಾರಿಕೆಗಳು ಪ್ರಾರಂಭವಾಗಿವೆ. ಮಲಬಾರ್ ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಗತಿ ಏನಾಯಿತು. ಅದು ಎಲ್ಲ ಹೋಯಿತು. ಹೋದ ಸಾರಿ ಯಾವ ಯಾವ ಕೈಗಾರಿಕೆಗಳು ಇಲ್ಲಿ ಬರುತ್ತವೆ ಎಂದು ಲಿಸ್ಟ್ ಕೊಟ್ಟಿದ್ದೀರಿ. ಅದರಲ್ಲಿ ಯಾವ ಕೈಗಾರಿಕೆಯೂ ಕೂಡ ಇಲ್ಲಿಯವರೆಗೆ ಸ್ಥಾಪನೆಯಾಗಲಿಲ್ಲ. ಇನ್ನು ಸಣ್ಣ ಕಾರು ಯೋಜನೆಯನ್ನು ಬಿಟ್ಟುಬಿಡಿ. ನಮ್ಮವರಿಗೆ ಛಾತಿ ಇಲ್ಲ, ಧೈರ್ಯ ಇಲ್ಲ ಉದ್ದೆಗಾರಿಕೆ ಇಲ್ಲ ಕೇಂದ್ರಕ್ಕೆ ಹೋಗಿ ಒತ್ತಾಯ ಮಾಡುವ ಜನ ನಮ್ಮಲ್ಲಿ ಇಲ್ಲ. ಸ್ಮಾಲ್ ಕಾರ್ ಪ್ರಾಜೆಕ್ಟ್ ಬರುತ್ತದೆ ಎಂದು ನಿಜಲಿಂಗಪ್ಪನವರು ಹೇಳುತ್ತಿದ್ದರೂ ಅದು ಇದುವರೆಗೆ ಬಂದಿಲ್ಲ. ಇನ್ನು ಹೊಸಪೇಟೆಯಲ್ಲಿ ಒಂದು ಸ್ಟೀಲ್ ಮಿಲ್ ಬರುತ್ತದೆ ಎಂದು ಕೇಂದ್ರ ಸರಕಾರದವರು ಹೇಳುತ್ತಿದ್ದಾರೆ. ವಿಶಾಖಪಟ್ಟಣಕ್ಕೆ ಸ್ಟೀಲ್ ಮಿಲ್ ಬಂದ ಹಾಗೆ ನಮಗೂ ಬರುತ್ತದೆ, ಆದುದರಿಂದ ಮೂಲಭೂತವಾಗಿ ಇವರು ಏನೂ ಕೂಡ ಮಾಡಿಲ್ಲ ಎನ್ನುವುದು ಆಂಕಿ ಅಂಶಗಳಿಂದ

ತಿಳಿದುಬರುತ್ತದೆ. ಜೊತೆಗೆ ಕೈಗಾರಿಕೆಗಳ ಸಂಬಂಧವಾಗಿ ಪ್ರಾಗ್‌ಮ್ಯಾಟಿಕ್ ಅಪ್ರೋಚ್ ವಿಚಾರ ಹೇಳಿದ್ದಾರೆ ಅದನ್ನು ಪುನಃ ಹೇಳಲಿಕ್ಕೆ ಇಚ್ಛಿಸುವುದಿಲ್ಲ. ಒಂದು ರಾಜ್ಯ ಮುಂದುವರಿಯಬೇಕಾದರೆ ಕೈಗಾರಿಕೆಗಳು ಬೃಹದಾಕಾರವಾಗಿ ಬೆಳೆಯಬೇಕು, ಕೈಗಾರಿಕಾ ಸಂಬಂಧದಲ್ಲಿ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನ್ನು ಕಾರ್ಯಗತ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಣ ಜನಸಾಮಾನ್ಯರಿಗೆ ಹೋಗುತ್ತದೆ. ಸರಕಾರದ ಬೊಕ್ಕಸಕ್ಕೆ ಹೋಗುತ್ತದೆ. ಈ ಎಲ್ಲ ದೃಷ್ಟಿಯಿಂದ ಕೈಗಾರಿಕೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಬಲಗೊಳಿಸಬೇಕಾಗುತ್ತದೆ. ಸಾರ್ವಜನಿಕ ಕ್ಷೇತ್ರ ಈಗ ಶಿಥಿಲವಾಗುತ್ತಾ ಇದೆ. ರಂಕೊನಲ್ಲಿ, ರಂಕೋ ಯಾತಕ್ಕೆ ಲಾಸ್ ಆಯಿತು ಎನ್ನುವ ಬಗ್ಗೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯವರು ಯೋಚನೆ ಮಾಡುತ್ತಿದ್ದಾರೆ. ಅದರ ವಿಷಯ ಬಂದಾಗ ನಾನು ಮಾತನಾಡುತ್ತೇನೆ. ಫ್ಯಾಕ್ಟರಿ ಈಗಪೋರ್ಸಿಲೈನ್ ತೆಗೆದುಕೊಳ್ಳಿ. ಅದನ್ನು ಒಳಹೊಕ್ಕು ನೋಡಿದರೆ ಅಲ್ಲಿ ದುರ್‌ನಾರ್ಥ ಹೊಡೆಯುತ್ತಿದೆ. ಅದು ಯಾವಾಗ ಮುಚ್ಚಿ ಹಾಕುತ್ತಾರೋ ಗೊತ್ತಿಲ್ಲ. ಲಂಚಗಾರಿಕೆ, ಸ್ವಜನ ಪಕ್ಷಪಾತ, ಕೋಮುವಾರು ಭಾವನೆ ಅದಕ್ಷತೆ ಇವೆಲ್ಲಾ ಅಲ್ಲಿ ತಾಂಡವವಾಡುತ್ತಿವೆ. ಅದಕ್ಕೆ ಏನು ಮಾಡುತ್ತೀರಿ ? "ನಮ್ಮ ಕೈಯಲ್ಲಿ ಆಗದೆ ಹೋದರೆ ಖಾಸಗೀಯವರಿಗೆ ಕೊಡುತ್ತೇವೆ" ಎಂದು ಹೇಳುತ್ತಾರೆ. ಇದು ನ್ಯಾಯವೇ ? ಅಲ್ಲಿಗೆ ದಕ್ಷರಾದಂಥ ಮತ್ತು ಯೋಗ್ಯರಾದಂಥ ಅಧಿಕಾರಿಗಳನ್ನು ಕರೆದುಕೊಂಡು ಬಂದು ಹಾಕಬೇಕು. ಎಂ.ಎ.ಎಸ್., ಐ.ಎ.ಎಸ್., ಐ.ಸಿ.ಎಸ್. ಅಧಿಕಾರಿಗಳು ಅಲ್ಲ. ಕೈಗಾರಿಕೆಗಳ ವಿಷಯದಲ್ಲಿ ಟೆಕ್ನಿಕಲ್ ನಾಲೆಜ್ ತಿಳಿದುಕೊಂಡಿರುವವರನ್ನು ಜಾಸ್ತಿ ಸಂಬಳ ಕೊಟ್ಟು ಕರೆಸಬೇಕು. ಈಗ ಮೈಸೂರು ಮತ್ತು ಮಿನರ್ವ ಮಿಲ್ಲುಗಳನ್ನು ಮುಚ್ಚಿ ಎರಡೂವರೆ ಮತ್ತು ಮೂರು ತಿಂಗಳುಗಳಾದವು. ಅಲ್ಲಿ ಆರು ಸಾವಿರ ಜನ ಕಾರ್ಮಿಕರು ಕೆಲಸ ಇಲ್ಲದೆ ಪರಿತಾಪ ಪಡುತ್ತಿದ್ದಾರೆ. ಅದೇ ಆರು ಸಾವಿರ ಜನ ಹಿಂದೆ ಒಂದು ವರ್ಷಕಾಲ ಕಷ್ಟಪಟ್ಟರು. ಆಗ ಸರಕಾರದವರು 85 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡಿದ್ದಾರೆ. ಖಾಸಗೀ ಮಾಲೀಕರು ಅದನ್ನೆಲ್ಲಾ ನುಂಗಿ ಹಾಕಿ ಮತ್ತೆ ಹಣವನ್ನು ಕೇಳುತ್ತಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ರೆಗ್ಯುಲೇಷನ್ ಆಕ್ಟ್ ಪ್ರಕಾರ ಸರಕಾರದವರು ತೆಗೆದುಕೊಂಡು ನಡೆಸಬೇಕು ಅದನ್ನು ಮಾಡುತ್ತಾ ಇಲ್ಲ. ಮಹಾರಾಷ್ಟ್ರದಲ್ಲಿ ಇನ್ನೊಂದು ಮಿಲ್ಲನ್ನು ತೆಗೆದುಕೊಂಡಿದ್ದಾರೆ. ಹಾಗೆ ಇಲ್ಲಿಯೂ ತೆಗೆದುಕೊಳ್ಳಬೇಕೆಂದು ಹೇಳಿದರೂ ಸಹ ಅದಕ್ಕೆ ಮಂತ್ರಿಗಳು ಅಡ್ಡಿ ಬರುತ್ತಿದ್ದಾರೆ. ಫೈಲ್ ಮುಚ್ಚಿ ಇಡಿ ಏಪ್ರಿಲ್ ಆದಮೇಲೆ ನೋಡೋಣ ಎಂದು ಹೇಳುತ್ತಿದ್ದಾರೆ. ಅದಕ್ಕೆ ಉತ್ತರ ಅವರೇ ಹೇಳಬೇಕು. ಈ ತರಹ ಸಿಂಡಿಕೇಟ್ ಮನೋಭಾವ ಇರುವ ಮಂತ್ರಿಮಂಡಲ ಖಾಸಗಿ ಬಂಡವಾಳಗಾರರಿಗೆ ಈ ರೀತಿ ಬೆಂಬಲ ಕೊಡುತ್ತಾರೆ ಎಂದು ಹೇಳುತ್ತಾರೆ. ಈಗ ಈ ಆರು ಸಾವಿರ ಜನರ ಗತಿ ಏನು ? ಅದರಿಂದ ಈ ಬಡ್ಜೆಟ್ ಮಂಡಿಸಿರುವುದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ತೆರಿಗೆ ವಿಷಯ. ಬೇಕಾದಷ್ಟು ಭೂತಲಿಂಗಂ ಕಮಿಟಿಯವರು ಹೇಳಿದ್ದಾರೆ. ಅದನ್ನು ನಾನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಸಾಮಾನ್ಯ ಜನಗಳ ಮೇಲೆ ತೆರಿಗೆ ಹೊರೆ ಜಾಸ್ತಿಯಾಗುತ್ತಾ ಇದೆ. ಬೇಕೆ ವಸ್ತುಗಳ ಮೇಲೆ ಸೇಲ್ಸ್‌ಟ್ಯಾಕ್ಸ್ ಹಾಕಿದ್ದೀರಿ, ಅರ್ಬನ್ ಪ್ರಾಪರ್ಟಿ ಮೇಲೆ ಸೀಲಿಂಗ್ ಹಾಕಿರುವುದು ದೊಡ್ಡ ಜನರ ಮೇಲೆ ಹಾಕಿದರೆ ಪರವಾಗಿಲ್ಲ ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಸಾಮಾನ್ಯ ಜನರ ಮೇಲೆ ಅದರಿಂದ ಹೊರೆ ಬೀಳುವಂತಹ ಚಿನ್ಹೆ ಕಂಡುಬರುತ್ತಿದೆ. ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ಬಹಳ ಜಾಸ್ತಿಯಾಗುತ್ತಾ ಇದೆ. ಹೋದ ಸಾರಿ ಇದು ಎಷ್ಟು ಅಂತ ಹೇಳಿ ಅವರೇ ಅಂಕಿ ಅಂಶ ಕೊಟ್ಟಿದ್ದರು. ಈ ಸಾರಿ ಕೊಟ್ಟಿಲ್ಲ. ಇಂಡಿಯಾ ದೇಶದಲ್ಲಿ ಮೈಸೂರಿನಲ್ಲಿರುವಷ್ಟು ಬೇರೆ ಎಲ್ಲೂ ಇಲ್ಲ ಅಂತ ಹೇಳಬಹುದು. ತೆರಿಗೆ ಬಂಡವಾಳಶಾಹಿ ಸರ್ಕಾರ "ಜನಸಾಮಾನ್ಯರನ್ನು ತುಳಿಯಲು, ಶೋಷಿಸಲು, ಇರುವ ಯಂತ್ರ ಸರ್ಕಾರವೂ ಸಹ ಒಂದು ವರ್ಗವನ್ನು ರಕ್ಷಿಸಲು, ಬಂಡವಾಳಶಾಹಿ ವರ್ಗವನ್ನು ಅಳಿಸಲು ಇದೆ." ಎಂದು ಲೆನಿನ್‌ರವರು ಹೇಳಿದ್ದಾರೆ. ರಷ್ಯಾದಲ್ಲಿ ಕ್ರಾಂತಿಯಾಗಿ ಜನ ನಿಜವಾದ ಸಮಾನತೆಗೆ ಬಂದಿದ್ದಾರೆ.

The State is an instrument of operation That instrument can be wielded by the minority of capitalists and landlords against the majority of the people or it can be wielded by the majority of the working class and peasants against the minority of capitalists and landlords. If it is wielded by the former it becomes a capitalist State and if it is wielded by the latter it becomes a socialistic State. The Syndicate represents all the capitalists and landlords of our country and the way

(ಶ್ರೀ ಎಂ. ಎಸ್. ಕೃಷ್ಣನ್)

in which they are working is in the direction of promotion of capitalism and reaction in the country and it is they who are wielding the power. Unless it is taken away and placed in the hands of the common people, I do not think any of the problems of the country will be solved.

ಈ ವಿವರಕ್ಕನುಗುಣವಾಗಿ ನಮ್ಮ ರಾಜ್ಯದ ಸರ್ಕಾರ ಬಂಡವಾಳಗಾರರ ಹಿತರಕ್ಷಕವಾಗಿದೆ. ಲೆನಿನ್‌ರವರು ಹೇಳಿದಂತೆ ಬಂಡವಾಳಶಾಹಿ ಸಮಾಜ ಉಳಿಸಲು ಇರುವ ರಾಜ್ಯದ ಅಸ್ತ್ರ ಎಂದಿದ್ದಾರೆ. ಇವು ಪ್ರಾಮುಖ್ಯತೆ ಪಡೆದಿರುವ ಮಾತುಗಳು. ಇದನ್ನು ಗಮನಿಸಬೇಕಾಗಿದೆ.

ಇಂದು ಲೆನಿನ್‌ರವರ ಶತಾಬ್ದಿಯ ವರ್ಷ, ನಾವೂ ಸಹ ಆಚರಿಸಬೇಕಾಗಿದೆ. ಕಡೆಯದಾಗಿ ಲೆನಿನ್‌ರವರನ್ನು ನೆನೆಸಿಕೊಂಡು ಇಷ್ಟು ಮಾತ್ರ ಹೇಳಿ, ಬಡ್ಜೆಟ್ಟನ್ನು ವಿರೋಧಿಸುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P.M.

ಶ್ರೀ ಎಸ್. ರುದ್ರಪ್ಪ (ಚಿತ್ತಾಪುರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಮಂಡಿಸಿದಂತಹ ಬಡ್ಜೆಟ್ಟನ್ನು ನಾನು ಅನುಮೋದಿಸುತ್ತೇನೆ. ಈ ಬಡ್ಜೆಟ್ಟಿನ ವಿಷಯದಲ್ಲಿ ನಿನ್ನೆಯಿಂದ ಚರ್ಚೆನಡೆದಿದೆ. ಹಲವಾರು ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ ಸಹಕಾರ ಸಂಘಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ಕಟುವಾಗಿ ಟೀಕೆ ಮಾಡಿದ್ದಾರೆ. ಸಹಕಾರ ಸಂಘಗಳಲ್ಲಿ ಮಾಲ್‌ಪ್ರಾಕ್ಟೀಸ್, ಕರಪ್ಷನ್, ಡಿಫಾಲ್ಕೇಷನ್ ಬಹಳವಾಗಿದೆ ಎಂದು ಹೇಳಿದ್ದಾರೆ. ನಾನಾದರೂ ಕೆಲವು ಮಾನ್ಯ ಸದಸ್ಯರು ಯಾವ ಮಟ್ಟದಲ್ಲಿ ಈ ಕರಪ್ಷನ್, ಡಿಫಾಲ್ಕೇಷನ್ ಇದೆ ಎಂದು ಹೇಳುತ್ತಾರೆಯೋ ಅಷ್ಟುಮಟ್ಟಿಗೆ ಇಲ್ಲ ಎಂದು ಹೇಳಬಯಸುತ್ತೇನೆ. ಕೆಲವೊಂದು ಸಹಕಾರ ಸಂಘಗಳಲ್ಲಿ ಇರಬಹುದು, ಅಂದಮಾತ್ರಕ್ಕೆ ಎಲ್ಲಾ ಸಹಕಾರ ಸಂಘಗಳೂ ಚೆನ್ನಾಗಿ ಕೆಲಸ ಮಾಡಲಿಲ್ಲ, ಉತ್ತಮ ರೀತಿಯಲ್ಲಿ ಕೆಲಸಮಾಡಲಿಲ್ಲ ಎಂದು ಹೇಳುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ತುಂಗಭದ್ರಾ ಪ್ರಾಜೆಕ್ಟಿನಲ್ಲಾಗಲಿ, ಭದ್ರಾಪ್ರಾಜೆಕ್ಟಿನಲ್ಲಾಗಲೀ, ಇನ್ನಿತರ ಪ್ರಾಜೆಕ್ಟುಗಳಲ್ಲಾಗಲಿ ಸಹಕಾರ ಸಂಘಗಳ ಮುಖಾಂತರ ನಾವು ಎಷ್ಟು ಹಣವನ್ನು ಹಂಚಿದ್ದೇವೆ, ಮತ್ತು ಅಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಇವತ್ತಿನ ದಿವಸ ಎಷ್ಟುಮಟ್ಟಿಗೆ ಸುಧಾರಣೆಯಾಗಿದೆ, ಅವರ ಜೀವನ ಮಟ್ಟ ಏರಿದೆ ಎಂಬುದು ಅದನ್ನು ನೋಡಿದವರಿಗೆ ವೇದ್ಯವಾಗಿದೆ. ಆದ್ದರಿಂದ ಎಲ್ಲಾ ಸಹಕಾರ ಸಂಘಗಳೂ ಚೆನ್ನಾಗಿ ಕೆಲಸ ಮಾಡುತ್ತಿಲ್ಲ, ಸರ್ಕಾರದ ಹಣವನ್ನು ಲೂಟಿ ಮಾಡಿದ್ದಾರೆ ಎಂದು ಹೇಳುವುದು ಅಷ್ಟೊಂದು ಸರಿ ಅನಿಸುವುದಿಲ್ಲ. ಇನ್ನು ತಾಲ್ಲೂಕು ಮಟ್ಟದ ಸಂಘಗಳು, ಅಗ್ರಿಕಲ್ಚರಲ್ ಕೋಅಪರೇಟಿವ್ ಸೊಸೈಟಿಗಳು ಮತ್ತು ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕುಗಳ ಬಗ್ಗೆ ಹೇಳುತ್ತಾ, ಬೇಕಾದವರಿಗೆ ಹಣವನ್ನು ಕೊಟ್ಟು ಖಜಾನೆಯನ್ನು ಲೂಟಿ ಮಾಡಿದ್ದಾರೆ ಎಂದು ಕೆಲವು ಸದಸ್ಯರು ಹೇಳಿದರು. ನಮ್ಮಲ್ಲಿ ತಾಲ್ಲೂಕು ಅಗ್ರಿಕಲ್‌ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳು 2191 ಇವೆ, ಅದರಲ್ಲಿ ಈಗಾಗಲೇ 14 ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ತಾಲ್ಲೂಕು ಡೆವಲಪ್‌ಮೆಂಟ್ ಬ್ಯಾಂಕುಗಳು 171 ಇವೆ, ಅದರಲ್ಲಿ 11ನ್ನು ಸೂಪರ್‌ಸೀಡ್ ಮಾಡಿದ್ದಾರೆ. The total amount invested in the co-operative sector is nearly 13 crores; the total working capital of the co-operative movement is 300 crores; the amount of money misappropriated is 71 lakhs; the percentage of misappropriation to working capital is 0.24 per cent; the percentage of misappropriation to the money invested by the State Government in the co-operative sector is 2.6 per cent. ಇನ್ನು ಡಿಫಾಲ್ಕೇಷನ್ ಕೇಸಸ್ 187 ಇವೆ, ಅದರಲ್ಲಿ 102 ಕೇಸುಗಳು ಕೋರ್ಟಿನ ಮುಂದೆ ಪೆಂಡಿಂಗ್ ಇವೆ. 89 ಕೇಸುಗಳು ಪೋಲೀಸರಿಂದ ಇನ್‌ವೆಸ್ಟಿಗೇಷನ್ ಆಗಬೇಕಾಗಿರುವುದು ಇವೆ, 96 ಕೇಸುಗಳು ಡಿಪಾರ್ಟ್‌ಮೆಂಟಿನಲ್ಲಿ ಇನ್‌ವೆಸ್ಟಿಗೇಷನ್ ಆಗಬೇಕಾಗಿದ್ದು ಪೆಂಡಿಂಗ್ ಇವೆ. ಎಲ್ಲಾ ಸಹಕಾರಸಂಘಗಳು ಸರಿಯಾಗಿವೆ, ಉತ್ತಮವಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಸಹಕಾರ ಸಂಘಗಳಲ್ಲಿ ಲೋಪದೋಷಗಳಿವೆ, ಅದನ್ನು ಸರಿಪಡಿಸುವ ಜವಾಬ್ದಾರಿ ನಮಗೂ ಮತ್ತು ಸರಕಾರಕ್ಕೂ ಇದೆ. ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕೆಲಸಮಾಡ

ಬೇಕಾದರೆ ಮಾನ್ಯ ಸದಸ್ಯರು ಹೇಳಿದಂತೆ ಲೋಕಲ್ ಆಡಿಟ್, ಇಂಟರ್ನಲ್ ಆಡಿಟ್ಟನ್ನು ಬಿಟ್ಟು ಎ.ಜಿ. ಯವರಿಂದಾಗಲಿ ಅಥವಾ ಸ್ಟೇಟ್ ಆಡಿಟ್ ಇಲಾಖೆಯಿಂದಲಾಗಲಿ ಆಡಿಟ್ ಮಾಡಿಸಬೇಕು, ಹಾಗೆ ಮಾಡಿದರೆ ಇರುವ ಲೋಪದೋಷಗಳನ್ನು ನಿವಾರಣಮಾಡಲು ಅನುಕೂಲವಾಗುವುದು. ಎರಡನೆಯದು ಈಗಾಗಲೆ ಬಿ. ಎಲ್. ಗೌಡರು ಒಂದು ವರದಿ ಕೊಟ್ಟಿದ್ದಾರೆ, ಆ ಆಧಾರದಮೇಲೆ ಒಂದು ತಿದ್ದುಪಡಿ ಮಸೂದೆಯನ್ನು ತಂದರೆ ಸಹಕಾರ ಸಂಘಗಳು ಒಳ್ಳೆಯ ರೀತಿಯಿಂದ ಕೆಲಸಮಾಡಲು ಅನುಕೂಲವಾಗುವುದು.

ಇನ್ನು ವ್ಯವಸಾಯದ ಬಗ್ಗೆ ಹೇಳಬೇಕಾದರೆ ಈಗ ಸಾಕಾದಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ, ಹೆಚ್ಚು ಇಳುವರಿ ಕೊಡುವ ಬೀಜಗಳನ್ನು ಕಂಡುಹಿಡಿದು ಸರಬರಾಜು ಮಾಡಿದ್ದಾರೆ. ಹೈಬ್ರಿಡ್ ಜೋಳ, ಮೈಜ್, ಸಜ್ಜೆ ಮುಂತಾದುವುಗಳಿಗೆ ಸಂಬಂಧಪಟ್ಟಹಾಗೆ ಸುಧಾರಿತ ಬೀಜಗಳನ್ನು ಒದಗಿಸಿದ್ದಾರೆ. ಅವಕ್ಕೆ ಹೆಚ್ಚು ಉತ್ಪತ್ತಿ ಕೊಡುವ ಶಕ್ತಿ ಇದೆ. ಹೈಬ್ರಿಡ್ ಜೋಳ ಒಂದು ಎಕರೆಗೆ 30ರಿಂದ 40 ಕ್ವಿಂಟಾಲ್ ಬೆಳೆಯನ್ನು ನೀಡುವುದು. ಆದರೆ ಈಗ 15 ರಿಂದ 20 ಕ್ವಿಂಟಾಲ್ ಇಳವರಿ ಬರುತ್ತಿದೆ. ಈಗ ಹೆಚ್ಚು ಉಪಯೋಗ ಪಡೆದಿಲ್ಲ. ನಾವು ಹೆಚ್ಚು ಪ್ರಮಾಣದಲ್ಲಿ ಫರ್ಟಿಲೈಜರ್ ಮತ್ತು ಇನ್‌ಸೆಕ್ಟಿಸೈಡ್ ಉಪಯೋಗಮಾಡಿಲ್ಲ ಎಂದು ಹೇಳುವರು. ರೈತರಿಗೆ ಈಗ ರೋಗ ನಿವಾರಣೆ ಮಾಡುವ ಔಷಧಿಯನ್ನು ಸಬ್ಸಿಡಿ ಬೇಸಿಸ್ ಮೇಲೆ ಕೊಡುವರು. ಅದೇ ರೀತಿಯಲ್ಲಿ ಗೊಬ್ಬರಕ್ಕೆ ಹೆಚ್ಚು ದರವಿರುವುದರಿಂದ ಸಣ್ಣ ರೈತರಿಗೆ ಅದು ಸಿಕ್ಕುವುದಿಲ್ಲ, ಆದುದರಿಂದ ಈ ಸಂದರ್ಭದಲ್ಲಿ ನಾನು ಸೂಚಿಸುವುದು ರಾಸಾಯನಿಕ ಗೊಬ್ಬರ ಸಬ್ಸಿಡಿ ಬೇಸಿಸ್ ಮೇಲೆ ಕೊಡಬೇಕು. ಬಜೆಟ್ಟಿನಲ್ಲಿ ಭಾರಿ ನೀರಾವರಿ ಯೋಜನೆಗಳಿಗೆ ಸುಮಾರು 16 ಕೋಟಿ ರೂಪಾಯಿ ಒದಗಿಸಿದೆ. ನಮ್ಮ ದೇಶದ ಇರಿಗೇಷನ್ ಪರ್ಸೆಂಟೇಜ್ ಸೇಕಡ 10 ರಷ್ಟು ಮಾತ್ರ ಇದೆ, ಅದನ್ನು ಹೆಚ್ಚಿಸಬೇಕಾದರೆ ಮತ್ತು ನಮಗಿರುವ ನೀರಿನ ಹಕ್ಕನ್ನು ಉಪಯೋಗಮಾಡಿಕೊಳ್ಳಬೇಕಾದರೆ ಪ್ರತಿ ವರ್ಷ ಬಜೆಟ್ಟಿನಲ್ಲಿ ನೀರಾವರಿ ಯೋಜನೆಗಳಿಗಾಗಿ ಸುಮಾರು 30 ಕೋಟಿಯಾದರೂ ಒದಗಿಸಿದರೆ 5 ವರ್ಷಗಳಲ್ಲಿ ನಮ್ಮ ಪ್ರದೇಶದಲ್ಲಿರುವ ಕಾವೇರಿ ಬೇಸಿನ್ ಯೋಜನೆಗಳು ಮತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಮುಗಿಸಲು ಅನುಕೂಲವಾಗುವುದು. ಆದುದರಿಂದ ಕನಿಷ್ಠ ಪಕ್ಷ ಪ್ರತಿವರ್ಷ ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳಿಗೆ 30 ಕೋಟಿ ರೂಪಾಯಿಗಳನ್ನು ಒದಗಿಸಬೇಕು.

ಇನ್ನು ಶಿಕ್ಷಣ ಸಂಬಂಧವಾಗಿ ಹೇಳಬೇಕಾದರೆ ಈ ವರ್ಷ ಬಜೆಟ್ಟಿನಲ್ಲಿ ಯೂನಿವರ್ಸಿಟಿಗಳಿಗೆ ಬಹಳ ಗ್ರಾಂಟನ್ನು ಕೊಟ್ಟಿದ್ದಾರೆ, ಬೆಂಗಳೂರು ಯೂನಿವರ್ಸಿಟಿಗೆ ಸುಮಾರು 5 ಲಕ್ಷ, ಮೈಸೂರು ಯೂನಿವರ್ಸಿಗೆ 66 ಲಕ್ಷ, ಕರ್ಣಾಟಕ ಯೂನಿವರ್ಸಿಟಿಗೆ ಸುಮಾರು 58 ಲಕ್ಷ ಗ್ರಾಂಟನ್ನು ಕೊಟ್ಟಿದ್ದಾರೆ. ನನಗೆ ತಿಳಿದ ಪ್ರಕಾರ ಗುಲ್ಬರ್ಗಕ್ಕೆ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಒಂದು ಪೋಸ್ಟ್ ಗ್ರಾಜುಯೇಟ್ ಸೆಂಟರನ್ನು ಮಂಜೂರುಮಾಡಿದೆ, ಈಗಾಗಲೆ ಕರ್ಣಾಟಕ ಯೂನಿವರ್ಸಿಟಿ ಪೋಸ್ಟ್ ಗ್ರಾಜುಯೇಟ್ ಸೆಂಟರನ್ನು ಸ್ಥಾಪಿಸಲು ಕೆಲವು ಕಾರ್ಯಕ್ರಮ ಕೈಗೊಂಡಿದೆ. ಆದರೆ ಸರಕಾರ ಅದಕ್ಕೆ ಮ್ಯಾಚಿಂಗ್ ಗ್ರಾಂಟು ಸುಮಾರು 24 ಲಕ್ಷ ಕೊಡಬೇಕಾಗುವುದು. ಆ ಗ್ರಾಂಟು ಬಜೆಟ್ಟಿನಲ್ಲಿ ತೋರಿಸಿಲ್ಲ. ಆದುದರಿಂದ ಪೋಸ್ಟ್ ಗ್ರಾಜುಯೇಟ್ ಸೆಂಟರನ್ನು ಈ ವರ್ಷ ಜೂನ್ ತಿಂಗಳಲ್ಲಿ ಪ್ರಾರಂಭಿಸಲು ಸರಕಾರಕ್ಕೆ ಆಸಕ್ತಿ ಇದ್ದರೆ ಅದು ತನ್ನ ಸಪ್ಲಿಮೆಂಟರಿ ಬಜೆಟ್ಟಿನಲ್ಲಾದರೂ ಈ ಗ್ರಾಂಟಿಗೆ ಸುಮಾರು 24 ಲಕ್ಷ ಒದಗಿಸಬೇಕು. ಹೋದ ಸಲ ಬಜೆಟ್ಟಿನಲ್ಲಿ ಶಿಕ್ಷಣಕ್ಕೆ ಸುಮಾರು 45 ಕೋಟಿ ಮಂಜೂರು ಮಾಡಿದ್ದೆವು. ಆಗ ಸರಕಾರದವರು ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿಸಬೇಕೆಂದು ಸಿಬ್ಬಂದಿ ಹೆಚ್ಚಿಸಬೇಕು ಎಂದು ಹೇಳಿ ಆ ಹಣಕ್ಕೆ ಮಂಜೂರಾತಿ ಪಡೆದರು. ಈಗ ಗುಣಮಟ್ಟ ಹೆಚ್ಚಿಸಲು ಸುಮಾರು 500 ಟ್ರೈನ್ಡ್ ಗ್ರಾಜುಯೇಟ್ಸ್‌ಗಳನ್ನು ಮಿಡ್ಲ್‌ಸ್ಕೂಲುಗಳಲ್ಲಿ ಹೆಡ್‌ಮಾಸ್ಟರುಗಳನ್ನಾಗಿ ನೇಮಿಸಲು ಕಾರ್ಯಕ್ರಮವಿದೆ. ಆದರೆ ಇನ್‌ಸ್ಪೆಕ್ಟಿಂಗ್ ಸಿಬ್ಬಂದಿ ಪ್ರತಿಯೊಂದು ಜಿಲ್ಲೆಗೆ ಒಬ್ಬ ಡಿ. ಡಿ. ಪಿ. ಐ., ಒಬ್ಬ ಡಿ. ಇ. ಒ. ಸಬ್-ಡಿವಿಜನ್ನಿಗೆ ಮತ್ತು 50 ಶಾಲೆಗಳಿಗೆ ಒಬ್ಬ ಇನ್‌ಸ್ಪೆಕ್ಟರ್ ಇರಬೇಕು ಎಂದು ಯೋಜನೆ ಮಾಡಿದ್ದರು, ಆ ಯೋಜನೆಯನ್ನ ಕಾರ್ಯರೂಪಕ್ಕೆ ತಂದಿಲ್ಲ. ಅದನ್ನು ಅನುಷ್ಠಾನಕ್ಕೆ ತರಬೇಕು. ವಿದ್ಯಾ ಇಲಾಖೆಯಲ್ಲಿ ಸೀನಿಯಾರಿಟಿ ಪಟ್ಟಿ ಫೈನಲೈಜ್ ಆಗಿಲ್ಲ ಎಂದು ಕೇಳಿದ್ದೇನೆ, ಈಗಾಗಲೆ ಆ ಪಟ್ಟಿಯನ್ನು ಫೈನಲೈಜ್ ಮಾಡಬೇಕೆಂದು ಅಡ್ವೈಜರಿ ಕಮಿಟಿ ಶಿಫಾರಸುಮಾಡಿದೆ, ರೀಜನಲ್‌ವೈಜ್ ಪ್ರಮೋಷನ್ ಕೊಡಬೇಕೆಂದು ಗೊತ್ತುಮಾಡಿದ್ದರೂ ಕಾಲ ವಿಳಂಬವಾಗಿದೆ, ತೀವ್ರವಾಗಿ ಲಿಸ್ಟ್ ಫೈನಲೈಜ್ ಮಾಡಬೇಕು ಎಂದು ಕೇಂದ್ರ ಸರಕಾರದಿಂದ ಆದೇಶ ಬಂದಿದೆ ಎಂದು ಕೇಳುತ್ತೇನೆ. ವಿದ್ಯಾ ಇಲಾಖೆಯಲ್ಲಿ ಸೀನಿಯಾರಿಟಿ ಲಿಸ್ಟನ್ನು ಬೇಗನೆ ಸರಕಾರ ಫೈನಲೈಜ್ ಮಾಡಿದರೆ ಸಿಬ್ಬಂದಿ ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಮತ್ತು ಶಿಕ್ಷಣದ ಗುಣಮಟ್ಟ ಸುಧಾರಿಸುವುದಕ್ಕೆ ಸಾಧನವಾಗುತ್ತದೆ.

(ಶ್ರೀ ಎಸ್. ರುದ್ರಪ್ಪ)

ಇನ್ನು ಎನ್. ಆರ್. ಎಸ್. ಡಬ್ಲ್ಯು ಯೋಜನೆ ಇದೆ, ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಯೋಜನೆ ಜಾರಿಗೆ ತರಲು ಸಾಕಾದಷ್ಟು ಹಣ ಈ ವರ್ಷದ ಬಜೆಟ್ಟಿನಲ್ಲಿದೆ, ಇನ್ನೂ ಸುಮಾರು 3600 ಗ್ರಾಮಗಳಲ್ಲಿ ಕುಡಿಯುವ ನೀರಿಲ್ಲ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದುದರಿಂದ ಸರಕಾರದವರು ದಕ್ಷತೆಯಿಂದ ಮತ್ತು ನಿಷ್ಠೆಯಿಂದ ಪ್ರತಿಯೊಂದು ಹಳ್ಳಿಯಲ್ಲೂ ಬಾವಿ ತೋಡಲು ಅವಕಾಶ ಮಾಡಬೇಕು. ಯಾವ ಪಂಚಾಯಿತಿಯಲ್ಲಿ ಹಣಕಾಸಿನ ಪರಿಸ್ಥಿತಿ ಒಳ್ಳೆಯ ರೀತಿಯಿಂದಿದೆ ಆ ಪಂಚಾಯಿತಿಯವರು ಸೇಕಡ ಹತ್ತರಷ್ಟು ಕಾಂಟ್ರಿಬ್ಯೂಷನ್ ಕೊಟ್ಟು ಈ ಯೋಜನೆಯನ್ನು ಯಶಸ್ವಿಮಾಡಲು ಮುಂದೆ ಬಂದಿದ್ದಾರೆ. ಆದರೆ ಯಾವ ಪಂಚಾಯಿತಿಯಲ್ಲಿ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲ ಅಲ್ಲಿ ಮತ್ತು ಗ್ರೂಪ್ ಪಂಚಾಯಿತಿಯವರು ಭಿನ್ನಾಭಿಪ್ರಾಯದಿಂದ ಸೇಕಡ 10 ಭಾಗ ಕಾಂಟ್ರಿಬ್ಯೂಷನ್ ಕೊಡಲು ಮುಂದೆ ಬಂದಿಲ್ಲ. ಅಂಥ ಪಂಚಾಯಿತಿಯಲ್ಲಿ ಸರಕಾರದವರೇ ಖುದ್ದಾಗಿ ಬಾವಿ ತೋಡಿಸಬೇಕು.

ಮಾನ್ಯ ಡಿ. ಎಂ. ಸಿದ್ದಯ್ಯನವರು ರಷ್ಯ ದೇಶದ ಸಮಾಜವಾದದ ಬಗ್ಗೆ ಬಹಳ ಹೇಳಿದರು. ಲೆನಿನ್ ಬಂದ ನಂತರ ಯಾವ ರೀತಿ ಸಮಾಜವಾದ ಅನುಷ್ಠಾನಕ್ಕೆ ಬಂತು, ಬಡ ಜನರಿಗೆ ಕಲ್ಯಾಣ ಯಾವರೀತಿಯಲ್ಲಿ ಆಯಿತು ಎಂದು ಹೇಳಿದರು. ಸಮಾಜ ವಾದವನ್ನು ಅನುಷ್ಠಾನಕ್ಕೆ ತರಬೇಕಾಗಿದ್ದರೆ ಅಡ್ಮಿನಿಸ್ಟ್ರೇಟೀವ್ ಸೆಟಪ್‌ನಲ್ಲಿ ಬದಲಾವಣೆಯಾಗಬೇಕು. ಪಾಲಿಸಿ, ಧೋರಣೆ, ಚಲೋ ರೀತಿಯಲ್ಲಿದೆ, ಮಂತ್ರಿಮಂಡಲದಲ್ಲಿ ಮಂತ್ರಿಗಳು ಕೂಡ ದಕ್ಷತೆಯಿಂದ ಮತ್ತು ಆಸ್ಥೆಯಿಂದ ಕೆಲಸ ಮಾಡುತ್ತಾ ಇರಬಹುದು, ಅಥವಾ ಪಾಲಿಸಿ ಪ್ರೋಗ್ರಾಂ ಅನ್ನು ಮಾಡುವುದರಲ್ಲಿ ಅವರು ಡೈನಾಮಿಕ್ ಆಗಿರಬಹುದು ಆದರೆ ಇದನ್ನು ಇಂಪ್ಲಿಮೆಂಟ್ ಮಾಡತಕ್ಕ ಸಿಬ್ಬಂದಿ ಏನಿದೆ, ಅಡ್ಮಿನಿಸ್ಟ್ರೇಟಿವ್ ಸೆಟಪ್ ಏನಿದೆ ಅದನ್ನು ಬದಲಾವಣೆ ಮಾಡಬೇಕು. ಲೆನಿನ್ ಅಧಿಕಾರಕ್ಕೆ ಬಂದ ಮೇಲೆ ಯಾವ ಅಧಿಕಾರಿಗಳಿಗೆ ಸಮಾಜವಾದದಲ್ಲಿ ವಿಶ್ವಾಸವಿಲ್ಲ, ನಂಬಿಕೆ ಇಲ್ಲ, ಅವರನ್ನು ತೆಗೆದು ಹಾಕಿದ. ಅದೇ ರೀತಿಯಲ್ಲಿ ಇಲ್ಲಿಯೂ ಸಮಾಜವಾದ ಕಾರ್ಯರೂಪದಲ್ಲಿ ಬರಬೇಕು, ಅನುಷ್ಠಾನದಲ್ಲಿ ಬರಬೇಕು ಎಂಬ ಉದ್ದೇಶವಿದ್ದರೆ, ತುರ್ತಾದ ಕ್ರಮವನ್ನು ತೆಗೆದುಕೊಳ್ಳಬೇಕು. ಯಾವ ಅಧಿಕಾರಿಗಳಿಗೆ ಇಂಥ ಪಾಲಿಸಿಯಲ್ಲಿ ಪ್ರೋಗ್ರಾಂನಲ್ಲಿ ನಂಬಿಕೆ, ವಿಶ್ವಾಸವಿಲ್ಲ ಅಂಥವರ ಮೇಲೆ ಕ್ರಮ ತೆಗೆದುಕೊಂಡರೆ, ಬಡ ಜನರಿಗಾಗಿ ನಾವು ಮಾಡಿದಂಥ ಪ್ಲಾನಿಂಗ್ ಬೆನಿಫಿಟ್ ಆಗಲೀ, ಎಕನಾಮಿಕ್ ಬೆನಿಫಿಟ್ ಆಗಲೀ ಕೊಡಬಹುದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ನಾನು ವಂದಿಸುತ್ತೇನೆ.

† ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಸಭಾಧ್ಯಕ್ಷರೇ, ಹಣಕಾಸಿನ ಸಚಿವರು 1970–71ರ ಆಯವ್ಯಯವನ್ನು ಸಭೆಯಲ್ಲಿ ಇಟ್ಟಿರುವುದನ್ನು ನಾನು ಸಾಮಾನ್ಯವಾಗಿ ವಿರೋಧಿಸುತ್ತೇನೆ. 11.16 ಕೋಟಿ ಕೊರತೆ ಇರುವ ಬಜೆಟ್ಟನ್ನು ಮಂಡಿಸಿರುವುದು ಬಹಳ ಕಳವಳಕಾರಿಯಾದ ಹಣಕಾಸಿನ ಪರಿಸ್ಥಿತಿಯನ್ನು ಅವರು ಸಭೆಯ ಮುಂದೆ ಇಟ್ಟಿದ್ದಾರೆ. ಈ ಹಣಕಾಸಿನ ಪರಿಸ್ಥಿತಿ ಇಷ್ಟು ಕಳವಳಕಾರಿಯಾದ ಮಟ್ಟಕ್ಕೆ ಬರಬೇಕಾದರೆ ಈ ರಾಜ್ಯ ಸರ್ಕಾರವೇ ಕಾರಣ ಎಂದು ಹೇಳಬೇಕಾಗಿದೆ. ಅದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು. ನನ್ನ ಮುಂದೆ ಇರುವ ಕಾರಣಗಳಲ್ಲಿ ಎಲ್ಲವನ್ನೂ ಸುದೀರ್ಘವಾಗಿ ಹೇಳುತ್ತಾ ಹೋದರೆ ನನ್ನ ಕಾಲ ಕಳೆಯುತ್ತದೆ ಎಂದು ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

ರಾಜ್ಯಕ್ಕೆ ಭೇಟಿ ಕೊಟ್ಟಿದ್ದ ಹಣಕಾಸಿನ ಆಯೋಗದ ಮುಂದೆ ನಮ್ಮ ಸರ್ಕಾರ ತಮ್ಮ ವಾದವನ್ನು ಸರಿಯಾಗಿ ಮಂಡಿಸಿಲ್ಲ. ದೆಹಲಿಗೆ ಹೋದಂಥ ನಮ್ಮ ಹಣಕಾಸಿನ ಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಅಧಿಕಾರಿಗಳ ಒಂದು ಸೈನ್ಯ, ಕೌರವರ ಸೈನ್ಯ, ಯಾತ್ರೆ ಹೊರಟು ಕೇಂದ್ರ ಸರ್ಕಾರದ ಮುಂದೆ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಮತ್ತು ನಮ್ಮ ಅನೇಕ ಬೇಡಿಕೆಗಳೇನಿವೆ, ಏನು ಮಾಡುತ್ತೇವೆ, ಯಾವರೀತಿಯಲ್ಲಿ ಹಣಕಾಸಿನ ನೆರವನ್ನು ಕೊಡಬೇಕು ಎಂದು ಹೇಳುವುದರಲ್ಲಿ ಫಲಕಾರಿಯಾಗಿ ಹಣಕಾಸಿನ ಆಯೋಗದ ಮುಂದೆ ಇಟ್ಟಿಲ್ಲ. ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಇರುವ ಪಕ್ಷ ಭೇದ ಕಾರಣದಿಂದ ಕೇಂದ್ರದವರು ನಮ್ಮ ಮೇಲೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಕೆಲವರು ಹೇಳುವುದು ಸರಿಯಾದ ಮಾತಲ್ಲ. ಅದಕ್ಕೆ ಕಾರಣವನ್ನು ನಾನು ಈಗಾಲೇ ಹೇಳಿದ್ದೇನೆ.

ಒಂದು ಮುಖ್ಯವಾದ ಅಂಶವನ್ನು ಈ ಸಭೆಯ ಮೂಲಕ ಸರ್ಕಾರಕ್ಕೆ ನಾನು ಸೂಚಿಸುತ್ತೇನೆ. ತಾಕೋಳ್ ವರದಿಯನ್ನು ಈ ಸಭೆಯಲ್ಲಿ ಚರ್ಚೆ ಮಾಡಿದ ಕಾಲದಲ್ಲಿ ಈ ರಾಜ್ಯ ಸರ್ಕಾರದವರ ಧೋರಣೆ ಏನು, ಕಮಿಷನ್ ಕೊಟ್ಟಿರುವ ವರದಿಯನ್ನು ಒಪ್ಪಿಕೊಂಡು ಅದರಿಂದ ಹೆಚ್ಚುವರಿ ಎಷ್ಟು ಖರ್ಚು ಬರುತ್ತದೆ ಎನ್ನುವುದನ್ನು ಹೇಳಿ, ಈಗಲೇ ಇಂಪ್ಲಿಮೆಂಟ್ ಮಾಡುವುದಾಗಿ ಈ ಸಭೆಗೆ ಭರವಸೆಯನ್ನು ಕೊಡ ತ್ತೀರಾ ಎಂದು ಕೇಳಿದ್ದಕ್ಕೆ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳತಕ್ಕ ಧೈರ್ಯವಿರಲಿಲ್ಲ. ಕೊಟ್ಟರೆ ಏನಾಗುತ್ತದೆ, ಕೊಡದೆ ಇದ್ದರೆ ಏನಾಗುತ್ತದೆ ಎಂದು ತಾಳಮೇಳ ಹಾಕುತ್ತಿದ್ದರು. ತಾಕೋಳ್ ಕಮಿಷನ್ ವರದಿಯನ್ನು ಜಾರಿಗೆ ಕೊಡುತ್ತೇವೆಂದು ಮೊದಲೇ ಹೇಳಿದ್ದರೆ, ಐದನೇ ಹಣಕಾಸು ಆಯೋಗದಲ್ಲಿ ನಮ್ಮ ರಾಜ್ಯಕ್ಕೆ ಹತ್ತಾರು ಕೋಟಿ ರೂಪಾಯಿ ಹೆಚ್ಚಾಗಿ ಬರುತ್ತಿತ್ತು. ಹಣಕಾಸು ಮಂತ್ರಿಗಳು ಉತ್ತರ ಕೊಡುವಾಗ ಬೇರೆ ಕಾರಣವನ್ನು ಕೊಡಬಹುದು ಎಷ್ಟು ಹಣವನ್ನು ಯೋಜನೆಗಳಲ್ಲಿ ಅಳವಡಿಸಿರುವ ಕಾರ್ಯಗಳಿಗೆ ಖರ್ಚು ಮಾಡುತ್ತೇವೆ, ಎಷ್ಟು ಹಣವನ್ನು ಯೋಜನೆಗಳಲ್ಲಿ ಅಳವಡಿಸದೆ ಇರುವ ಕಾರ್ಯಗಳಿಗೆ ಖರ್ಚು ಮಾಡುತ್ತೇವೆಂದು ಸರಿಯಾದ ವಿವರಗಳನ್ನು ಹಣಕಾಸು ಆಯೋಗದ ಮುಂದೆ ಮತ್ತು ಕೇಂದ್ರ ಸರ್ಕಾರದ ಮುಂದೆ ಮಂಡಿಸಬೇಕಾಗಿತ್ತು. ಮಂತ್ರಿಗಳು ಬರೀ ಪ್ರವಾಸ ಹೋಗುವುದು, ಹಾರ ಹಾಕಿಸಿ ಕೊಂಡು ಕೂಟಗಳಲ್ಲಿ ಭಾಗವಹಿಸುವುದು ಇದರಲ್ಲಿಯೇ ಅವರ ಕಾಲವೆಲ್ಲಾ ಕಳೆಯುತ್ತ ಇದೆ. ಮಂತ್ರಿಗಳೇ ಹೀಗೆ ಮಾಡುವಾಗ ಇತರ ಅಧಿಕಾರಿಗಳು ಯಾವರೀತಿ ವರ್ತಿಸುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು. ಮಂತ್ರಿಗಳು ಸಣ್ಣ ಕುಟುಂಬದಲ್ಲಿ ಒಬ್ಬ ಯಜಮಾನ ಇದ್ದಹಾಗೆ. ಯಜಮಾನ ಯಾವರೀತಿ ಇರುತ್ತಾನೆ ಅದೇ ರೀತಿಯಲ್ಲಿ ಮನೆಯಲ್ಲಿರುವ ಇತರ ಸದಸ್ಯರು ಕೆಲಸ ಮಾಡುತ್ತಾರೆ. ಹಾಗೆಯೇ ಮಂತ್ರಿಗಳು ಸರಿಯಾದ ಅಂಕಿ ಅಂಶಗಳನ್ನು ಸಂಗ್ರಹಿಸಿ ಕೇಂದ್ರದಲ್ಲಿರುವ ಸರ್ಕಾರದ ಮುಂದೆ ಮತ್ತು ಆಯೋಗದ ಮುಂದೆ ಸರಿಯಾದ ಪಟ್ಟಿಯನ್ನು ಇಡಬೇಕಾಗಿತ್ತು. ಮಾನ್ಯ ಹಣಕಾಸಿನ ಸಚಿವರು ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಆದರೆ ಅವರಿಗೆ ಸ್ವಲ್ಪ ನಿರುತ್ಸಾಹ ಬಂದಿದೆ. ನಾನು ಏನು ಮಾಡಿದರೂ ಹೆಸರು ಬರುವುದಿಲ್ಲ, ಬೇರೆಯವರಿಗೆ ಹೋಗುತ್ತದೆ ಎಂದು ಅವರ ಮನಸ್ಸಿನಲ್ಲಿರುತ್ತದೆ ಎಂದು ನನಗೆ ತೋರುತ್ತದೆ. ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರುವ ಮುಖ್ಯ ಮಂತ್ರಿಗಳಿಂದ ಹಿಡಿದು ಇತರ ಮಂತ್ರಿಗಳವರೆಗೆ ಎಲ್ಲರೂ ಜವಾಬ್ದಾರರು. ಮುಖ್ಯ ಮಂತ್ರಿಗಳಿಗೆ ಕಾಲ ಸಾಲುವುದಿಲ್ಲ. 365 ದಿವಸಗಳ ಜೊತೆಗೆ ಇನ್ನೂ 365 ದಿವಸ ಸೇರಿಸ ಬೇಕು. ಪ್ರವಾಸಕ್ಕೆ 365 ದಿವಸ ಕೊಟ್ಟು 365 ದಿವಸ ಕೆಲಸ ಮಾಡುವುದಕ್ಕೆ ಕೊಡಬೇಕು. ಮುಖ್ಯ ಮಂತ್ರಿಗಳಾದಿಯಾಗಿ ಒಂದು ತಿಂಗಳಿಗೆ ಹತ್ತು ದಿವಸ ಪ್ರವಾಸ ಕೈಕೊಳ್ಳಬೇಕು ಎಂದು ಮೇಲಿಂದ ಮೇಲೆ ಸಭೆಯಲ್ಲಿ ಹೇಳಿದ್ದಾರೆ. ಆದರೂ ಮಂತ್ರಿಗಳು ಬಿಡುವುದಿಲ್ಲ. ಕಾರಣ ಅನೇಕರಿಗೆ ಕೆಲಸ ವಿಲ್ಲ. ಉಪಮಂತ್ರಿಗಳಿಗೆ ಮತ್ತು ರಾಜ್ಯ ಮಂತ್ರಿಗಳಿಗೆ ಕೆಲಸವಿರುವುದಿಲ್ಲ. ಅವರಿಗೆ ಫೈಲುಗಳು ಬರುವುದಿಲ್ಲ. ಅವರನ್ನು ನೋಡಿ ನನಗೆ ಬಹಳ ಕನಿಕರವಾಗುತ್ತದೆ. ಹೀಗಾಗಿ ಅವರಲ್ಲಿ ನಿರು ತ್ಸಾಹ ಬಂದಿದೆ. ದೇ ಆರ್ ಡೆಸ್ಪರೇಟ್ ಸೋಲ್ಜರ್ಸ್. ಸಿವಿಲ್ ಸರ್ವೆಂಟ್ಸ್ ಡೆಸ್ಪರೇಟ್ ಆಗಿದ್ದಾರೆ. ಇನ್ನು ಅಡ್ಮಿನಿಸ್ಟ್ರೇಷನ್ ಹೇಗೆ ನಡೆಯುತ್ತದೆ ಎನ್ನುವುದನ್ನು ಒಂದೆರಡು ಮಾತಿನಲ್ಲಿ ಹೇಳುತ್ತೇನೆ. ಅದು ನೋ ಮ್ಯಾನ್ಸ್ ರೆಸ್ಪಾನ್ಸಿಬಿಲಿಟಿ ಆಗಿದೆ. ಯಾರೋ ಮುಖ್ಯ ಮಂತ್ರಿಗಳಾಗಿ ನಡೆಸಿಕೊಂಡು ಹೋಗುತ್ತಾರೆ. ಹಣಕಾಸಿನ ಮಂತ್ರಿಗಳನ್ನು ಸಂಬಂಧಪಟ್ಟುದಕ್ಕೆ ಹಣವನ್ನು ಕೇಳುತ್ತಾರೆ. ದೊಡ್ಡ ಪ್ಯಾರಾಫರ್ನೇಲಿಯಾ ಇಟ್ಟುಕೊಂಡು, ಸಿಬ್ಬಂದಿ ಇಟ್ಟುಕೊಂಡು ಕಾರುಗಳಲ್ಲಿ ಪ್ರವಾಸ ಮಾಡುವುದೇ ದೊಡ್ಡ ಕೆಲಸವೆಂದು ತಿಳಿದುಕೊಂಡಿದ್ದಾರೆ. ಅನೇಕ ಮಂತ್ರಿಗಳ ಹಿಂದೆ ಡೆಪ್ಯುಟಿ ಕಮಿಷನರು ಬರುವುದಿಲ್ಲ, ಬರಲೇ ಬೇಕು ಎಂದರೂ ಅವರು ಬರುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಪ್ರವಾಸ ಮಾಡುವುದಕ್ಕೆ ಸಿಬ್ಬಂದಿ ವರ್ಗ ಬೇಕು. ಮಂತ್ರಿಗಳು ಪ್ರವಾಸಕ್ಕೆ ಹೋದರೆ ಮಂತ್ರಿಗಳ ಮುಂದೆ, ಸಾರ್ವಜನಿಕರು ಯಾರೂ ಬರುವುದಿಲ್ಲ. ಅವರ ಹಿಂದೆ ಹೋಗಲು ನಾನು ಈಗಾಗಲೇ ಹೇಳಿದಂತೆ ಅವರ ಸಿಬ್ಬಂದಿ ವರ್ಗ ಬೇಕಾಗುತ್ತದೆ. ಐದನೆಯ ಹಣಕಾಸು ಆಯೋಗದಿಂದ ನಮಗೆ ಅನ್ಯಾಯವಾಗಿದೆ ಎಂಬರೆ, ಆ ವಿಷಯ ಸಭೆಯಲ್ಲಿ ಕೂಡ ಚರ್ಚೆಗೆ ಬಂದಿತ್ತು, ನಮ್ಮ ಹಣಕಾಸು ಮಂತ್ರಿಗಳಾಗಲೀ, ಮುಖ್ಯ ಮಂತ್ರಿಯಾದಿಯಾಗಿ ಯಾರೇ ಆಗಲೀ ಸರಿಯಾದ ಅಂಕಿ ಅಂಶಗಳನ್ನು ಹಣಕಾಸು ಆಯೋಗಕ್ಕೆ ಒದಗಿಸದೆ ಇರುವುದರಿಂದಲೇ ಅನ್ಯಾಯವಾಗಿದೆ. ಅಭಿವೃದ್ಧಿ ಕಾರ್ಯಗಳು ಆಗಬೇಕು, ಆದರೆ ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ ಅಂದರೆ ಮುಂದಿನ ವರ್ಷದ ಆಯವ್ಯಯ ಪಟ್ಟಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಪ್ರೊಡಕ್ಟಿವ್ ವರ್ಕ್‌ಗಳಿಗೆ ಹಣವಿಲ್ಲ ಎಂದು ಹೇಳುತ್ತೀರಿ. ರಸ್ತೆ ಬಗ್ಗೆ ಆಗಲಿ ಕೆರೆ ಕಟ್ಟುವ ಬಗ್ಗೆ ಆಗಲಿ ಹಣ ಒದಗಿಸಿ ಎಂದರೆ ಫೈನಾನ್ಸಿಯಲ್ ಸ್ಟ್ರಿಂಜನ್ಸಿ ಇದೆ, ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತೀರಿ. ಆದರೆ ಕಚೇರಿ ಸಿಬ್ಬಂದಿಗೆ ಆಗಲಿ, ಜೀಪು ಕೊಳ್ಳುವುದೇ ಆಗಲಿ ಅದಕ್ಕೆ ಹಣ ಇರುತ್ತದೆ. ಕಳೆದ ಇಪ್ಪತ್ತು ವರ್ಷ

(ಶ್ರೀ ಎನ್. ಚಿಕ್ಕೇಗೌಡ)

ಗಳಿಂದ ಜನತೆಯನ್ನು ಮೋಸ ಮಾಡಿದ್ದೀರಿ. ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದವರೇ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾರೆ, ಅವರ ಹೆಸರು ಹೇಳುವುದಿಲ್ಲ. ಯಾವುದಕ್ಕೂ ಒಂದು ಪರಿಮಿತಿ ಇರಬೇಕು. ಸೋಷಿಯಾಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಲ್ಲಿ ಇದೆ? ಇಂದು ಸಮತಾವಾದ ನಮಗೆ ಹೇಳಲು ಹೊರಟಿದ್ದಾರೆ. 20 ವರ್ಷ ಅನ್ಯಾಯ ಮಾಡಿದ್ದೀರಿ. ಶ್ರೀ ಸಿದ್ದವೀರಪ್ಪನವರ ನಿರ್ಣಯದಲ್ಲಿ ಇದನ್ನು ಹೇಳಿದೆ. ಗಾಂಧೀಜಿಯವರ ಅನುಯಾಯಿಗಳೆಂದು ಬಡವರ ಕಣ್ಣೀರು ಒರೆಸುವುದಕ್ಕೆ ಹೊರಟಿದ್ದೀರಿ. ಆದರೆ ರೈಲು ಹೊರಟು ಹೋಗಿದೆ. ನಿಮ್ಮಲ್ಲಿ ಜನತೆಗೆ ನಂಬಿಕೆ ಇಲ್ಲ.

5-30 P.M.

ಮೊಟ್ಟ ಮೊದಲು ನಿಮ್ಮ ಅಡ್ಮಿನಿಸ್ಟ್ರೇಷನ್ ಸರಿಯಾಗಿಲ್ಲ. ಮನೆಯ ಯಜಮಾನ ಸರಿಯಾಗಿ ಇದ್ದರೆ ಕಾನೂನು ಪರಿಪಾಲನ ಎಲ್ಲರೂ ಸರಿಯಾಗಿ ಮಾಡುತ್ತಾರೆ. ಮನೆಯ ಯಜಮಾನ ಮಗನ ಮುಂದೆ ಬೀಡಿ ಸೇದಿದರೆ, ನಮ್ಮ ಮುಂದೆ ಅವನೂ ಬೀಡಿ ಸೇದುತ್ತಾನೆ. ಎರಡು ಲಕ್ಷ ಅಧಿಕಾರಿಗಳಿಗಾಗಿ ಸಿವಿಲ್ ಸರ್ವೆಂಟ್ಸಿಗಾಗಿ ಎಷ್ಟು ಹಣ ಖರ್ಚು ಮಾಡುತ್ತೀರಿ? ರಾಜ್ಯದ ಟೋಟಲ್ ರೆವಿನ್ಯೂವಿನ 51 ಪರ್ಸೆಂಟ್ ಈ ಸಿಬ್ಬಂದಿಗಾಗಿ ಖರ್ಚಾಗುತ್ತದೆ. ಸಿವಿಲ್ ಸರ್ವೆಂಟ್ಸ್‌ಗಳಿಗೆ ಏನು ಕೆಲಸ ಇದೆ? ಅವರು ತಮ್ಮ ಕೆಲಸವನ್ನು ಜವಾಬ್ದಾರಿಯಿಂದ ಸರಿಯಾಗಿ ಮಾಡುತ್ತಿದ್ದಾರೆಯೇ? ಎಲ್ಲವೂ ಕೇಯಾಟಿಕ್ ಕಂಡೀಷನ್ ಆಗಿದೆ. ಅವರಿಗೆ ಎಷ್ಟು ಸಂಬಳ ಹೆಚ್ಚಿಸಿ ಕೊಟ್ಟರೂ ಅವರು ಅಸಮಾಧಾನದಿಂದ ಇದ್ದಾರೆ. ಇದರ ಬಗ್ಗೆ ನಾನು ಅನೇಕ ಸಲ ಹೇಳಿದ್ದೇನೆ. ಮುಖ್ಯ ಮಂತ್ರಿಗಳಿಗೆ ಕಾಗದ ಬರೆದು ತಿಳಿಸಿದ್ದೇನೆ. ನಿಷ್ಪಕ್ಷಪಾತದಿಂದ ಇಂದು ಆಡಳಿತದಲ್ಲಿ ಕೆಲಸ ನಡೆಯುತ್ತಿಲ್ಲ. ಆದರೂ ಕೂಡ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳಲು ನಿಮಗೆ ಆಗುವುದಿಲ್ಲ. ನಿಮಗೆ ಆ ಧೈರ್ಯ ಇರುತ್ತದೆಯೇ? ಕೋಆಪರೇಟಿವ್ ಇಲಾಖೆಯ ಇನ್‌ಸ್ಪೆಕ್ಟರರು ಊರಿನಲ್ಲಿಯೇ ಇದ್ದು ಟಿ.ಎ. ಡಿ.ಎ. ಧೈರ್ಯವಾಗಿ ಕ್ಲೈಮು ಮಾಡುತ್ತಾರೆ. ಸರಿಯಾದ ಬಿಗಿ ಇಲ್ಲದೇ ಇರುವುದರಿಂದ ಅವರು ಹಾಗೆ ಮಾಡುತ್ತಾರೆ. ಆದುದರಿಂದ ಅಡ್ಮಿನಿಸ್ಟ್ರೇಷನ್ ಕೇಯಾಟಿಕ್ ಕಂಡೀಷನಿನಲ್ಲಿ ಇದೆ. ನಾನು ಒಂದು ಸೂಚನೆ ಮಾಡುತ್ತೇನೆ. ಅಧಿಕಾರಿಗಳನ್ನು 25 ವರ್ಷ ವರೆಗೆ ಇಟ್ಟುಕೊಳ್ಳುವುದರ ಬದಲು ಕಂಟ್ರಾಕ್ಟ ಬೇಸಿಸ್ ಮೇಲೆ 5 ವರ್ಷ ನೇಮಕ ಮಾಡಿಕೊಳ್ಳಬಹುದು. ಅಂದರೆ ಅವರಿಗೆ ಭಯ ಬರುತ್ತದೆ.

ನಿಮ್ಮ ಅಧಿಕಾರ ಸ್ಥಾನ ಭದ್ರಪಡಿಸಿಕೊಳ್ಳಲು ಕಾರ್ಪೊರೇಷನ್ನುಗಳನ್ನು ಮಾಡಿ ಅದಕ್ಕೆ ಒಬ್ಬರನ್ನು ಛೇರಮನ್ ಮಾಡುತ್ತಿದ್ದೀರಿ. ಛೇರಮನ್ ಮಾಡಿಬಿಟ್ಟರೆ ಗಲಾಟೆ ಇರುವುದಿಲ್ಲ. ನಿಮಗೆ ಓಟು ದೊರೆಯಬೇಕು ಎಂದು ಹೀಗೆ ಮಾಡುತ್ತಿದ್ದೀರಿ ವಿನಾ ದೇಶದ ಹಿತ ದೃಷ್ಟಿಯಿಂದ ಮಾಡುತ್ತಿಲ್ಲ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಆಡಳಿತದ ಬಗ್ಗೆ ಹೇಳಲು ಇಚ್ಛಿಸುತ್ತೇನೆ. ಇದರ ಮಂತ್ರಿಗಳು ಆರಾಮವಾಗಿ ಇದ್ದು ಬಿಡುತ್ತಾರೆ. ಮೂರು ದಿವಸಕ್ಕೊಮ್ಮೆ ಸಭೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರ ಬಗ್ಗೆ ದೋಷಾರೋಪಣೆ ಮಾಡುವುದಿಲ್ಲ. ಅವರು ತಮ್ಮ ಛೇಂಬರ್ಸನಲ್ಲಿ ಯಾವಾಗ ಕೂತುಕೊಳ್ಳುತ್ತಾರೆ? ಅವರಿಗೆ ಹಾರ್ಟ ಟ್ರಬಲ್ ಇದ್ದರೆ ಮನೆಯಲ್ಲಿ ಕೂತುಕೊಂಡರೆ ಯಾರೂ ಕೇಳುವುದಿಲ್ಲ.

ಅಗ್ರಿಕಲ್ಚರ್ ಬಗ್ಗೆ ಹೇಳುವುದಾದರೆ ಗ್ರೀನ್ ರೆವೆಲ್ಯೂಷನ್ ಆಗಿದೆ ಎಂದು ಹೇಳುತ್ತಾರೆ. ಆದರೆ ರೈತನ ಸಲುವಾಗಿ ಏನು ಮಾಡಿದ್ದೀರಿ? ವ್ಯವಸಾಯಕ್ಕೆ ಬೇಕಾಗುವ ಗೊಬ್ಬರ ಬೀಜ ಮುಂತಾದ ಸಾಮಾನುಗಳನ್ನು ಸರಿಯಾದ ರೇಟಿನಲ್ಲಿ ಒದಗಿಸುತ್ತಿದ್ದೀರಾ? ಇಂಡಸ್ಟ್ರೀಸ್ ವಿಚಾರ ನೋಡಿದರೆ ಖೋಡೆ, ನೆಟ್ಟಕಲ್ಲಪ್ಪ ಅಂಥವರಿಗೆ ಎಲ್ಲ ಸೌಕರ್ಯ ಒದಗಿಸಿ ಕೊಡುತ್ತೀರಿ. ಇದು ಸಮತಾವಾದವೇ? ಎಷ್ಟು ದಿವಸ ಹೀಗೆ ಮಾಡುತ್ತೀರಿ? 1972 ಕ್ಕಿಂತ ಮುಂಚೆ ನಾವು ಅಧಿಕಾರಕ್ಕೆ ಬರುತ್ತೇವೆ. ನೀವು ತಿರುಕನ ಕನಸು ಮಾತ್ರ ಕಾಣುತ್ತಿದ್ದೀರಿ. ಜನತೆ ಎಲ್ಲವನ್ನೂ ತಿಳಿದುಕೊಂಡಿದ್ದಾರೆ. ನೀವು ಮೋಸ ಮಾಡುತ್ತೀರಿ ಎಂದು ಜನತೆ ತಿಳಿದುಕೊಂಡಿದ್ದಾರೆ. ಇಂದು ಜನವೇ ನಮಗೆ ದೊರೆಗಳು ಅವರು ಬರುವ ಚುನಾವಣೆಯಲ್ಲಿ ನಿಮ್ಮ ಬಾಯಿ ಹಿಡಿಯುತ್ತಾರೆ. ಇದನ್ನು ಘಂಟಾ ಘೋಷವಾಗಿ ಹೇಳುತ್ತೇನೆ ಸುಳ್ಳು ಟೊಳ್ಳು ಮಾತು ಹೇಳಬೇಡ. ಜನತೆಗೆ

ಅನುಕೂಲ ಮಾಡಿಕೊಟ್ಟರೆ ಅವರ ಶಕ್ತಿ ಸಹಕಾರ ನಿಮಗೆ ಕೊಡುತ್ತಾರೆ. ಕೊನೆಯದಾಗಿ ನನಗೆ ಎರಡು ಮಾತು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, 1970–71 ರ ಆಯ ವ್ಯಯ ಪಟ್ಟಿಯನ್ನು ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎನ್. ಲೋಕಯ್ಯನಾಯಕ್ (ವಿರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ : ನಮ್ಮ ಮುಂದಿರತಕ್ಕ 70-71 ನೇ ಸಾಲಿನ ಮುಂಗಡ ಪತ್ರದ ಬಗ್ಗೆ ಮಾತನಾಡುವಾಗ ಇದರಲ್ಲಿ ನಮ್ಮ ರಾಜ್ಯದ ಮುಂದಿನ ಹತ್ತು ವರ್ಷಗಳಲ್ಲಿ ಯಾವ ರೀತಿ ಉನ್ನತಿಯನ್ನು ಸಾಧಿಸಬೇಕು ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಇದರಲ್ಲಿ ಹೇಳಿದ್ದಾರೆ. ಅವರು ಹೀಗೆ ಹೇಳಿರು ವುದನ್ನು ನಾವು ವಿವೇಚನೆ ಮಾಡಿ ನೋಡುವುದಾದರೆ ಅವರು ಹೇಳಿರುವುದರಲ್ಲಿ ಏನೂ ಅರ್ಥವಿಲ್ಲ ಮತ್ತು ಅದನ್ನು ಓದುವುದಕ್ಕೂ ಕೂಡ ಬೇಸರವಾಗುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತರು ವಾಯದಲ್ಲಿ ಆಡಳಿತಗದ್ದುಗೆಯನ್ನೇರುವಾಗ ಕಾಂಗ್ರೆಸ್ ಪಕ್ಷದವರು ದೇಶದಲ್ಲಿರತಕ್ಕ ಎಲ್ಲ ಜನತೆಗೂ ಒಂದು ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದಾಗಿ ದೊಡ್ಡ ದೊಡ್ಡ ಘೋಷಣೆಗಳನ್ನು ಮಾಡಿದ್ದರು ಅದೆಲ್ಲವೂ ಇಂದು ನಿರಾಶೆಯಲ್ಲಿ ಪರ್ಯವಸಾನವಾಗಿದೆ. ಆದ್ದರಿಂದ ಅಂದಿನಿಂದಲೂ ಇಂದಿನವರೆಗೂ ದೇಶದಲ್ಲಿ ಸಂಪತ್ತು ಹೆಚ್ಚುವುದಕ್ಕೆ ಬದಲಾಗಿ ಬಡತನವು ಹೆಚ್ಚುತ್ತಿದೆ, ಭಿಕ್ಷುಕರ ಸಂಖ್ಯೆಯೂ ಜಾಸ್ತಿ ಯಾಗುತ್ತಿದೆ. ಹೀಗಿದ್ದರೂ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ದಶಕದ ಮುಕ್ತಾಯಕ್ಕೆ ಮುನ್ನವೇ ಮಾನವ ಚಂದ್ರನಮೇಲೆ ಪದಾರ್ಪಣೆ ಮಾಡಿದ ಎಂಬುದಾಗಿ ಹೇಳಿದ್ದಾರೆ; ಮಾಡಿರ ಬಹುದು. ಆದರೆ ಆ ದೆಶೆಯಲ್ಲಿ ಅಮೇರಿಕಾ ದೇಶದವರು 23 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಭಾರತದಲ್ಲಿ ನಾವೂ ಕೂಡ ಅಷ್ಟೇ ಹಣವನ್ನು ನಮ್ಮ ಮೂರು ಯೋಜನೆ ಗಳಿಗಾಗಿ ಖರ್ಚು ಮಾಡಿದ್ದೇವೆ. ಆದರೆ ಅವರು ಅಲ್ಲಿ ಅಷ್ಟು ಅದ್ಭುತವಾದ ಪ್ರಗತಿಯನ್ನು ಸಾಧಿಸಿದ್ದರೆ ನಾವಿಲ್ಲಿ ಜನಸಾಮಾನ್ಯರಿಗೆ ಒಂದು ಒಳ್ಳೆಯದನ್ನು ಮಾಡುವುದಕ್ಕಾಗಿಲ್ಲ. ಅಷ್ಟೇ ನಮಗೂ ಅವರಿಗೂ ಇರತಕ್ಕ ವ್ಯತ್ಯಾಸ. ನಮ್ಮ ಮಾನ್ಯ ಆರ್ಥಿಕ ಸಚಿವರೂ ಕೂಡ ಅನೇಕ ಪರ ರಾಷ್ಟ್ರಗಳಲ್ಲಿ ಇನ್ನೂ ಮೊನ್ನೆ ತಾನೆ ಸಂಚಾರ ಮಾಡಿಕೊಂಡು ಬಂದಿದ್ದಾರೆ. ಆದರ ಬಗ್ಗೆ ನಮ್ಮ ಸರ್ಕಾರ ಅವರ ಟಿ.ಎ. ಇತ್ಯಾದಿ ಖರ್ಚು ವೆಚ್ಚಗಳಿಗಾಗಿ 56–57 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದೆ. ಪರ ದೇಶದಲ್ಲಿ ಜನರು ತಮ್ಮ ಪ್ರಗತಿಯನ್ನು ಎಷ್ಟು ಬೇಗ ಸಾಧಿಸಿದ್ದಾರೆ ಎಂಬು ದನ್ನು ಇವರು ನೋಡಿಕೊಂಡು ಬಂದಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 22 ವರ್ಷಗಳು ಕಳೆದಿದ್ದಾಗ್ಯೂ ಇನ್ನೂ ನಾವು ಪ್ರಗತಿಯನ್ನು ಸಾಧಿಸುವುದರ ಬದಲು ಹಿಂದಕ್ಕೆ ಹೋಗುತ್ತಿದ್ದೇವೆ. ಇಲ್ಲಿ ಯಾವ ರಂಗದಲ್ಲೂ ಒಂದು ಉತ್ತಮ ಸಾಧನೆಯನ್ನು ಸಾಧಿಸಿಲ್ಲ. ನಮ್ಮನ್ನು ಆ ಅಮೇರಿಕಾ ದೇಶದ ಜನಕ್ಕೆ ಹೋಲಿಕೆ ಮಾಡಿಕೊಂಡರೆ ನಾವು ಅವರಿಗಿಂತಲೂ ಇನ್ನೂ 250 ವರ್ಷಗಳಷ್ಟು ಹಿಂದಿರುತ್ತೇವೆ.

ಇನ್ನು ನಮ್ಮ ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದ ಪುಟ 17 ರಲ್ಲಿ ಪ್ಯಾರಾ 24 ರಲ್ಲಿ "ರಾಜ್ಯದ ಕೃಷಿಯೋಗ್ಯವಾದ ಒಟ್ಟು 262 ಲಕ್ಷ ಎಕರೆ ಪ್ರದೇಶದಲ್ಲಿ ನೀರಾವರಿಗೆ ಒಳಪಟ್ಟಿರುವುದು 26 ಲಕ್ಷ ಎಕರೆ ಮಾತ್ರ. ಇದು ಶೇಕಡಾ ಸುಮಾರು 10 ರಷ್ಟು ಆಗುತ್ತದೆ" ಎಂದು ಹೇಳಿದ್ದಾರೆ. ಅಂದರೆ ನಮ್ಮಲ್ಲಿ ಇರತಕ್ಕ ನೀರಾವರಿಯಾಗತಕ್ಕ ಎಲ್ಲಾ ಭೂಮಿಗೂ ಇನ್ನೂ ನೀರನ್ನು ಒದಗಿಸು ವುದಕ್ಕಾಗಿಲ್ಲವೆಂಬುದನ್ನು ಇದು ಸೂಚಿಸುತ್ತಿದೆ. ಈ ಕಾರಣದಿಂದಲೇ ನಾವು ನಮ್ಮ ದೇಶದಲ್ಲಿ ಆಹಾರ ಸ್ವಪರಿಪೂರ್ಣತೆಯನ್ನು ಪಡೆಯಲಾಗಲಿಲ್ಲ. 26 ಲಕ್ಷ ಎಕರೆಗಳನ್ನು ನೀರಾವರಿ ಮಾಡಲು ಸರ್ಕಾರದವರು 18 ವರ್ಷಗಳನ್ನು ತೆಗೆದುಕೊಂಡರೆ ಇನ್ನು ಆ 232 ಲಕ್ಷ ಎಕರೆಗಳಿಗೆ ನೀರನ್ನು ಸರಬರಾಯಿ ಮಾಡಬೇಕಾಗಿದ್ದರೆ ಇವರಿಗೆ 162 ವರ್ಷಗಳ ಕಾಲ ಬೇಕಾಗುತ್ತದೆ. ಅಂದರೆ ಆ ಕಾಲಕ್ಕೆ ನಮ್ಮ ಆರ್ಥಿಕ ಸಚಿವರು ಇರುತ್ತಾರೆಯೇ? ಅವರು ಇನ್ನೂ ನೂರು ವರ್ಷಗಳ ಕಾಲ ಬದುಕಲಿ. ಆದರೆ ಈ ಕಾರ್ಯ ಅವರಲ್ಲಿ ಅವರ ಮಕ್ಕಳಲ್ಲ ಮುಮ್ಮಕ್ಕಳ ಕಾಲಕ್ಕೂ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹಳ್ಳೀ ಜನರಿಂದ ಸರ್ಕಾರದವರು ನಾನಾ ರೀತಿಯಲ್ಲಿ ಹಿಂಸೆ ಮಾಡಿ ಕಂದಾಯ ಕವಳಿಗೆಗಳನ್ನು ವಸೂಲ್ಮಾಡಿ ಅವರಿಂದ ಅಪಾರ ಹಣವನ್ನು ವಸೂಲ್ಮಾಡಿದ್ದರೂ ಅವರಿಗೆ ಏನೂ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಪ್ರತಿಯೊಂದು ಹಳ್ಳಿಗೂ ಒಂದೊಂದು ಸಣ್ಣ ಕೆರೆ ಅಂದರೆ ಒಂದೊಂದು ನೀರಾವರಿ ಯೋಜನೆ ಅತ್ಯಗತ್ಯವಾಗಿ ಆಗಬೇಕಾಗಿದೆ. ಅಂಥದನ್ನು ಮಾಡದೆ ಒಂದು ತಾಲ್ಲೂಕನ್ನು ಮುಳುಗಡೆ ಮಾಡಿ ಅರ್ಧ ತಾಲ್ಲೂಕಿಗೆ ಅನುಕೂಲ ಮಾಡತಕ್ಕ ಯೋಜನೆಗಳೇ ನಮ್ಮ ಸರ್ಕಾರದಲ್ಲಿ ಹೆಚ್ಚಾಗಿರುತ್ತವೆ. ಇನ್ನು ಕೆಲವು ಕಡೆ ಸರ್ಕಾರದವರು ಈ ವರ್ಷ ಏನೊಂದು ಅಲ್ಲಲ್ಲಿ ಕೆಲವು ಗ್ರಾಮಗಳಲ್ಲಿ ಒಂದು ಕೆರೆಯನ್ನೋ ಅಥವಾ ಬಾವಿಯನ್ನೋ ಮಾಡಿಸಿದ್ದರೆ ಅದು ಮುಂದಿನ ವರ್ಷವೇ ಸಂಪೂರ್ಣವಾಗಿ ಮುಚ್ಚಿರುತ್ತದೆ ಇಲ್ಲವೇ ಕಿತ್ತುಹೋಗಿರುತ್ತದೆ. ಇದು ಈಗಿನ

(ಶ್ರೀ ಎಚ್. ಲೋಕಯ್ಯ ನಾಯಕ್)

ಸರ್ಕಾರದವರ ಕಾರ್ಯಗಾರಿ ವೈಖರಿ. ಹಿಂದೆ ಬ್ರಿಟಿಷರಿದ್ದ ಕಾಲಕ್ಕೆ ಮಾಡಿಸಿರತಕ್ಕ ಕೆರೆ ಸೇತುವೆ ನಾವು ನೋಡಿ ತಿಳಿದುಕೊಳ್ಳಲಿ ಅವುಗಳಿಗೆ ನೂರಾರು ವರ್ಷಗಳು ಕಳೆದಿದ್ದಾಗ್ಯೂ ಅವು ಇನ್ನೂ ಭದ್ರವಾಗೇ ಇವೆ. ಆದರೆ ಈಗಿನ ಹಾಗೆ ಆ ದಿವಸ ಭದ್ರಾವತಿ ಸಿಮೆಂಟ್ ಇತ್ಯಾದಿಗಳು ಇರಲಿಲ್ಲ. ಆದಾಗ್ಗೂ ಅವರ ಕೆಲಸಗಳೆಲ್ಲಾ ಶಾಶ್ವತವಾದವುಗಳು. ಈಗಿನ ಜನರಲ್ಲಿ ಅಪ್ರಾಮಾಣಿಕತ್ವ ಜಾಸ್ತಿಯಾದ್ದರಿಂದಲೇ ನಾವು ನಮ್ಮ ಗುರಿ ಸಾಧನೆಯಲ್ಲಿ ಯಾವುದನ್ನೂ ಮುಟ್ಟುವುದಕ್ಕಾಗಿಲ್ಲ. ಇಲ್ಲಿಯವರೆಗೂ ವ್ಯವಸಾಯದ ಬಗ್ಗೆ ಸರ್ಕಾರ ತೋರಿದ ಅಲಕ್ಷ್ಯ ನಮ್ಮಲ್ಲಿ ಆಹಾರದ ಕೊರತೆಗೆ ಮೂಲ ಕಾರಣವಾಯಿತು.

ಇನ್ನು ನಮ್ಮ ರಾಜ್ಯದಲ್ಲಿ ಒಳ್ಳೇ ಆದಾಯವನ್ನು ತರತಕ್ಕಂಥ ಅರಣ್ಯಸಂಪತ್ತಿದೆ. ಆದರೆ ಅದನ್ನು ಸರಿಯಾಗಿ ಬಳಸುವುದಕ್ಕಾಗಿಲ್ಲ. ನಮ್ಮ ಕೊಡಗಿಗೆ ಸೇರಿದ ಭಾಗಮಂಡಲ ರೇಂಜ್ ಫಾರೆಸ್ಟಿನಲ್ಲಿ ಯಾರೋ ಒಬ್ಬ ಅಕ್ರಮವಾಗಿ ಮೂರು ಸಾವಿರ ಎಕರೆ ಅರಣ್ಯ ಭೂಮಿಯನ್ನು ಹಿಡಿದುಕೊಂಡು ಅಲ್ಲಿರತಕ್ಕ ಲಕ್ಷಗಟ್ಟಲೆ ಬೆಲೆ ಬಾಳತಕ್ಕ ಬೀಟೆ, ತೇಗ ಇತ್ಯಾದಿ ಮರಗಳನ್ನು ಕಡಿದು ಸಾಗಿಸುತ್ತಿದ್ದಾನೆ. ಅನೇಕರು ಸರ್ಕಾರಕ್ಕೆ ದೂರನ್ನು ಕೊಟ್ಟಿದ್ದರೂ ಅದನ್ನು ತಡೆಗಟ್ಟುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆ ಆಕ್ರಮಣ ಮಾಡಿಕೊಂಡಿರತಕ್ಕ ಭೂಮಿಯನ್ನು ಸರ್ವೆಮಾಡಲು ಅಲ್ಲಿಗೆ ಹೋಗತಕ್ಕ ಅಧಿಕಾರಿಗಳು ಆ ಆಕ್ರಮಣಕಾರನ ಒಂದು ದೊಡ್ಡ ಕಛೇರಿಯೇ ಇದೆ. ಅಲ್ಲಿ ಇವರೂ ಕುಳಿತು ಆತನು ಕೊಟ್ಟ ಕಾಫಿಯನ್ನು ಕುಡಿದು ಹೊರಟು ಬರುತ್ತಿದ್ದಾರೆಯೇ ವಿನಾ ಇವರು ಅಲ್ಲಿ ಸರ್ವೆ ಕಾರ್ಯವನ್ನು ಕೈಗೊಳ್ಳುವುದಕ್ಕೆ ಧೈರ್ಯವಿಲ್ಲ. ಹೀಗಾಗಿ ಅಲ್ಲಿ ಪ್ರತಿ ದಿನವೂ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳತಕ್ಕ ಶ್ರೀಗಂಧ ಮತ್ತು ಇತರೇ ಬೆಲೆ ಬಾಳತಕ್ಕ ಮರವಳಿ ಕಳವಿನಿಂದ ಸಾಗಾಣಿಕೆಯಾಗುತ್ತಿದೆ. ಅದರಲ್ಲಿ ಅಧಿಕಾರಿಗಳೂ ಕೂಡ ಷರೀಕಾಗಿರಬಹುದೇನೋ ಎಂಬ ಅನುಮಾನ ಕೂಡ ನಮಗುಂಟಾಗಿದೆ.

[Mr. DEPUTY SPEAKER in the Chair]

ಇನ್ನು ಮುಂದಕ್ಕೆ ಈ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಕಾರ್ಪೋರೇಷನ ತರುತ್ತೇವೆ ಎಂದು ತಾವು ಹೇಳಿದಿರಿ, ಹೀಗಾದರೆ ಅನೇಕ ಸುಧಾರಣೆಗಳು ಆಗಬಹುದು ಎನ್ನುವ ಆಸೆ ಇರಬಹುದು. ಅದಕ್ಕೆ ನನ್ನ ಸಲಹೆ ಈ ರೀತಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಕಾರ್ಪೋರೇಷನ್ ತೆಗೆದುಕೊಂಡು ಬಂದರೆ ಆಯಾ ಆಯಾ ಇಲಾಖೆಗೆ ಸಂಬಂಧಪಟ್ಟಂತೆ, ಆಯಾಯ ಡಿವಿಷನ್‌ಗೆ ಸಂಬಂಧಪಟ್ಟಂತೆ ಒಂದೊಂದು ಸಲಹಾ ಸಮಿತಿಗಳನ್ನು ಮಾಡಿ. ಮತ್ತು ಈ ಅರಣ್ಯ ಅಭಿವೃದ್ಧಿಯ ಬಗ್ಗೆ ಒಂದು ಸಲಹೆಯನ್ನು ತೆಗೆದುಕೊಂಡು ಅದರಿಂದ ಅರಣ್ಯಸಂಪತ್ತನ್ನು ಹೆಚ್ಚಿಸಬಹುದು. ಮತ್ತು ನಮ್ಮ ರಾಜ್ಯದ ಬೊಕ್ಕಸಕ್ಕೆ ಬೇಕಾಗಿರತಕ್ಕಂಥ ಹಣವನ್ನು ಅರಣ್ಯದ ಮುಖಾಂತರವೇ ಸಂಪಾದನೆ ಮಾಡಬಹುದೆಂದು ನಾನು ತಿಳಿಸುತ್ತೇನೆ.

ಇನ್ನು ಸಹಕಾರಸಂಘಗಳ ಬಗ್ಗೆ ಮಾನ್ಯ ರಾಜ್ಯಪಾಲರೂ ಕೂಡ ಅವರ ಭಾಷಣದಲ್ಲಿ ಹೇಳಿದ್ದಾರೆ. ಕಳೆದ ಮಾರ್ಚಿ 1969ನೇ ಇಸವಿ ಮಾರ್ಚಿ ಅಂತ್ಯದಲ್ಲಿ ಎಲ್ಲಾ ವಿಧದ ಸುಮಾರು 20,000 ಸಹಕಾರ ಸಂಸ್ಥೆಗಳು ಇದ್ದುವು. ಮತ್ತು ಒಟ್ಟು ಸದಸ್ಯತ್ವ ಸಂಖ್ಯೆ 39 ಲಕ್ಷಗಳಷ್ಟಿದ್ದಿತು ಎಂದು ಹೇಳಿದ್ದಾರೆ. ಆದರೆ ನಮ್ಮ ಎದುರಿಗೆ ಇರತಕ್ಕ ಏನು ಒಂದು ಮಹೋದ್ದೇಶವನ್ನು ಸಾಧಿಸಬೇಕೆಂದು ಇದೆಯೋ ಅದು ಸಾಧನೆಯಾಗುವುದೇ, ಈ ಸಹಕಾರ ತತ್ವದಲ್ಲಿ ಸಾಮಾನ್ಯ ರೈತರಿಗೆ, ಸಾಮಾನ್ಯಜನರಿಗೆ ಅನುಕೂಲವಾಗುತ್ತದೆಯೇ, ಅವರ ಸ್ಥಿತಿಗತಿಗಳು ಉತ್ತಮವಾಗುತ್ತದೆಯೋ ಎನ್ನುವುದನ್ನು ನೋಡಬೇಕು. ರೈತರಿಗೆ ಎಲ್ಲ ಅನುಕೂಲತೆಗಳೂ ಸಿಕ್ಕುವಂತಾಗಬೇಕು. ಗೊಬ್ಬರವಾಗಲಿ, ಮತ್ತು ಬೇಕಾಗಿರತಕ್ಕ ಸಾಲಗಳಾಗಲಿ ಸಮಯಕ್ಕೆ ಸರಿಯಾಗಿ ಸಿಕ್ಕುತ್ತದೆಯೇ ಎನ್ನುವುದನ್ನು ನೋಡಬೇಕು. ಈವೊತ್ತು ಎಷ್ಟು ಸೊಸೈಟಿಗಳು ಮುಳುಗುತ್ತಾ ಇವೆ, ಎನ್ನುವುದನ್ನೂ ನೋಡುತ್ತಿದ್ದೇವೆ. ಎಷ್ಟು ಸೊಸೈಟಿಗಳು ಮುಳುಗಿವೆ ಎಷ್ಟು ಜನ ಇದರಲ್ಲಿ ಸಿಕ್ಕಿಕೊಂಡಿರುತ್ತಾರೆ, ಎಷ್ಟು ಕೋಟಿ ರೂಪಾಯಿಗಳ ವ್ಯವಹಾರ ಈ ಸೊಸೈಟಿಗಳಲ್ಲಿ ನಡೆಯುತ್ತಾ ಇದೆ ಇದರ ಒಂದು ಲೆಕ್ಕಾಚಾರವನ್ನು ತಾವು ಕೊಡಬೇಕಾಗಿದೆ. ಈವೊತ್ತು ಒಂದು ಸೊಸೈಟಿ ಅಲ್ಲ ಅನೇಕ ಸೊಸೈಟಿಗಳು ಮುಳುಗುತ್ತಾ ಇವೆ. ಏತಕ್ಕೆಂದರೆ ಅಲ್ಲಿ ಪ್ರಾಮಾಣಿಕರಾದ ವ್ಯಕ್ತಿ ಇಲ್ಲ. ಮತ್ತು ಪ್ರಾಮಾಣಿಕರಾದಂಥ ವ್ಯಕ್ತಿಗಳು ಅಲ್ಲಿ ಇರಲಿಕ್ಕೂ ಸಾಧ್ಯ

ಇಲ್ಲ. ಪ್ರಾಮಾಣಿಕನಾದ ವ್ಯಕ್ತಿ ಎಂದರೆ ಅವನು ಇತರರಿಗೆ ಆದರ್ಶ ವ್ಯಕ್ತಿ ಆಗಿರಬೇಕು. ಇದರ ಬಗ್ಗೆ ನಾನು ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಒಂದು ಸೊಸೈಟಿಯಲ್ಲಿ ಒಬ್ಬರು ಅಧ್ಯಕ್ಷರ ಮೇಲೆ ಒಂದು ದುರ್ವ್ಯವಹಾರ ಇತ್ತು. ಅವರ ಮೇಲೆ ಕೋರ್ಟಿನಲ್ಲಿ ಒಂದು ಕೇಸು ಇತ್ತು. ಅವರಿಗೆ ಅರೆಸ್ಟ್ ವಾರೆಂಟ್‌ನು ಸರ್ವ್ ಮಾಡಿದ್ದರು. ಅವರು ಅರೆಸ್ಟ್ ವಾರಂಟ್ ಬಂದಿದೆ ಎಂದು ತಿಳಿದುಕೊಂಡು ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಬೆಂಗಳೂರಿಗೆ ಬಂದರು. ಅವರು ಪ್ರತಿದಿನವೂ ಇಲ್ಲಿಗೆ ಬಂದು ಪಬ್ಲಿಕ್ ಗ್ಯಾಲರಿಯಲ್ಲಿ ಕುಳಿತು ಕೇಳುತ್ತಿದ್ದರು. ನಾನೂ ನೋಡಿದ್ದೇನೆ. ನಾನು ಊರಿಗೆ ಹೋದಮೇಲೆ ಈ ವಿಷಯ ಗೊತ್ತಾಯಿತು. ಅವರು ಅರೆಸ್ಟ್ ವಾರಂಟ್ ಬಂದಿದ್ದನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ಇಲ್ಲಿಗೆ ಬಂದಿದ್ದರು ಎಂದು ಗೊತ್ತಾಯಿತು. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರು ಇದ್ದಾರೋ ಆ ಮಂತ್ರಿಗಳನ್ನು ಮರೆಹೊಕ್ಕು ಪಾರು ಮಾಡಿಸಿಕೊಳ್ಳಲು ಹೋಗಿದ್ದಾರೆ ಎಂಬುದು ಗೊತ್ತಾಯಿತು. ಅವರ ಮೇಲೆ ಇರತಕ್ಕಂಥ ಕೇಸನ್ನು ಮಂತ್ರಿಗಳ ಕೈವಾಡದಿಂದ ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಇನ್ನೊಂದು ಉದಾಹರಣೆ ಹೇಳುತ್ತೇನೆ. ಇನ್ನೊಂದು ದೊಡ್ಡ ಸಹಕಾರಿ ಸಂಸ್ಥೆ. ಅಲ್ಲಿರತಕ್ಕಂಥ ರಿಕಾರ್ಡುಗಳನ್ನು ಸುಟ್ಟು ಹಾಕಿದ್ದಾರೆ ಕಬ್ಬಿಣದ ಅಲ್ಮೆರಾದಲ್ಲಿರತಕ್ಕಂಥಾ ರಿಕಾರ್ಡುಗಳನ್ನು ಸುಡಬೇಕಾದರೆ ಕಾರಣ ಏನು? ಅದರಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಮಾಡಿದ್ದಾರೆ. ಆ ರಿಕಾರ್ಡುಗಳೆಲ್ಲಾ ಸಿಕ್ಕಬಾರದು ಎನ್ನುವ ಉದ್ದೇಶದಿಂದ ಸುಟ್ಟುಹಾಕಿದ್ದಾರೆ. ಅದರ ಬಗ್ಗೆ ಸರಿಯಾದ ಲೆಕ್ಕಪತ್ರಗಳೇ ಸಿಕ್ಕಲಿಲ್ಲ. ಈಗ ಅವರ ಮೇಲೆ ಏನೊಂದು ಕ್ರಮಗಳೂ ಜರುಗಿಲ್ಲ. ಕಾರಣ ಅಲ್ಲಿರುವವರು ಅವರ ಪಕ್ಷದವರೇ ಆಗಿರುವುದರಿಂದ ಅವರನ್ನು ಏನೂ ಮಾಡಲಿಲ್ಲ. ಈ ರೀತಿ ಅವರಿಗೆ ಯಾರು ಬೇಕಾಗಿದ್ದಾರೆ ಅವರನ್ನು ಬಿಟ್ಟು ಬಿಡುತ್ತಾರೆ. ಅವರಿಗೆ ಯಾರು ಬೇಕಿಲ್ಲವೋ ಅವರಿಗೆ ಪೋಲೀಸಿನವರು ಜಬರ್‌ದಸ್ತು ಮಾಡಿ ಅವರಿಗೆ ತೊಂದರೆ ಕೊಡುತ್ತಾರೆ. ಈ ರೀತಿ ತಪ್ಪು ಮಾಡುವವರಿಗೆ ಶಿಕ್ಷೆ ಕೊಡುತ್ತಾ ಇಲ್ಲ. ಅವರು ಯಾವ ಪಕ್ಷದಲ್ಲೇ ಇರಲಿ ಪಕ್ಷಭೇದಭಾವ ಇಲ್ಲದೆ ಯಾರು ತಪ್ಪು ಮಾಡುತ್ತಾರೋ ಅವರಿಗೆ ಸರಿಯಾದ ಶಿಕ್ಷೆ ಕೊಡಬೇಕು. ಇಲ್ಲದೇ ಹೋದರೆ ಅವರು ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಇದ್ದರೆ ಆ ಸಹಕಾರಿ ಸಂಸ್ಥೆಗಳು ಉದ್ಧಾರವಾಗಲಿಕ್ಕಿಲ್ಲ. ಇಷ್ಟು ವಿಚಾರವನ್ನು ತಿಳಿಸಿ ಈ ಒಂದು ಆಯವ್ಯಯದ ಬಡ್ಜೆಟ್ಟು ನಮ್ಮ ರಾಜ್ಯಕ್ಕೆ ಯಾವರೀತಿಯಾಗಿಯೂ ಆಶಾದಾಯಕವಾಗಿಲ್ಲ, ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair]

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್ (ಮುಂಡರಗಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಆರ್ಥಿಕ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡಿಸಿದಂಥಾ 1971ನೇ ವರ್ಷದ ಆಯವ್ಯಯದ ಪತ್ರವನ್ನು ನಾನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಹೇಳಬಯಸುತ್ತೇನೆ. ಇದಕ್ಕೆ ಮೊದಲು ಅನೇಕ ಸನ್ಮಾನ್ಯ ಸದಸ್ಯರು ಇಂದು ಮಾತನಾಡುತ್ತಾ ಅನೇಕ ಸೊಸೈಟಿಗಳ ಬಗ್ಗೆ ಕೆಲವು ಮಂತ್ರಿಗಳ ಬಗ್ಗೆ, ಕೆಲವು ಸದಸ್ಯರ ಬಗ್ಗೆ ಕೆಲವು ಆರೋಪಣೆಗಳನ್ನು ಮಾಡಿದ್ದಾರೆ. ಆಡಳಿತದಲ್ಲಿರುವವರ ಮೇಲೆ ಆರೋಪಣೆ ಮಾಡಿದ್ದಾರೆ. ಒಂದು ಸೊಸೈಟಿ ಇದ್ದ ಕಡೆ ಮತ್ತೊಂದು ಸೊಸೈಟಿಯನ್ನು ಸ್ಥಾಪಿಸಲು ಕಾರಣ ಏನು ಎನ್ನುವುದನ್ನೂ ತಿಳಿಸಿದ್ದಾರೆ. ಅದು ಸತ್ಯಕ್ಕೆ ದೂರವಾದದ್ದು. ಒಂದು ಸೊಸೈಟಿ ಇದ್ದ ಕಡೆ ಮತ್ತೊಂದು ಸೊಸೈಟಿಯನ್ನು ಪ್ರಾರಂಭ ಮಾಡುವ ಕಾರಣ ಮತ್ತೇನೂ ಇಲ್ಲ. ಈ ಸೊಸೈಟಿಯಿಂದ ಜನತೆಗೆ ನಿಷ್ಪಕ್ಷಪಾತವಾದ ಸಹಾಯ ಸಿಕ್ಕುವುದಿಲ್ಲ ಎನ್ನುವುದು ಒಂದು. ಮತ್ತೊಂದು ಉದ್ದೇಶ ಹೆಚ್ಚು ಸೌಲಭ್ಯಗಳು ಸಿಕ್ಕಲಿ ಎಂದು ಈ ಸಂಖ್ಯೆಯನ್ನು ಹೆಚ್ಚಿಸಿದ್ದಾರೆಯೇ ಹೊರತು ಅವರು ಬೇರೆ ಭೇದಭಾವದಿಂದ ಇನ್ನೊಂದು ಸೊಸೈಟಿಯನ್ನು ಮಾಡಲಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ. ಆದರೆ ಬೊಮ್ಮಾಯಿ ವಕೀಲರು ಕಾಂಗ್ರೆಸ್ಸಿಗೆ ಬಂದರು ಎನ್ನುವ ಕಾರಣದಿಂದ ಜನತಾ ಅಧ್ಯಕ್ಷ ಪದವಿಯನ್ನು ಕೊಟ್ಟರು ಎಂದು ಹೇಳಿದ್ದಾರೆ. ಶ್ರೀಮಾನ್ ಬೊಮ್ಮಾಯಿಯವರು ಕಾಂಗ್ರೆಸ್ಸಿನ ವಿರೋಧ ಪಕ್ಷದಲ್ಲಿದ್ದಾಗಲೇ ಎರಡು ವರ್ಷದ ಮೊದಲು ಈ ಜನತ ಬಜಾರ್‌ನ ಡೈರೆಕ್ಟರಾಗಿದ್ದರು ಎನ್ನುವುದನ್ನು ಮರೆಯಬಾರದು. ಅವರು ನಮ್ಮ ಕಾಂಗ್ರೆಸ್ ಪಕ್ಷವನ್ನು ಸೇರುವುದಕ್ಕೆ ಮುಂಚೆ ಜನತಾ ಬಜಾರ್ ಎಲೆಕ್ಷನ್‌ನಲ್ಲಿ ಬಹುಮತದಿಂದ ಆರಿಸಿ ಛೇರ್ಮನ್ ಆಗಿದ್ದಾರೆಯೇ ಹೊರತು ಕಾಂಗ್ರೆಸ್ಸಿಗೆ ಸೇರಿದ ನಂತರ ಜನತಾ ಬಜಾರ್‌ನ ಛೇರ್ಮನ್ ಆಗಿಲ್ಲ. ಎನ್ನುವುದನ್ನು ಸ್ಪಷ್ಟಡಿಸುತ್ತೇನೆ. ಮತ್ತು ರಾಷ್ಟ್ರದ ಸೂತ್ರಗಳನ್ನು ಹೊತ್ತಿರತಕ್ಕಂಥ ಶ್ರೀಮಾನ್ ಹೆಗಡೆಯವರು ತುಂಬಾ ಅಭಿಮಾನಿಗಳು ಎಂದು

(ಶ್ರೀ ಸಿ. ಎಂ ಚುರ್ಚಿಹಾಳ್‌ಮಠ್)

ನಾವು ಕಾಣುತ್ತಿದ್ದೇವೆ. ಅನೇಕ ಪ್ರಗತಿಗಳು ಇನ್ನೂ ಸಾಧಿಸಬೇಕಾದ್ದು ಇದೆ ಎನ್ನುವ ಬಗ್ಗೆ ಅವರು ಹೇಳಿದ್ದಾರೆ. ಇದರ ಜೊತೆಗೆ ತಲಾ ಮನುಷ್ಯನ ಆದಾಯ ಎಷ್ಟು ಇದೆ, ಆಹಾರಧಾನ್ಯಗಳ ಉತ್ಪಾದನೆ ಮತ್ತು ಅವುಗಳ ಸರಬರಾಜು, ಕುಡಿಯುವ ನೀರಿನ ಯೋಜನೆ, ನೀರಾವರಿ ಯೋಜನೆ ಲಿಫ್ಟ್ ಇರ್ರಿಗೇಷನ್ ಯೋಜನೆ ಮೊದಲಾದ ಸಮಸ್ಯೆಗಳನ್ನು ಕೂಲಂಕಷವಾಗಿ ಅಂಕಿಸಂಖ್ಯೆಗಳ ಮೂಲಕ, ವಿವರಿಸಿದ್ದಾರೆ. ಅವರು ಈ ಒಂದು ಮಾತನ್ನು ನಿಷ್ಪಕ್ಷಪಾತವಾಗಿ ಒಪ್ಪಿಕೊಂಡಿದ್ದಾರೆ. ರಾಜ್ಯದಲ್ಲಿ ಆಗಬೇಕಾದಷ್ಟು ಕಾರ್ಯ ಬಹಳ ಇದೆ. ಆಗಬೇಕಾದಷ್ಟು ಪ್ರಗತಿ ಆಗದಿದ್ದರೂ ಇನ್ನೂ ಆಗುವಂಥ ಪ್ರಗತಿ ಬೇಕಾದಷ್ಟು ಇದೆ. ಈ ಒಂದು ಉತ್ಪಾದನೆಯ ದೃಷ್ಟಿಯನ್ನಿಟ್ಟುಕೊಂಡು ಈ ವರ್ಷದ ಆಯವ್ಯಯವನ್ನು ಮಂಡಿಸಿದ್ದು ಬಹಳ ಸಂತೋಷಕರ.

6–00 P.M.

ಕುಡಿಯುವ ನೀರಿನ ಬಾವಿ ವಿಷಯ ತೆಗೆದುಕೊಂಡರೆ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೆಗೆಯಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಕೆಲವು ಕಡೆ ತೋಡುವ ಬಾವಿಗಳಲ್ಲಿ ನೀರೇ ಬರುತ್ತಿಲ್ಲ. ಅನೇಕ ಕಡೆ ಇರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಕಡ್ಡಾಯವಾಗಿ ತೆಗೆಸಿ ಇಲ್ಲಿನ ಜನಕ್ಕೆ ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಅನೇಕ ಕಡೆ ರೇಷನ್ ಕಾರ್ಡು ಮೂಲಕ ಕಾಳನ್ನು ಹೇಗೆ ತೆಗೆದುಕೊಳ್ಳುತ್ತಾರೋ ಹಾಗೆ ರೇಷನ್ ಕಾರ್ಡು ಇಟ್ಟುಕೊಂಡು ನೀರನ್ನು ಪಡೆಯುವ ಕೆಲವು ಗ್ರಾಮಗಳೂ ಇವೆ. ನಮ್ಮ ಭಾಗದಲ್ಲಿ ಇರುವ ಹಳ್ಳಿಗುಡಿ (Halligudi) ಹಳ್ಳಿಕೇರಿ ಮತ್ತು ಕಣಗಿನಹಾಳ ಗ್ರಾಮಗಳಲ್ಲಿ ಪ್ರತಿಯೊಂದು ಕಡೆಯಲ್ಲೂ ರೇಷನ್ ಕಾರ್ಡು ಮೂಲಕ ನೀರನ್ನು ಪಡೆಯಬೇಕಾದ ಪರಿಸ್ಥಿತಿ ಬಂದು ಒದಗಿದೆ. ಇಲ್ಲಿ ಸಮಾರು 200 ಅಡಿಗಳವರೆಗೂ ಬಾವಿ ತೋಡಿಸಿದರೂ ನೀರು ಬರುತ್ತಿಲ್ಲ. ಇಂತಹ ಗ್ರಾಮಗಳು ಅನೇಕ ಇವೆ. ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರು ಜನಗಳಿಗೆ ಬಹಳ ಮುಖ್ಯವಾದುದು.

ಇನ್ನು ನಮ್ಮ ಅರ್ಥ ಮಂತ್ರಿಗಳು ನಿರುದ್ಯೋಗದ ಸಮಸ್ಯೆ ಬಗ್ಗೆ ಹೇಳಿ ಇದನ್ನು ಇನೂ ಸರಿಪಡಿಸಲು ಸಾಧ್ಯವಾಗಿಲ್ಲ ಮತ್ತು ನಿರುದ್ಯೋಗಿಗಳಾಗಿರುವವರಲ್ಲಿ ಅನೇಕರಿಗೆ ಇನ್ನೂ ಉದ್ಯೋಗಗಳನ್ನು ಕೊಡಲು ಆಗಲಿಲ್ಲ ಮತ್ತು ನಿರುದ್ಯೋಗಿಗಳ ಸಂಖ್ಯೆ ಬಹಳ ದೊಡ್ಡದಾಗಿ ಉಳಿದಿದೆ ಮತ್ತು ಎಲ್ಲರಿಗೂ ಕೆಲಸಗಳನ್ನು ಕೊಡಲು ಸಾಧ್ಯವಿಲ್ಲ ಎಂದು ಅವರು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

Twenty-second Report of the Business Advisory Committee

MR. SPEAKER.—Hon. Member may continue his speech tomorrow it is now past Six O'clock.

Now, before we adjourn, I would like to put before you the third item in today's agenda.

Hon. Member Sri Siddaveerappa wanted to have some clarification and that clarification was given and I hope he is satisfied with it.

I now present to the Hon. House, the 22nd report of the Business Advisory Committee.

SRI D. MANJUNATH (Deputy-speaker).—I beg to move :

"That the House agrees with the Twenty Second Report of the Business Adivsory Committee."